ಸಂಪುಟ 15

ಸಂಚಿಕೆ 5

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

31 ಜನವರಿ 1993

ರೂ. 2.00

ಕಾಂಗ್ರೆಸ್(ಐ) ತೆಳುಬಣ್ಣದ ಕಾವಿ ಪಡೆಯಾಗುತ್ತಿದೆ

- ಸುರ್ಜಿತ್

ಪ್ರಧಾನಮಂತ್ರಿಗಳ, ಅವರ ವಿವಿಧ ಮಂತ್ರಿಗಳ ಹೇಳಿಕೆಗಳನ್ನು ನೋಡಿದರೆ ಶ್ರೀಯುತ ರಾವ್‌ರವರ ನೇತೃತ್ವದಲ್ಲಿ ಕಾಂಗ್ರೆಸ್(ಐ) "ತೆಳು ಬಣ್ಣದ ಕಾವಿಪಡೆ" ಯಂತೆ ಕಾಣುತ್ತದೆ ಎಂದು ಸುರ್ಜಿತ್ ವರ್ಣಿಸಿದ್ದಾರೆ. ಒಂದೆಡೆ ಕೋಮು ಶಕ್ತಿಗಳೊಡನೆ ರಾಜಿ ಮಾಡಿಕೊಂಡು ಇನ್ನೊಂದೆಡೆ ಜಾತ್ಯಾತೀತತೆಯ ಬಗ್ಗೆ ಸೋಗು ಹಾಕುವುದನ್ನು ಕೂಡಾ ಬಿಟ್ಟು ಈಗ ಬಿಜೆಪಿ ಕೂಟದೊಂದಿಗೆ ಸ್ಪರ್ಧೆಗೆ ಇಳಿದಂತೆ ಕಾಣುತ್ತದೆ ಎಂದು ಅವರು ಹೇಳಿದ್ದಾರೆ.

ಮುಂಬೈಯಲ್ಲಿ ಭಯಾನಕ ಘಟನೆಗಳು ಯೋಜಿತವಾಗಿ ನಡೆದು ಧಾರ್ಮಿಕ ಹಾಗೂ ಭಾಷಿಕ ಅಲ್ಪಸಂಖ್ಯಾತರನ್ನು ಹೆಕ್ಕಿ-ಹೆಕ್ಕಿ ಧಾಳಿ ಮಾಡಿದ್ದರೂ, ಈ ಗೂಂಡಾ ವ್ಯಕ್ತಿಗಳೊಂದಿಗೆ ಮೇಲಿನ ವರ್ಗಗಳ ಜನಗಳೂ ಸೇರಿಕೊಳ್ಳುವ ಮೂಲಕ ಫ್ಯಾಸಿಸ್ಟ್ ಮನೋಭಾವ ಪ್ರದರ್ಶನಗೊಳ್ಳುತ್ತಿರುವುದು ಕಂಡು ದೇಶದ ನಾಗರಿಕರೆಲ್ಲಾ ಚಿಂತೆಗೀಡಾಗಿದ್ದರೂ, ದೆಹಲಿ, ಮೀರತ್, ಅಹಮದಾಬಾದ್ ಮುಂತಾದೆಡೆ ಇದ್ದಕ್ಕಿದ್ದಂತೆ ಗಲಭೆಗಳು ಭುಗಿಲೆನ್ನುತ್ತಾ ಜನಗಳ ಆಹುತಿ ಪಡೆಯುತ್ತಿದ್ದರೂ ನೀವು ನಂಬಿದರೆ ನಂಬಿ ಬಿಟ್ಟರೆ ಬಿಡಿ, ನಮ್ಮ ಪ್ರಧಾನ ಮಂತ್ರಿಗಳಂತೂ ಪರಿಸ್ಥಿತಿ ಸುಧಾರಿಸಲು ಯಾವುದೇ ತೀವ್ರ ಕ್ರಮದ ಅಗತ್ಯವಿಲ್ಲವೆಂದು ಭಾವಿಸುತ್ತಾರೆ, ಏಕೆಂದರೆ ಅವರ ಪ್ರಕಾರ ಪರಿಸ್ಥಿತಿ ದೇಶವೆಲ್ಲೆಡೆ ಸಾಮಾನ್ಯಗೊಂಡಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಪ್ರಧಾನಿಗಳನ್ನು ತೀವ್ರವಾಗಿ ಟೀಕಿಸಿದ್ದಾರೆ ಎಲ್ಲವೂ ಸಾಮಾನ್ಯವಾಗಿದೆ ಎಂಬ ಭಾವನೆಯನ್ನು ಹರಡಲು ಸರಕಾರ ಪ್ರಜ್ಞಾಪೂರ್ವಕ ಪ್ರಯತ್ನ ನಡೆಸಿದೆ ಎಂದು ಅವರು ಹೇಳಿದ್ದಾರೆ.

ಡಿಸೆಂಬರ್ 6ರ ಘಟನೆಯ ನಂತರ ಸರಕಾರ ಕೋಮುವಾದಿಗಳು ಹಿಂಜರಿಯುವಂತೆ ಮಾಡುವ ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಬದಲಾಗಿ ಅಯೋಧ್ಯೆಯಲ್ಲಿ ನೆರೆದ ಜನಜಂಗುಳಿಯನ್ನು ಹತೋಟಿಗೆ ತರಲಾಗಲಿಲ್ಲ ಎಂದು ಆರಂಭದಲ್ಲಿ ತಪ್ಪಿತಸ್ಥರಂತೆ ಮಾತನಾಡುತ್ತಿದ್ದ ಖೋಟಾ-ಹಿಂದೂವಾದಿಗಳು ಈಗ ತಮ್ಮ ಕೃತ್ಯಗಳಿಗೆ ಯಾವುದೇ ರೀತಿಯ ಪಶ್ಚಾತ್ತಾಪ ತೋರಿಸದೆ ಮತ್ತೆ ಭಂಡತನ ಪ್ರದರ್ಶಿಸುವ ಧೈರ್ಯ ತೋರುತ್ತಿದ್ದಾರೆ. ವಾರಣಾಸಿ, ಮಥುರಾದ ಮಸೀದಿಗಳ ನಾಶದ ಬಗ್ಗೆಯೂ ಮಾತನಾಡಲಾರಂಭಿಸಿದ್ದಾರೆ. ಕೆಲವರು ತಾಜ್‌ಮಹಲ್, ಜುಮ್ಮಾ ಮಸೀದಿಯನ್ನೂ ತಮ್ಮ ಪಟ್ಟಿಗೆ ಸೇರಿಸಿಕೊಂಡಿದ್ದಾರೆ. ಈ ಶಕ್ತಿಗಳು ತಮಗೆ ಬೇಕಾದಾಗಲೆಲ್ಲಾ ರಂಗ ಮಂಟಪದ ಮಧ್ಯಕ್ಕೆ ಎಳೆಯುವ ಸಾಧುಗಳಂತೂ ಸಂವಿಧಾನವನ್ನೇ ರದ್ದುಪಡಿಸುವ ಮಾತನಾಡುತ್ತಿದ್ದಾರೆ. ದಿಲ್ಲಿಯ ಬಿಜೆಪಿ ಎಂಪಿ ಖುರಾನಾ "ಬಾಂಗ್ಲಾದೇಶ"ಗಳನ್ನು ಓಡಿಸುವ "ಸಮರಧುಂಧುಬಿ" ಮೊಳಗಿಸಿದ್ದಾರೆ. ಇಂತಹ ಸನ್ನಿವೇಶದಲ್ಲಿ ಪ್ರಧಾನಮಂತ್ರಿಗಳರವರು ಇಂತಹ ಚಟುವಟಿಕೆಗಳನ್ನು ತಡೆಯಲು ದೃಢ ಕ್ರಮ ಕೈಗೊಳ್ಳಬೇಕೆಂದು ನಿರೀಕ್ಷಿಸುವುದು ಸಹಜವೇ. ಆದರೆ ನರಸಿಂಹರಾಯರು ಮಾಡಿದ್ದೇನು? ಬಾಬ್ರಿ ಮಸೀದಿ ಇದ್ದ ಜಾಗದಲ್ಲಿ ಮೊದಲು ರಾಮಮಂದಿರ ಮಾತ್ರವೇ ಇತ್ತು, ಬೇರೆ ಯಾವುದೇ ಹಿಂದೂ ದೇವಸ್ಥಾನವಿತ್ತೇ ಎಂದು ಸುಪ್ರಿಂ ಕೋರ್ಟನ್ನು ಕೇಳಿದ್ದಾರೆ! ಅಂದರೆ ಬೇರೆಡೆ ಇಂತಹ ವಿವಾದಗಳನ್ನು ಎಬ್ಬಿಸಿ ಅಲ್ಲಿ ಅಗೆತದ ಕೆಲಸ ನಡೆಸಿ, ವಿವಿಧ ಮಸೀದಿಗಳನ್ನು ನೆಲಸಮ ಮಾಡಿಸಲು ಅವಕಾಶ ಕಲ್ಪಿಸಿಕೊಟ್ಟಂತೆ ಎಂದು ಸುರ್ಜಿತ್ ಹೇಳಿದ್ದಾರೆ.

ಬೆನ್ನುಲುಬಿಲ್ಲದ ಈ ಪಕ್ಷ ಮತಗಳ ಲೆಕ್ಕಾಚಾರದಲ್ಲಿದೆ


ಬಿಜೆಪಿ ಕೂಟ ಮತ್ತು ಕಾಂಗ್ರೆಸ್(ಐ) ನಡುವೆ ಈಗ ಇರುವ ವಿವಾದ ದೇವಸ್ಥಾನವನ್ನು ಯಾರು ಕಟ್ಟುವುದೆಂಬ ಬಗ್ಗೆ ಮಾತ್ರವೇ. ಬಿಜೆಪಿ ಅಧ್ಯಕ್ಷ ಎಂ.ಎಂ.ಜೋಷಿ ಇದನ್ನು ತಕ್ಷಣ ಅರಿತು ರಾಮಮಂದಿರ ಆಂದೋಲನವನ್ನು ಕಾಂಗ್ರೆಸ್(ಐ) ಅಪಹರಿಸಲು ಬಿಡುವುದಿಲ್ಲ ಎಂದು ಹೇಳಿರುವುದು ಗಮನಾರ್ಹ.

ಮುಂದುವರೆದು ಸುರ್ಜಿತ್ ಅವರು ಕಾಂಗ್ರೆಸ್(ಐ) 1991ರ ಚುನಾವಣೆಗಳ ಕಾಲದಲ್ಲಿ ನೀಡಿದ ವಾಗ್ದಾನವನ್ನು ಮುರಿದಿದೆ, ಸ್ವಾತಂತ್ರ್ಯ ಹೋರಾಟದ, ಗಾಂಧೀಜಿಯ ಬಲಿದಾನದ ಪಾಠಗಳನ್ನು ಮರೆತಿದೆ ಎನ್ನುತ್ತಾ ದೇಶದ ಐಕ್ಯತೆಯೇ

ಪುಟ 8 ಕ್ಕೆ.........

ಮಾನವ ಸಮುದ್ರವೇ ಕೋಮುಸೌಹಾರ್ದಕ್ಕಾಗಿ ತೊಟ್ಟ ಬಂಗಾಳದ ಮಾನವ ಸರಪಳಿ

ದೇಶದ ಪ್ರಜಾಪ್ರಭುತ್ವ ಆಂದೋಲನ ಕೇವಲು ಬುರುಜನಂತಿರುವ ಪಶ್ಚಿಮಬಂಗಾಳ ಕೋಮು ಸೌಹಾರ್ದಕ್ಕೂ ಮಾದರಿಯಾದ ರಾಜ್ಯಗಳಲ್ಲೊಂದು. ಆದರೆ ಈ ಜನವರಿ 26 ರಂದು ಇಂತಹ ರಾಜ್ಯಕ್ಕೂ ಅಪೂರ್ವವಾದ ಘಟನೆ ನಡೆಯಿತು. 2 ಕೋಟಿ ಜನ ಕೈ ಕೈ ಬೆಸೆದು ರಾಜ್ಯದ ದಕ್ಷಿಣ ತುದಿಯಲ್ಲಿರುವ ಕಾಡುಗಳಿಂದ ಉತ್ತರದ ಮೂಲೆಯಲ್ಲಿರುವ ಹಿಮಾಚ್ಛಾದಿತ ಗುಡ್ಡಗಾಡು ಪ್ರದೇಶದವರೆಗೆ 10 ಸಾವಿರ ಕಿ. ಮೀ. ಅಂತರವನ್ನು ತುಂಬಿದರು- ದೇಶದ ಹಲವಡೆ ಕೋಮುದಳ್ಳುರಿಯಲ್ಲಿ ಬೆಂದ-ನೊಂದ ಮನಗಳಿಗೆ ಆಶಾಜ್ಯೋತಿ ತೋರಿದರು. ಎಡರಂಗ ಪಕ್ಷಗಳಲ್ಲದೆ ಇತರ ಎಡ-ಜಾತ್ಯಾತೀತ ಶಕ್ತಿಗಳೂ 3605 ಬ್ಲಾಕ್ ಮಟ್ಟದ ಪಂಚಾಯತುಗಳು, 114 ನಗರಸಭೆಗಳು, 3 ಮಹಾ ನಗರಸಭೆಗಳು ಹಾಗೂ ಎಲ್ಲಾ ಜಿಲ್ಲಾ ಕೇಂದ್ರ ಸ್ಥಳಗಳ ಮೂಲಕ ಹಾದು ಬಿಹಾರ, ಒರಿಸ್ಸಾದ ಗಡಿ ಪ್ರದೇಶಗಳನ್ನೂ ಬೆಸೆದ ಈ ಅಪೂರ್ವ ಮಾನವ ಸರಪಳಿಯಲ್ಲಿ ಕೈ ಜೋಡಿಸಿದರು.



ಒಡೆದ ಹೃದಯಗಳನ್ನು ಬೆಸೆದ ಮಾನವ ಸರಪಳಿ

ಡಿಸೆಂಬರ್ 26, ಗಣರಾಜ್ಯೋತ್ಸವ.

ಅದೊಂದು ಅಪೂರ್ವ ದೃಶ್ಯ, ಕಣ್ಣು ಹಾಯಿಸಿದೆಡೆಲ್ಲಾ ಕೈಕೈ ಬೆಸೆದು ನಿಂತ ಜನ ನಮ್ಮಲ್ಲಿರುವುದು ಮಾನವ ರಕ್ತ ಎಂಬುದನ್ನು ಸಾರಿ ಸಾರಿ ಹೇಳಿದರು. ದೇಶದಾದ್ಯಂತ ಕೋಮು ಶಕ್ತಿಗಳು ಮುಗ್ಧ ಜನರ ಬದುಕನ್ನು ಇಲ್ಲದಾಗಿಸುತ್ತಿರುವಾಗ ಏರ್ಪಡಿಸಿದ್ದ 'ಮಾನವ ಸರಪಳಿ' ನಿಮ್ಮೊಂದಿಗೆ ನಾವಿದ್ದೇವೆ ಎಂದು ಅವರಿಗೆ ಮನದಿ ಮಾಡಿಕೊಟ್ಟಿತು.

ಸಂಜೆ 4.30 ಕ್ಕೆ ಸರಿಯಾಗಿ 'ಸಿಕ್ಕೆ ದಿನ, ಸಣ್ಣ ಜನ, ದೆಟ್ಟದಂತೆ ಬಂದರು' ಎಂಬ ಕವಿವಾಣಿಯಂತೆ ಬೆಂಗಳೂರಿನ ಮುಖ್ಯ ಬೀದಿಯಲ್ಲಿ ನಿಂತ ಸಂಗಾತಿಗಳು ಅಯೋಧ್ಯೆ ಘಟನೆಯಿಂದ ನೊಂದ ಜನರ ಕಣ್ಣೀರಿಗೆ ಸಾಂತ್ವನ ಹೇಳಿದರು. ಬ್ಯಾಟರಾಯನಪುರದಿಂದ ಮೈಸೂರು ರಸ್ತೆ, ಕೃಷ್ಣರಾಜ ಮಾರುಕಟ್ಟೆ, ಪುರಭವನ, ರಿಚ್ಮಂಡ್ ಸರ್ಕಲ್, ಶಿವಾಜಿನಗರ ರಸೆಲ್‌ಮಾರ್ಕೆಟ್ ಹಾದು ಅಲಸೂರಿನವರೆಗೆ ಏಕತೆಯ ಘೋಷಣೆಗಳು ಚಿಮ್ಮಿದವು.

'ರಾಷ್ಟ್ರೀಯ ಏಕತಾ ಆಂದೋಲನ ಸಮಿತಿ ನೀಡಿದ್ದ ಕರೆಯ ಮೇರೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸೇರಿದಂತೆ ಹಲವಾರು ಪಕ್ಷಗಳು, ಸಂಘಟನೆಗಳು ಮಾನವ ಸರಪಳಿಯಲ್ಲಿ ಕೈ ಕೂಡಿಸಿ ಇದಕ್ಕೆ ಅರ್ಥಪೂರ್ಣತೆಯನ್ನು ತಂದುಕೊಟ್ಟಿದ್ದರು.'

'ಧರ್ಮದ ಹೆಸರಲ್ಲಿ ಅಧಿಕಾರಶಾಹಿಗಳು ದೇಶವನ್ನು ಸುಡುತ್ತಿದ್ದಾರೆ' ಎಂದು ಮನಗಂಡ ಜನ ಪಕ್ಷಭೇದವಿಲ್ಲದ ಮಾನವ ಸರಪಳಿಗೆ ಧುಮುಕಿದರು. ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ ಅಧ್ಯಕ್ಷ, ಹೆಸರಾಂತ ಚಲನ ಚಿತ್ರ ನಿರ್ದೇಶಕ ನಾಟಕಕಾರ ಗಿರೀಶ್‌ಕಾರ್ನಾಡ್, ಕಲಾವಿದ ಎಸ್.ಜಿ. ವಾಸುದೇವ್ ನಟಿ ಜಿ. ಕೆ. ಗೋವಿಂದರಾವ್, ಬರಹಗಾರ ಡಾ.ಕೆ. ಮರುಳ ಸಿದ್ದಪ್ಪ ಸೇರಿದಂತೆ ನೂರಾರು ಜನರು ಸರಪಳಿಯೊಡನೆ ಸೇರಿದರು.

15 ಕಿ.ಮೀ ಉದ್ದಕ್ಕೂ ನಡೆದ ಮಾನವ ಸರಪಳಿ ಬೆಂಗಳೂರಿನ ಜನತೆಯನ್ನು ಇನ್ನಿಲ್ಲದಂತೆ ಆಕರ್ಷಿಸಿತು. ಇದೇನು? ಎಲ್ಲಿಗೆ? ಎಂದ ಜನ ಸರಪಳಿಯ ಸಾಲನ್ನು ನೋಡಿ ಮೂಗಿನ ಮೇಲೆ ಬೆರಳಿಟ್ಟುಕೊಂಡರು. ಸರಪಳಿ ಸಾಲುದ್ದಕ್ಕೂ ಮಹಿಳೆಯರು, ಮಕ್ಕಳು, ಬುರ್ಖಾ ಧರಿಸಿದ ಹೆಂಗಳೆಯರು, ಕ್ರೈಸ್ತ ಸನ್ಯಾಸಿಯರು ಮಾನವೀಯತೆ ಎಂದರೇನು ಎಂಬುದನ್ನು ತೋರಿಸಿಕೊಟ್ಟರು.

ಸಿಐಟಿಯು, ಎಐಟಿಯುಸಿ, ರೈತ ಸಂಘ, ಕೂಲಿಕಾರಸಂಘ, ಭಾರತ ವಿದ್ಯಾರ್ಥಿ ಫೆಡರೇಷನ್, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್, ಜನವಾದಿ ಮಹಿಳಾ ಸಂಘಟನೆ ಹೋಟೆಲ್ ಕಾರ್ಮಿಕರ ಸಂಘ, ಸಿಪಿಎಸಿ, ಸಮುದಾಯ, ರಾಜ್ಯ ಕೋಮು ಸೌಹಾರ್ದತಾ ಸಮಿತಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ವಾರದನುಡಿ



ಗಲಭೆ ಹಿಂಸಾಚಾರಗಳು ಮೊದಲು ತಟ್ಟುವುದು ಬಡ, ದುರ್ಬಲ ಜನರನ್ನು ಇದರಿಂದ ಚೇತರಿಸಿಕೊಳ್ಳುವಲ್ಲಿ ಮಾತ್ರ ಅವರೇ ಕೊನೆಯವರು.

- ರಾಷ್ಟ್ರಪತಿ ಶಂಕರ್‌ದಯಾಳ್ ಶರ್ಮಾ

(ಗಣತಂತ್ರ ದಿನದ ಸಂದೇಶದಲ್ಲಿ)

ಶಿವಸೇನೆಯದೇ ರಾಜ್ಯಭಾರ ಸರಕಾರ ಅದರ ಸೆರೆಯಾಳು

ಎಡಪಕ್ಷ - ಜನತಾದಳಗಳ ಲೋಕಸಭಾ ಸದಸ್ಯರಿಂದ ಪ್ರತ್ಯಕ್ಷದರ್ಶಿ ವರದಿ

ಮುಂಬೈಯಲ್ಲಿ ಕಾನೂನು ಪಾಲನೆಯ ಅಧಿಕಾರಿಗಳು ನಿಷ್ಪಕ್ಷಪಾತವಾಗಿ, ಯಾರಿಗೂ ತಲೆಬಾಗದೆ ಕ್ರಮ ಕೈಗೊಳ್ಳುವುದು ಅತಿ ಅಗತ್ಯವಾಗಿತ್ತು. ರಾಜ್ಯ ಪೋಲೀಸರು ಮತ್ತು ಆಡಳಿತ ಅವರಲ್ಲಿ ಸಂಪೂರ್ಣ ವಿಫಲಗೊಂಡವು. ಸೇನೆ ಮಾತ್ರವೇ ಸಮರ್ಥವಾಯಿತು. ಇದು ಜನಗಳ ಮೇಲೆ ಆರೋಗ್ಯಕರ ಪ್ರಭಾವ ಬೀರಿತು. ಜನಗಳಿಗೆ ರಕ್ಷಣೆ ಕೊಡುವಲ್ಲಿ ವಿಫಲವಾದುದಷ್ಟೇ ಅಲ್ಲ, ಮಹಾರಾಷ್ಟ್ರ ಸರಕಾರ ನಂತರವೂ ಈ ಗಲಭೆಯಲ್ಲಿ ನೊಂದವರಿಗೆ ಪರಿಹಾರ ನೀಡುವಲ್ಲಿಯೂ ವಿಫಲಗೊಂಡಿದೆ- ಇದು ಎಡಪಕ್ಷಗಳು ಹಾಗೂ ರಾಷ್ಟ್ರೀಯ ರಂಗದ ನಿಯೋಗ ಮುಂಬೈಗೆ ಭೇಟಿ ನೀಡಿದಾಗ ಕಣ್ಣಾರೆ ಕಂಡ ಸಂಗತಿ.

ಸಿಪಿಐನ ಇಂದ್ರಜಿತ್ ಗುಪ್ತಾ, ಸಿಪಿಐ(ಎಂ)ನ ಸೋಮನಾಥ ಚಟರ್ಜಿ ಮತ್ತು ಸೈಫುದ್ದೀನ್ ಚೌಧುರಿ ಹಾಗೂ ಜನತಾದಳದ ಶರದ್‌ಯಾದವ್ ಇದ್ದ ಈ ನಿಯೋಗ ಜನವರಿ 16ರಂದು ಮುಂಬೈನ ಗಲಭೆಗ್ರಸ್ತ ಪ್ರದೇಶಗಳಿಗೆ ಭೇಟಿ ನೀಡಿತು. ಇವರಲ್ಲದೆ ಸಿಪಿಐ ಮುಖಂಡ ಎ.ಬಿ. ಬರ್ಧಾನ್, ಸಿಪಿಐ(ಎಂ)ನ ಮಹಾರಾಷ್ಟ್ರದ ಮುಖಂಡ ಪ್ರಭಾಕರ ಸಾಂಝಗಿರಿ ಹಾಗೂ ಸ್ಥಳೀಯ ಜನತಾದಳ ಮುಖಂಡರು ಈ ನಿಯೋಗದ ಜತೆಗಿದ್ದರು.

ಆರಿಸಿ-ಆರಿಸಿ ಕೊಲೆ ಸುಲಿಗೆ

ಏಶ್ಯಾದಲ್ಲೇ ಅತಿ ದೊಡ್ಡ ಕೊಳೆಗೇರಿ ಎಂದು ಖ್ಯಾತಿ ಹೊಂದಿದ ವಿವಿಧ ಧರ್ಮ, ಜಾತಿ, ಭಾಷೆಗಳ ಜನ ಬಹಳ ವರ್ಷಗಳಿಂದ ಜೊತೆ-ಜೊತೆಯಾಗಿ ಬದುಕು ಸಾಗಿಸುತ್ತಿದ್ದ ಧಾರಾವಿಗೆ ನಿಯೋಗ ಭೇಟಿ ನೀಡಿತು. ಡಿಸೆಂಬರ್ 6ರ ನಂತರ ತಕ್ಷಣ ನಡೆದ ಗಲಭೆಗಳ ಮೊದಲ ಸುತ್ತಿನಲ್ಲಿ ಈ ಪ್ರದೇಶ ಬಹಳ ಹಾನಿಗೀಡಾಗಿತ್ತು. ಹಲವಾರು ಮಂದಿ ಸತ್ತಿದ್ದರು. ಆಸ್ತಿ-ಪಾಸ್ತಿಗಳನ್ನು ಗಲಭೆಕೋರರಷ್ಟೇ ಅಲ್ಲ, ಪೋಲೀಸ್ ಇಲಾಖೆಯ ಕೆಲವು ಕೋಮು ಪಕ್ಷಪಾತ ತುಂಬಿದ ವಿಭಾಗಗಳೂ ಲೂಟಿ ಹೊಡೆದವು. ಎರಡನೇ ಸುತ್ತಿನಲ್ಲೂ ಕೋಮು ಗೂಂಡಾಗಿರಿ, ಒಂದು ನಿರ್ದಿಷ್ಟ ಉದ್ದೇಶದಿಂದಲೇ ನಡೆದಷ್ಟು ಕಂಡು ಬರುತ್ತದೆ. ಈ ನಿರ್ದಿಷ್ಟ ಉದ್ದೇಶವೆಂದರೆ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರನ್ನು ಅಂದರೆ ಮುಸಲ್ಮಾನರು ಹಾಗೂ ಮರಾಠಿಯೇತರ ಭಾಷಿಕ ಜನಗಳು ತಮ್ಮ ಮನೆ-ಮಾರು ಬಿಟ್ಟು ಓಡುವಂತೆ ಮಾಡುವುದು- ಅವನ್ನೆಲ್ಲಾ ಈ ಗ್ಯಾಂಗ್‌ಗಳು ತಮ್ಮ ವಶಮಾಡಿಕೊಳ್ಳುವುದು. ಇರಿತದಿಂದಲೇ ಹಲವಾರು ಸಾವು ಸಂಭವಿಸಿರುವುದು ಇದಕ್ಕೊಂದು ನಿದರ್ಶನ. ಇದರೊಂದಿಗೆ ಕಾನೂನು ವ್ಯವಸ್ಥೆಯೆಂಬುದೇ ಇರದಿರುವ ಪರಿಸ್ಥಿತಿ- ಇವೆಲ್ಲದರ ಪರಿಣಾಮವಾಗಿ ಉತ್ತರಪ್ರದೇಶ, ತಮಿಳುನಾಡು, ಕೇರಳ ಹಾಗೂ ಪಶ್ಚಿಮ ಬಂಗಾಳದ ಜನ, ಬಹುಪಾಲು ಎರಡೂ ಕೋಮುಗಳ ಕೂಲಿಗಾರರು ಹಾಗೂ ಅಲ್ಪ ಆದಾಯದವರು ತಮ್ಮ ಮನೆ, ಅಂಗಡಿ, ಕೆಲಸದ ಜಾಗವನ್ನು ಹತಾಶರಾಗಿ ಬಿಟ್ಟು ಹೋಗುವಂತೆ ಮಾಡಲಾಗಿದೆ ಎಂದು ನಿಯೋಗ ಗಮನಿಸಿತು. ರೋಡ್ ಪ್ರದೇಶದಲ್ಲಿ ಎಲ್ಲಾ ಅಂಗಡಿ-ಸಂಸ್ಥೆಗಳು-ಕಾರ್ಖಾನೆಗಳು ಸಂಪೂರ್ಣ ಸುಟ್ಟು ಭಸ್ಮವಾಗಿವೆ.

ನಿಯೋಗ ಹೋದೆಡೆಗಳಲ್ಲೆಲ್ಲಾ ಆರಿಸಿ-ಆರಿಸಿ ಭಾಷಾ ಹಾಗೂ ಧಾರ್ಮಿಕ ಅಲ್ಪಸಂಖ್ಯಾತರ ಕೊಲೆ-ಸುಲಿಗೆ ನಡೆದಷ್ಟು ಕಂಡು ಬಂತು. ಶಿವಸೇನೆಯ ಪಡೆಗಳ ಕಿಡಿಗೇಡಿಗಳು ಮುಸಲ್ಮಾನರು ಹಾಗೂ ಇತರ ಭಾಷಿಕ ಜನರನ್ನು ಕೆಲಸದಲ್ಲಿ ಇಟ್ಟುಕೊಳ್ಳಬಾರದು ಎಂದು ಮಾಲಕರಿಗೆ ಬೆದರಿಕೆ ಹಾಕಿದ ಘಟನೆಗಳು ನಿಯೋಗದ ಗಮನಕ್ಕೆ ಬಂದವು.

ಜನಗಳ ವಿಶ್ವಾಸ ಹಾರಿಹೋಗಿದೆ

ಈ ಅವಧಿಯಾದ್ಯಂತ ರಾಜ್ಯ ಸರಕಾರ ಸಂಪೂರ್ಣ ಅಸ್ತವ್ಯಸ್ತಗೊಂಡಿತ್ತು. ಶಿವಸೇನಾ ನೇತೃತ್ವದ ಗೂಂಡಾಗಳಿಂದ ಜನಗಳಿಗೆ ರಕ್ಷಣೆ ಕೊಡಲು ಅದು ವಿಫಲವಾಗಿದೆ ಎಂದು ಜನಗಳಿಂದ ತಿಳಿದುಬಂತು. ಬಾಳಠಾಕ್ರೆ ಮತ್ತಿತರ ಶಿವಸೇನಾ ಮುಖಂಡರು ಅತ್ಯಂತ ಉದ್ರೇಕಕಾರಿ ಭಾಷಣ, ಲೇಖನಗಳನ್ನು ನೋಡಿ, ಕೇಳಿದರೂ ಈ ನಿಷ್ಕ್ರಿಯ ದುರ್ಬಲ ಸರಕಾರ ಈ ಕಾನೂನು ಮುರುಕರ, ವಿನಾಶಕಾರಿಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಶಿವಸೇನೆಯದ್ದೇ ರಾಜ್ಯಭಾರ, ಸರಕಾರ ಅದರ ಪಿತೂರಿಗಳ, ಬೆದರಿಕೆಗಳ ಸೆರೆಯಾಳು ಎಂಬಂತೆ ಕಾಣುತ್ತಿದೆ ಎಂದು ಎಡ-ರಾಷ್ಟ್ರೀಯರಂಗ ನಿಯೋಗ ಅಭಿಪ್ರಾಯಪಟ್ಟಿದೆ. ಈ ರಾಜ್ಯ ಆಡಳಿತದಲ್ಲಿ ಜನಗಳಿಗೆ ಡಿಸೆಂಬರ್ 6ರ ನಂತರ ಮೊದಲ ಗಲಭೆ ಹಿಡಿದ ದಿನದಿಂದಲೇ ಸಂಪೂರ್ಣ ವಿಶ್ವಾಸ ಹಾರಿಹೋಗಿದೆ ಎಂದು ನಿಯೋಗ ಗಮನಿಸಿತು.

ನಿಯೋಗ ಕೆ.ಇ.ಎಂ. ಆಸ್ಪತ್ರೆಗೆ ಹೋಗಿ ಗಾಯಗೊಂಡವರನ್ನು ಭೇಟಿ ಮಾಡಿತು. ಮದನ್‌ಪುರಾದಲ್ಲಿ ವಿವಿಧ ಭಾಷೆಯ ಸಾವಿರಾರು ನೊಂದವರಿಗೆ ಆಸರೆ ನೀಡುತ್ತಿರುವ ಶಿಬಿರಕ್ಕೂ ಭೇಟಿ ನೀಡಿತು. ನಗರದಲ್ಲಿ ಜನಗಳೇ ಸ್ವತಃ ಇಂತಹ ಹಲವಾರು ಶಿಬಿರಗಳನ್ನು ನಡೆಸಿದರು. ಈ ನಿಯೋಗ ಹೋಗುವವರೆಗಂತೂ ಈ ಶಿಬಿರಗಳಿಗೆ ಸರಕಾರದಿಂದ ಯಾವುದೇ ಸಹಾಯ ತಲುಪಿಲ್ಲ. ಅಷ್ಟೇ ಅಲ್ಲ, ಕೋಮುವಾದಿ ಗೂಂಡಾಗಳಿಂದ ಸಾಕಷ್ಟು ರಕ್ಷಣೆಯನ್ನೂ ನೀಡಿಲ್ಲ.

ಶಿವಸೇನೆ ಅಸಹನೆ

ತನ್ನ ಭೇಟಿಯ ಕೊನೆಯಲ್ಲಿ ನಿಯೋಗ ಮುಂಬೈಯ ಹುತಾತ್ಮ ಚೌಕದಲ್ಲಿ ಅನಿರ್ದಿಷ್ಟ ಉಪವಾಸ ಕುಳಿತ ವಿ.ಪಿ.ಸಿಂಗ್‌ರನ್ನು ಭೇಟಿ ಮಾಡಿತು. ಜನಗಳಿಗೆ ಮನವಿ ಮಾಡಿಕೊಳ್ಳುವ ಇಂತಹ ಅಹಿಂಸಾತ್ಮಕ ಮಾನವೀಯ ನಿಲುವನ್ನು ಕೂಡಾ ಶಿವಸೇನೆ ಸಹಿಸಿಕೊಳ್ಳಲು ಸಿದ್ಧವಿಲ್ಲ ಎಂದು ಹುತಾತ್ಮ ಚೌಕದ ಸುತ್ತ-ಮುತ್ತಲು ಶಿವಸೇನೆ ಪಡೆಗಳ ಕಿಡಿಗೇಡಿತನ, ಅಪಶಬ್ದಗಳ ಸುರಿ ಮಳೆಸುತ್ತಿದ್ದವು. ಆದರೂ ಪೋಲೀಸರು ಮೂಕ ಪ್ರೇಕ್ಷಕರಂತೆ ನಿಂತಿದ್ದರು.

ನಂತರ ನಿಯೋಗ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದಾಗ ಶಿವಸೇನೆಯ ಗೂಂಡಾಗಳ ಇಂತಹ ಕೃತ್ಯಗಳ ಬಗ್ಗೆ ನಗರದ ಜನಗಳ ಖಂಡನೆಯನ್ನು ಅವರ ಗಮನಕ್ಕೆ ತರಲಾಯಿತು. ಹುತಾತ್ಮ ಚೌಕದಿಂದ ಶಿವಸೇನಾ ಕಿಡಿಗೇಡಿಗಳನ್ನು ದೂರ ಮಾಡಲಾಗುವುದು ಎಂದು ಅವರು ಆಶ್ವಾಸನೆಯೇನೋ ನೀಡಿದರು. ಬಾಳಠಾಕ್ರೆಯೂ ಸೇರಿದಂತೆ ಶಿವಸೇನಾ ಗಲಭೆಕೋರರ ವಿರುದ್ಧ ಸರಕಾರ ದೃಢಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದಾಗ ಮುಖ್ಯಮಂತ್ರಿಗಳು ಹಾರಿಕೆಯ ಉತ್ತರ ನೀಡಿದರು. ಶಿವಸೇನಾ ಕುಕೃತ್ಯಗಳನ್ನು ಬಯಲಿಗೆಳೆದ ಪತ್ರಕರ್ತರೂ ಅವರ ಕೋಪಕ್ಕೆ ತುತ್ತಾದುದನ್ನು ನಿಯೋಗ ಮುಖ್ಯಮಂತ್ರಿಗಳ ಗಮನಕ್ಕೆ ತಂದಿತು.

ಮುಖ್ಯ ರಸ್ತೆಗಳ ಮೇಲೆ ನಮಾಜ್ ಹಾಗೂ ಮಹಾ ಆರತಿ ನಡೆಸುವ ವಿವಾದವತ್ತ ಗಮನ ಸೆಳೆದ ನಿಯೋಗ ಇದು ಬೆಂಕಿಗೆ ತುಪ್ಪ ಸುರಿಯುತ್ತಿದೆ, ಕಲ್ಯಾಣ್, ನಾಸಿಕ್‌ನಂತಹ ಕಡೆಗಳಲ್ಲಿ ಸ್ಥಳೀಯ ಆಡಳಿತ ಇದರಿಂದಾ ಘರ್ಷಣೆ ನಿರ್ಬಂಧ ಹಾಕಿರುವುದರಿಂದ ಉತ್ತಮ ಪರಿಣಾಮವಾಗಿದೆ ಎಂಬುದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿತು. ಮುಖ್ಯಮಂತ್ರಿಗಳು ಈ ಬಗ್ಗೆ ತಕ್ಷಣ ಕ್ರಮ ಕೈಗೊಂಡು ಈ ವಿವಾದವನ್ನು ಇತ್ಯರ್ಥಗೊಳಿಸಬೇಕು ಎಂದು ಎಡ-ರಾಷ್ಟ್ರೀಯ ರಂಗ ನಿಯೋಗ ಒತ್ತಾಯಿಸಿತು.

ಶ್ರೀರಾವ್‌ರವರ ಸಾಮರ್ಥ್ಯದಲ್ಲಿ ನಂಬಿಕೆ ಕಳಕೊಳ್ಳುತ್ತಿದ್ದಾರೆ.

ಮುಂಬೈಯನ್ನು ಸುಡುತ್ತಿರುವ ಕೋಮು ಹಿಂಸಾಚಾರ ಒಂದೊಮ್ಮೆ ತನ್ನ ವಿಶಾಲ ಮನೋಭಾವನೆಗೆ ಹೆಸರಾದ ನಗರಕ್ಕೊಂದು ಗಂಭೀರ ದುರಂತವಷ್ಟೇ ಅಲ್ಲ. ದೇಶವನ್ನು ವ್ಯಾಪಿಸಿರುವ ತೀವ್ರ ಬಿಕ್ಕಟ್ಟಿನ ಇನ್ನೊಂದು ನಡುಕಹುಟ್ಟಿಸುವ ಅಭಿವ್ಯಕ್ತಿ. ಕೋಮು ವಿಭಜನೆ ಹೆಚ್ಚುತ್ತಿರುವುದು ರಾಷ್ಟ್ರೀಯ ಒಮ್ಮತದಲ್ಲಿ ಕಂಡುಬಂದಿರುವ ಬಿರುಕಾಗಿದ್ದರೆ, ಬೀದಿ ಕಿಡಿಗೇಡಿಗಳು, ಕ್ರಿಮಿನಲ್‌ಗಳ ಆಟಾಟೋಪ ಭಾರತದಲ್ಲಿ ಇದು ಎಂತಹ ಕ್ಯಾನ್ಸರ್ ಆಗಿ ಪರಿವರ್ತನೆಗೊಂಡಿದೆ ಎಂಬುದರ ಸೂಚಕ.

ಶ್ರೀಯುತ ರಾವ್ ಹಿಂಜರಿಕೆಯಿಂದ ನಿಷ್ಕ್ರಿಯರಾಗಿರುವುದನ್ನು ಬಿಟ್ಟು ಕಾರ್ಯಾಚರಣೆಗಿಳಿಯುವ ಸಮಯ ಬಂದಿದೆ. ಮುಂಬೈ ಅನುಭವಿಸಿದ ಭಯಾನಕ ನೋವನ್ನು ಶಮನ ಮಾಡಲು ಶಾಂತಿ ಸ್ಥಾಪಿಸಲು ಒಂದು ಸರ್ವಪಕ್ಷ ಸಭೆ ಕರೆಯಬೇಕು. ನಂತರ ರಾಷ್ಟ್ರೀಯ ಒಮ್ಮತವನ್ನು ಸರಿಪಡಿಸಲು ಪ್ರಯತ್ನ ನಡೆಯಬೇಕು. ಸಮಯ ಮೀರಿ ಹೋಗುತ್ತಿದೆ. ಜನ ದೇಶಕ್ಕೆ ನೇತೃತ್ವ ನೀಡುವಲ್ಲಿ ಶ್ರೀ ರಾವ್ ಅವರ ಸಾಮರ್ಥ್ಯದಲ್ಲಿ ನಂಬಿಕೆ ಕಳಕೊಳ್ಳುತ್ತಿದ್ದಾರೆ. ಅವರೀಗ ಕಾರ್ಯಶೀಲರಾಗಬೇಕು.

- ಇಂಡಿಯನ್ ಎಕ್ಸ್‌ಪ್ರೆಸ್

300 ವರ್ಷಗಳಲ್ಲೆಂದೂ ಕಾಣದ ಬರ್ಬರತೆ

ಡಿಸೆಂಬರ್ 6 ನಂತರ ಮೊದಲ ದಂಗೆಗಳು ನಿಸ್ಸಂಶಯವಾಗಿಯೂ ಕ್ರೂರವಾಗಿದ್ದವು. ಆದರೆ ಅವು ಯೋಜಿತವಾಗಿ ನಡೆಯಲಿಲ್ಲ, ಅಲ್ಲಲ್ಲಿ ನಡೆದವು. ಆದರೆ ಎರಡನೇ ಹಂತದಲ್ಲಿ ಗಲಭೆಗಳು ನಡೆದ ರೀತಿಯನ್ನು ನೋಡಿದರೆ ಈ ಹಿಂಸಾಚಾರಗಳ ಉದ್ದೇಶ ಸ್ಪಷ್ಟವಾಗಿತ್ತು. ಅತ್ಯಂತ ದುಷ್ಟತನದಿಂದ ಕೂಡಿತ್ತು ಎಂದು ಕಂಡುಬರುತ್ತದೆ.

ಅಲ್ಪಸಂಖ್ಯಾತರಲ್ಲಿ ಭಯ ತುಂಬಿ ಅವರು ಮುಸ್ಲಿಂ-ಬಾಹುಳ್ಯವಿರುವ ಪ್ರದೇಶಗಳಿಗೆ ಅಥವಾ ಮುಂಬೈಯಿಂದಲೇ ಕಾಲುಕೀಳುವಂತೆ ಮಾಡುವುದು. ಇದು ಕೊಳೆಗೇರಿಗಳಿಗೆ ಮಾತ್ರ ಸೀಮಿತವಾಗಿಲ್ಲ, ಮುಂಬೈಯ ಮೇಲ್ವರ್ಗದ ವಸತಿ ಪ್ರದೇಶಗಳಿಗೂ ಹರಡಿತು. ಮುಸ್ಲಿಂ ಫ್ಲಾಟ್ ವಾಸಿಗಳನ್ನು ಗುರುತಿಸಿ-ಗುರುತಿಸಿ ಭಯ ಹರಡಲಾಗುತ್ತಿದೆ.

ಈ ಮಹಾನಗರ ತನ್ನ 300 ವರ್ಷಗಳ ಇತಿಹಾಸದಲ್ಲಿ ಎಂದೂ ಇಂತಹ ಬರ್ಬರ ವರ್ತನೆ ಕಂಡಿಲ್ಲ, ಇದೂ ಸಾಲದೋ ಎಂಬಂತೆ ರಾಜಕೀಯ ವರ್ಗದ ವಿಫಲತೆ. ನಮ್ಮನ್ನಾಳುವ ಆಳರಸರಿಗಂತೂ ಮುಂಬೈಯಲ್ಲಿನ ಸಾವಿನ-ನಾಶದ ತಾಂಡವದ ಅರಿವೇ ಇದ್ದಂತಿಲ್ಲ.... ದಳ್ಳುರಿಯನ್ನು ಆರಿಸಲು ತಾವೇನು ಮಾಡಿದ್ದೇವೆ ಎಂದು ಕಾಂಗ್ರೆಸ್ ಎಂ.ಪಿ.ಗಳು ಶಾಸಕರು ಜನರಿಗೆ ವಿವರಿಸಬೇಕಾಗಿದೆ. ಸುನೀಲ್ ದತ್ತರಷ್ಟೇ ಧೈರ್ಯ ತೋರಿದ್ದಾರೆ. ಪೋಲೀಸರದಂತೂ ಅತ್ಯಂತ ಹೀನ ರೀತಿಯ ವೈಫಲ್ಯ.

- ಟೈಮ್ಸ್ ಆಫ್ ಇಂಡಿಯಾ

ಹಿಂದೂ ರಾಷ್ಟ್ರೀಯತೆಯ ಮುಖವಾಡದ ಹಿಂದಿರುವುದು ಹಸಿ-ಹಸಿ ದ್ವೇಷದ ಹೊಲಸು ರೂಪ

ಬಾಬ್ರಿಮಸೀದಿ ಒಂದು ಪ್ರಾಚೀನ ದೇವಾಲಯದ ಬಗ್ಗೆ ಒಂದು ಚಾರಿತ್ರಿಕ ತರ್ಕವೆಂದೋ ಅಥವಾ ರಾಮಜನ್ಮಭೂಮಿಯ ಬಗ್ಗೆ ಇಂದು ಧಾರ್ಮಿಕ ತರ್ಕವೆಂದೋ ಭಾವಿಸಿದವರು ಮುಂಬೈಯನ್ನು ಅಸ್ತವ್ಯಸ್ತಗೊಳಿಸಿದ ದಂಗೆಗಳ ನಂತರ ಅವನ್ನು ಹೊಸ ಬೆಳಕಿನಲ್ಲಿ ನೋಡಬೇಕಾಗಿ ಬಂದಿದೆ. ನಾವೀಗ ಕಾಣುತ್ತಿರುವುದು ವಿ.ಹೆಚ್.ಪಿ.* ಶಿವಸೇನೆಯ ಕೈಯಲ್ಲಿ ರಾಜಕೀಯ ಅಧಿಕಾರವಿಡಲು ಮುಸ್ಲಿಮರ ವಿರುದ್ಧ ದ್ವೇಷದ ಪ್ರಚಾರ ಕೆಲವು. ಬುದ್ಧಿಜೀವಿಗಳೆನ್ನುವ ಪತ್ರಕರ್ತರು, ರಾಜಕಾರಣಿಗಳು, ಕೆಲವು ನ್ಯಾಯಾಧೀಶರು ಕೂಡಾ ಈ ದ್ವೇಷ ಪ್ರಚಾರಕ್ಕೆ ಒಂದು ಗೌರವಪೂರ್ಣ ಮುಖವಾಡ ತೊಡಿಸಲು ಪ್ರಯತ್ನಿಸುತ್ತಿದ್ದಾರೆ, ಬೀದಿ ಕಿಡಿಗೇಡಿಗಳ ಗಲಭೆಯನ್ನು ಒಂದು ಹೊಸ ವಿಚಾರ ಮೂಡಿ ಬಂದುದರ ಸಂಕೇತ ಎಂದು ಚಿತ್ರಿಸಲು ಅವರು ಧರ್ಮ, ಇತಿಹಾಸ, ಇತ್ಯಾದಿಗಳನ್ನೆಲ್ಲಾ ಉದ್ಧರಿಸುತ್ತಿದ್ದಾರೆ. ಆದರೆ ಆ ಮುಖವಾಡವನ್ನು ಕಿತ್ತೆಸೆದಾಗ ಕಾಣುವುದು ಅತ್ಯಂತ ಹಸಿ-ಹಸಿಯಾದ ಆದಿಕಾಲದ ದ್ವೇಷದ ಅತ್ಯಂತ ಹೊಲಸು ರೂಪವಷ್ಟೆ, ಮುಸ್ಲಿಂ ಅಂಗಡಿಗಳನ್ನು, ಮುಸ್ಲಿಂ ಟ್ಯಾಕ್ಸಿ ಡ್ರೈವರುಗಳನ್ನು ಲೂಟಿಮಾಡುವ, ಇತರ ಭಯಾನಕವಾದ ಕೃತ್ಯಗಳನ್ನು ಸಮರ್ಥಿಸಿಕೊಳ್ಳಲು ಇದು ಹಿಂದೂ ರಾಷ್ಟ್ರೀಯವಾದ ಎಂಬ ಯಾವುದೇ ಗೌರವಾರ್ಹ ತರ್ಕ ಬಳಸಲು ಸಾಧ್ಯವಿಲ್ಲ... ನೀವು ಜನಜಂಗುಳಿಯ ಸಹಾಯದಿಂದ ಮುಸ್ಲಿಮರನ್ನು ಹೆದರಿಸಲಾರಂಭಿಸಿದರೆ ಅದೇ ಜಂಗುಳಿ ಇತರ ಗುಂಪುಗಳ ಮೇಲೂ, ಹಿಂದೂ ತಮಿಳರ ಮೇಲೂ ಎರಗುತ್ತದೆ. ಹಿಂದೂ ರಾಷ್ಟ್ರೀಯವಾದದ ಮುಖವಾಡ ಹೊತ್ತ ಈ ರಾಕ್ಷಸಿ ಸ್ವರೂಪ ಯಾವುದೇ ರಾಷ್ಟ್ರವಾದದ ಆಧಾರವಾಗಲು ಸಾಧ್ಯವಿಲ್ಲ. ಅದು ಅರಾಜಕತೆ, ಅನ್ಯಾಯ ಹಾಗೂ ಭೀತಿ-ಭಯೋತ್ಪಾದಕತೆಯನ್ನು ಹುಟ್ಟಿಸುತ್ತದಷ್ಟೇ.... ಹೆಚ್ಚು ಹೆಚ್ಚಾಗಿ ಅಧಿಕಾರಕ್ಕಿದು ರಹದಾರಿ ಎಂದು ಕಾಣುವ ರಾಜಕೀಯ ಪಕ್ಷಗಳು ಉದ್ರೇಕಿಸುವ ಕೋಮುವಾದವನ್ನು ಇಂತಹ ಯಾವುದೇ ಹಿಂಸಾಚಾರವನ್ನು ಎದುರಿಸುವ ಸಾಮರ್ಥ್ಯವೇ ಇಲ್ಲದ ಸರ್ಕಾರವೇ ಮತ್ತೆ ಮತ್ತೆ ಎದುರಿಸಬೇಕೆನ್ನುವುದು ಒಂದು ದುರಂತ.

-ಇಕಾನಾಮಿಕ್ ಟೈಮ್ಸ್

ನಂತರ ಅವರು ಕಾರ್ಮಿಕರನ್ನು ಅಟ್ಟಿಕೊಂಡು ಬಂದರು

"ಮಣ್ಣಿನ ಮಕ್ಕಳ" ವಾದ ಹೂಡಿ ಮರಾಠಿಯೇತರ ಕಾರ್ಮಿಕರ ಬಗ್ಗೆ ಅಪಪ್ರಚಾರ ನಡೆಸುತ್ತಿದ್ದ ಶಿವಸೇನೆಗೆ ಈ ಬಾರಿಯ ಹಿಂಸಾಚಾರದಲ್ಲಿ ಮುಸ್ಲಿಮ್ ಕಾರ್ಮಿಕರು ಹಾಗೂ ಮರಾಠಿಯೇತರ ಹಿಂದೂ ಕಾರ್ಮಿಕರು ಬಲಿಯಾಗಿರುವುದು ದೇಶದ ಕಾರ್ಮಿಕರೆಲ್ಲಾ ಗಮನಿಸಬೇಕಾದ ಸಂಗತಿ.

ವಿಕ್ರೋಲಿಯಲ್ಲಿರುವ ಗೋದ್ರೆಜ್ ಬಾಯ್ಸ್ ಕಂಪೆನಿಯ ಕಾರ್ಮಿಕ ಇಸ್ಮಾಯಿಲ್ ಚಪ್ಪರ್‌ಕರ್‌ನನ್ನು ಆತನ ಮನೆಯಲ್ಲೇ ಒಂದು ಗ್ಯಾಂಗ್ ಬಡಿದು ಸಾಯಿಸಿತು. ಈತ 1965 ಹಾಗೂ 1971 ರಲ್ಲಿ ಪಾಕಿಸ್ತಾನದೊಂದಿಗೆ ಯುದ್ಧದ ಸಮಯದಲ್ಲಿ ಭಾರತೀಯ ಸೇನೆಯಲ್ಲಿ ದುಡಿದಾತ.

ಟಾಟಾ ಗುಂಪಿನ ಅತೀ ಹಳೆಯ ಬಟ್ಟೆಗಿರಣಿ ಸ್ವದೇಶಿಮಿಲ್‌ನ ಇಬ್ಬರು ಕಾರ್ಮಿಕರು ಸತ್ತಿದ್ದಾರೆ. ಗುಲಾಮ್‌ಮೊಹಿಯುದ್ದೀನ್ ಗಲಭೆಗಳಿಗೆ ಬಲಿಯಾದರೆ ಹರಿಶ್ಚಂದ್ರ ಮೊಕಾಲ್ ಪೋಲೀಸ್ ಗುಂಡಿಗೆ ಬಲಿಯಾದ.

ಕೊಹಿನೂರು ಟೆಕ್ಸ್‌ಟೈಲ್‌ಮಿಲ್‌ನ ಮುಸ್ಲಿಂ ಕಾರ್ಮಿಕರು ಲೂಟಿ-ದೊಂಬಿಗಳಲ್ಲಿ ಬಹಳ ಹಾನಿಗೀಡಾಗಿದ್ದಾರೆ ಎಂದು ಕಾಂಗ್ರೆಸ್ ಬೆಂಬಲಿತ ಯೂನಿಯನ್‌ನ ಅಧ್ಯಕ್ಷರೇ ಹೇಳಿದ್ದಾರೆ.

ಮುಂಬೈಯ ದೊಡ್ಡ ಕೈಗಾರಿಕಾ ಘಟಕಗಳಲ್ಲಿ ಒಂದಾದ ಲಾರ್ಸನ್ ಅಂಡ್ ಟೂಬ್ರೊ (ಎಲ್ ಅಂಡ್ ಟಿ)ದಲ್ಲಿ ಮುಸ್ಲಿಂ ಹಾಗೂ ಇತರ ಕಾರ್ಮಿಕರನ್ನು ಕಂಪೆನಿ ಬಿಟ್ಟು ಹೋಗುವಂತೆ ಶಿವಸೇನಾ ಯೂನಿಯನ್‌ನ ಕಾರ್ಯಕರ್ತರು ಹೇಳುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಇಲ್ಲಿ ದುಡಿಯುವ 7000 ಕಾರ್ಮಿಕರಲ್ಲಿ 300 ಮುಸ್ಲಿಮರು. ಇವರಲ್ಲಿ ಕೇವಲ 20 ಮಂದಿ ಕೆಲಸಕ್ಕೆ ಬರುತ್ತಿದ್ದಾರೆ. ಉಳಿದವರು ಜೀವಭಯದಿಂದ ಬರಲಾಗುತ್ತಿಲ್ಲ. ಪವಾಯಿಯಲ್ಲಿರುವ ಕಾರ್ಖಾನೆಯ 40 ಎಕ್ರೆ ಜಾಗದಲ್ಲಿ ಮುಸ್ಲಿಂ ಕಾರ್ಮಿಕರಿಗೆ ಭದ್ರತೆ ನೀಡಲು ಸಾಧ್ಯವಿಲ್ಲವಾದ್ದರಿಂದ ರಜೆಯಲ್ಲಿ ಹೋಗಿ ಎಂದು ಕಾರ್ಖಾನೆಯ ಆಡಳಿತ ಮಂಡಳಿಯೇ ಸಲಹೆ ಮಾಡಿದೆಯೆಂದು ಸುದ್ದಿಯಿತ್ತು. ಅದು ನಿಜವಲ್ಲ, ಆದರೆ ಬಹುಪಾಲು ಮುಸ್ಲಿಂ ಕಾರ್ಮಿಕರು ಕೆಲಸಕ್ಕೆ ಹಾಜರಾಗಲು ಆಗುತ್ತಿಲ್ಲ, ಅವರು ಹಾಜರಾಗುವಂತೆ ಸೂಕ್ತ ವಾತಾವರಣ ಕಲ್ಪಿಸಲಾಗುತ್ತಿದೆ ಎಂದು ಆಡಳಿತಮಂಡಳಿ ಹೇಳಿದೆ.

ಇನ್ನೊಂದು ದೊಡ್ಡ ಕಂಪೆನಿ ಮಹೀಂದ್ರಾ ಅಂಡ್ ಮಹೀಂದ್ರಾದಲ್ಲಿ ಇದೇ ಕಥೆ ಎಂದು ಹೇಳಲಾಗುತ್ತಿದೆ.

ಸಾರ್ವಜನಿಕರ ವಲಯದಲ್ಲಿರುವ ಮುಝ್‌ಗಾಂವ್ ಹಡಗುಕಟ್ಟೆಯಲ್ಲಿ 12 ಸಾವಿರ ಕಾರ್ಮಿಕರಲ್ಲಿ ಸುಮಾರು 1200 ಮಂದಿ ಮುಸ್ಲಿಮರು. ಇವರಲ್ಲೂ ಬಹುಮಂದಿ ಕೆಲಸಕ್ಕೆ ಹಾಜರಾಗಲು ಆಗುತ್ತಿಲ್ಲ. ಕಾರಣ ಶಿವಸೇನೆಯ "ಭಾರತೀಯ ಕಾಮಗಾರ್ ಯೂನಿಯನ್"ನ ಬೆದರಿಕೆ!



ಕೃಪೆ: ಶಿಕ್ಷದರ್

ಭಾರತದ ಸಂಸ್ಕೃತಿಗೆ ಬಗೆಯಲಾಗುತ್ತಿರುವ ದ್ರೋಹ

ಮಂಗಳೂರು : ಹಿಂದೂ ಕೋಮುವಾದಿಗಳು ಭಾರತದ ಸಂಸ್ಕೃತಿಯನ್ನು ಹಿಂದೂ ಸಂಸ್ಕೃತಿ ಎಂದು ತಪ್ಪಾಗಿ ಕಲ್ಪಿಸುವ ಮುಖಾಂತರ ಸಾವಿರಾರು ವರ್ಷಗಳಿಂದ ಬೆಳೆದು ಬಂದಿರುವ ಭಾರತೀಯ ಸಂಸ್ಕೃತಿಗೆ ಮತ್ತು ಚರಿತ್ರೆಗೆ ಮಹಾದ್ರೋಹವನ್ನು ಬಗೆಯುತ್ತಿದ್ದಾರೆ. ಫ್ಯಾಸಿಸ್ಟ್ ಹಿಟ್ಲರನಂತೆ ಕೇವಲ ಆರ್ಯ ಸಂಸ್ಕೃತಿಯೇ ಶ್ರೇಷ್ಠ ಎಂಬುದನ್ನು ತೋರಿಸಲು ಚರಿತ್ರೆಯನ್ನು ತಿದ್ದಲು ಹೋಗಿ ನರಮೇಧ ನಡೆಸಿ ಕೊನೆಗೆ ಸಂಪೂರ್ಣ ಅಧಃಪತನ ಹೊಂದಿದ ಪರಿಸ್ಥಿತಿಯೇ ಬರುತ್ತದೆ. ಆದುದರಿಂದ ಒಂದು ದೇಶದ ಸಂಸ್ಕೃತಿ ಎಂದರೆ ನಿಂತ ನೀರಲ್ಲ, ಆ ದೇಶದ ಭೌಗೋಳಿಕ ಸನ್ನಿವೇಶದಲ್ಲಿ ವಾಸಿಸುವ ಜನರ ಆಚಾರ-ವಿಚಾರ ಆಹಾರ ವಿಹಾರ, ಭಾಷೆ ನಡೆನುಡಿ, ಹಬ್ಬ ಆಚರಣೆಗಳು, ಧರ್ಮಗಳೆಲ್ಲವುಗಳ ಸಮ್ಮಿಳಿತ. ಅದೊಂದು ಆರ್ಯರು, ಶಕರು, ಹೂಣರು, ಗ್ರೀಕರು, ಜೈನ, ಬೌದ್ಧ ಮೊಗಲರ ಕೊಡುಗೆಗಳಿಂದ ರೂಪೀಕರಿಸಲ್ಪಟ್ಟವುಗಳ ಒಟ್ಟು ಮೊತ್ತವೇ ಭಾರತದ ಸಂಸ್ಕೃತಿಯಾಗಿದೆ ಎಂದು ಪ್ರಾಧ್ಯಾಪಕ ಜಿ. ಬಾಸ್ಕರ ಮಯ್ಯರವರು 3000 ವರ್ಷಗಳಿಂದ ಚರಿತ್ರೆಯ ವಿವಿಧೆಡೆಗಳಲ್ಲಿ ಬೆಳೆದ ಸಾಂಸ್ಕೃತಿಕ ಬಾಂಧವ್ಯವನ್ನು ವಿವರಿಸಿದರು. ಡಿ.ವೈ.ಎಫ್.ಐ ದ.ಕ. ಜಿಲ್ಲಾ ಸಮಿತಿ ಆಶ್ರಯದಲ್ಲಿ ಇತ್ತೀಚೆಗೆ ನಡೆದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡುತ್ತಿದ್ದರು.

"ಮತಧರ್ಮ ಎಂದೂ ಸಂಸ್ಕೃತಿಯಲ್ಲ. ಅದು ಸ್ಥಳೀಯ ಸಂಸ್ಕೃತಿಯನ್ನು ಆಧರಿಸಿ ಪ್ರದೇಶದಿಂದ ಪ್ರದೇಶಕ್ಕೆ ಅದರ ಆಚರಣೆಯಲ್ಲಿ ವ್ಯತ್ಯಾಸ ಕಾಣಬಹುದು. ಆದುದರಿಂದ ಧರ್ಮವೇ ಸಂಸ್ಕೃತಿ ಎನ್ನುವವರು ದೇಶವನ್ನು ಅಳಿಸಿದರು" ಎಂದರು.

ವಿಚಾರ ಸಂಕಿರಣದಲ್ಲಿ ಪ್ರಬಂಧ ಮಂಡಿಸಿದ ಮತ್ತೊಬ್ಬ ಬಂಡಾಯ ಸಾಹಿತಿ ಮತ್ತು ವಿಮರ್ಶಕ ಆರ್ಕೆ ಮಣಿಪಾಲ್ ವಿವೇಕಾನಂದರ ಬದುಕು ಮತ್ತು ಚಿಂತನೆಗಳ ಬಗ್ಗೆ ವಿಶ್ಲೇಷಿಸುತ್ತಾ ವಿವೇಕಾನಂದರು ಜ್ಯೋತಿಷ್ಯ ನಂಬುತ್ತಿರಲಿಲ್ಲ. ಅವರಿಗೆ ಕರ್ಮ ಸಿದ್ಧಾಂತದ ಬಗ್ಗೆ ಒಲವಿರಲಿಲ್ಲ. ಜಾತೀಯತೆ ಅಸ್ಪೃಶ್ಯತೆಗಳ ವಿರುದ್ಧ ಹೋರಾಡಿದರು. ಅನ್ಯ ಮತಧರ್ಮಗಳ ಬಗ್ಗೆ ಗೌರವಭಾವನೆ ಬೆಳೆಸಲು ಕರೆ ನೀಡಿದರು. ಅಂತರ್ಜಾತಿ ವಿವಾಹವನ್ನು ಬೆಂಬಲಿಸಿದರು. ಈ ದೇಶ ಮುಂದೆ ಶೋಷಣೆಗೆ ಒಳಗಾದ ಜನರ ಸಾಮ್ರಾಜ್ಯವಾಗುತ್ತದೆ ಎಂದು ಹೇಳಿರುವಾಗ ಭಾರತದಲ್ಲಿ ಇಂದು ವಿವೇಕಾನಂದರನ್ನೂ ಆರ್.ಎಸ್.ಎಸ್. ವಿ.ಹೆಚ್.ಪಿ. ಗಳಂತಹ ಶಕ್ತಿಗಳು ವರ್ಣಾಶ್ರಮ ಪದ್ಧತಿ, ಜಾತೀಯತೆ ಉಳಿಸಲು ಪ್ರಯತ್ನಿಸಿರುವ ಶಕ್ತಿಗಳು ತಮ್ಮ ಖಾಸಗಿ ಆಸ್ತಿಯನ್ನಾಗಿ ಮಾಡಿಕೊಳ್ಳುತ್ತಿರುವುದು ಖಂಡನೀಯ ಎಂದು ಹೇಳಿದರು. ಯಾವ ರೀತಿ ಭಾರತ ನೆಲದಲ್ಲಿ ಹುಟ್ಟಿ ಬೆಳೆದ ಬೌದ್ಧ ಧರ್ಮ, ಜೈನ ಧರ್ಮಗಳನ್ನು ಈ ನೆಲದ ಹೊರಗಟ್ಟಿದವೋ ಅದೇ ಶಕ್ತಿಗಳು ವಿವೇಕಾನಂದರನ್ನೂ ಹೊರಗಟ್ಟಲು ವ್ಯವಸ್ಥಿತವಾಗಿ ಪ್ರಯತ್ನಿಸುತ್ತಿದೆ. ಇದರ ವಿರುದ್ಧ ಹೋರಾಡಬೇಕು ಮತ್ತು ಅವರ ಕಪಟ ನಾಟಕವನ್ನು ಬಯಲಿಗೆಳೆಯಬೇಕೆಂದು ಕರೆ ನೀಡಿದರು. ಭಾರತದ ಸಂಸ್ಕೃತಿ ಭೌತವಾದಿ ಸಂಸ್ಕೃತಿ. ಇದರಲ್ಲಿ ಭಾರತದ ಸಂಸ್ಕೃತಿ ಸಾವಿರಾರು ವರ್ಷಗಳಿಂದ ವಿಕಾಸಗೊಂಡಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಮುದಾಯದ ಮಂಗಳೂರು ಕಾರ್ಯದರ್ಶಿ ಫಣಿರಾಜ್‌ರವರು "ಸಂಸ್ಕೃತಿ ಎಂಬುದು ನಿಂತ ನೀರಲ್ಲ ಅದು ಸದಾ ಬದಲಾಗುತ್ತದೆ, ಸಂಸ್ಕೃತಿಯಲ್ಲಿ ಬಹಳಷ್ಟು ಉತ್ತಮ ಅಂಶಗಳು ಇರುವಂತೆ ಕೆಲವು ಕೆಟ್ಟ ಅಂಶಗಳು ಇವೆ. ಅಂದರೆ ಸಂಸ್ಕೃತಿ ತೆರೆದ ಹೃದಯ ಅದು ಎಲ್ಲವನ್ನು ಸ್ವೀಕರಿಸುತ್ತದೆ. ಭಾರತದಲ್ಲಿ ಹಿಂದೂ ಕೋಮುವಾದಿಗಳು ಸಾವಿರಾರು ವರ್ಷಗಳಿಂದ ಬೆಳೆದು ಬಂದು ವಿಲೀನೀಕರಣಗೊಂಡು ರೂಪಿತವಾಗಿರುವ ಭಾರತದ ಸಂಸ್ಕೃತಿಯನ್ನೂ ಅದರ ಬೆಳವಣಿಗೆಯನ್ನು ತಡೆಯಲು ಪ್ರಯತ್ನಿಸುತ್ತಿರುವುದು ಹುಚ್ಚು ಸಾಹಸ. ಚರಿತ್ರೆಯ ಚಕ್ರವನ್ನು ಎಂದೂ ಹಿಂದಕ್ಕೆ ಎಳೆಯಲು ಸಾಧ್ಯವಿಲ್ಲ. ಅದು ಮುಂದಕ್ಕೆ ಹೋಗುವಂತಹುದು" ಎಂದು ಹೇಳಿದರು.

ಪ್ರಶ್ನೋತ್ತರಗಳು ನಡೆದವು. ಜಿಲ್ಲಾ ಡಿ.ವೈ.ಎಫ್.ಐ ಕಾರ್ಯದರ್ಶಿ ಕೆ. ಯಾದವ ಶೆಟ್ಟಿ ಸ್ವಾಗತಿಸಿದರು.

ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಹೋರಾಟಕ್ಕೆ ಕರೆ

ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡುತ್ತಾ ದೇಶದ ಜನತೆಯನ್ನು ಆರ್ಥಿಕ ಸಮಸ್ಯೆಗಳ ವಿರುದ್ಧ ಹೋರಾಟದ ದಾರಿ ತಪ್ಪಿಸಲು ಕೋಮುವಾದಿ ಸಂಘಟನೆ ಮತ್ತು ಪಕ್ಷಗಳು ಕಾರ್ಯವೆಸಗುತ್ತಿದ್ದು, ದೇಶದ ಜಾತ್ಯತೀತ, ಪ್ರಜಾಪ್ರಭುತ್ವ, ಸಂವಿಧಾನ, ನ್ಯಾಯಾಲಯಗಳಿಗೆ ಹೊಡೆತ ನೀಡುತ್ತಾ ದೇಶದ ಸಮಗ್ರತೆ ಮತ್ತು ಐಕ್ಯತೆಯನ್ನು ನಾಶ ಮಾಡುತ್ತಿವೆ. ಫ್ಯಾಸಿಸ್ಟ್ ಮಾದರಿಯಲ್ಲಿ ದೇಶದ ಹಿಂದುಳಿದ ಜಾತಿ ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡುತ್ತಿರುವ ಈ ಶಕ್ತಿಗಳನ್ನು ಎದುರಿಸಲು ಯುವಜನಗಳು ಅಣಿಯಾಗಬೇಕೆಂದು ತಾ. 17,1,1993 ರಂದು ಮಂಗಳೂರಿನಲ್ಲಿ ನಡೆದ ಡಿ.ವೈ.ಎಫ್.ಐ. ಮಂಗಳೂರು ನಗರ ಸಮ್ಮೇಳನವನ್ನು ಉದ್ಘಾಟಿಸುತ್ತಾ ಮಂಗಳೂರು ಸಮುದಾಯ ಕಾರ್ಯದರ್ಶಿ ಫಣಿರಾಜ್ ವಿನಂತಿಸಿದರು.

ಧ್ವಜಾರೋಹಣವನ್ನು ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್ (ಬಿ.ಇ.ಎಫ್.ಐ) ನಾಯಕರಾದ ಬಿ.ಎಂ. ಮಾಧವ ನೆರವೇರಿಸಿದರು. ಮಹಾನಗರ ಪಾಲಿಕೆಯ ಸದಸ್ಯ ಜಿ. ಸದಾಶಿವ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಎಂಪ್ಲಾಯಿಸ್ ಯೂನಿಯನ್ ಏರಿಯಾ ಕಾರ್ಯದರ್ಶಿ ಸಂಜೀವ ಬಳ್ಕೂರ್, ವಿಚಾರವಾದಿ ವೇದಿಕೆಯ ಸಂಚಾಲಕರಾದ ನರೇಂದ್ರ ನಾಯಕ್, ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ದ.ಕ ಜಿಲ್ಲಾ ಸಹಕಾರ್ಯದರ್ಶಿ ರಾಮ್‌ದಾಸ್, ದಕ್ಷಿಣ ರೈಲ್ವೆ ಎಂಪ್ಲಾಯಿಸ್ ಯೂನಿಯನ್ (ಡಿಆರ್‌ಇಯು) ಕಾರ್ಯದರ್ಶಿ ಮೆಹಬೂಬ್ ಶುಭ ಕೋರಿ ಮಾತನಾಡಿದರು.

ಮಂಗಳೂರು ನಗರ ಸಮಿತಿಯ ಕಾರ್ಯದರ್ಶಿ ಕೆ. ಯಾದವ ಚಟುವಟಿಕೆ ವರದಿ ಮಂಡಿಸಿದರು. ಜನವರಿ 30 ರಂದು ಕೋಮುವಾದಿ ವಿರೋಧಿ ರ್‍ಯಾಲಿಯನ್ನು ಬೆಂಬಲಿಸುವ, ವೆನ್‌ಲಾಕ್ ಹಾಗೂ ಲೇಡಿಗೋಶನ್ ಸರಕಾರಿ ಆಸ್ಪತ್ರೆಯ ಅವ್ಯವಸ್ಥೆಯನ್ನು ಪರಿಹರಿಸಲು ಒತ್ತಾಯಿಸುವ, ಕುಲಶೇಖರ, ಕೆ.ಎಂ.ಎಫ್. ಕೊಳೆತ ನೀರನ್ನು ಶಾಶ್ವತವಾಗಿ ಬೇರೆಡೆಗೆ ಸಾಗಿಸಲು ಒತ್ತಾಯಿಸುವ, ಮಂಗಳೂರು ತೈಲಾಗಾರ ಮತ್ತು ಕೊಂಕಣ ರೈಲ್ವೆಯನ್ನು ಕೂಡಲೇ ಪ್ರಾರಂಭಿಸಬೇಕು ಮತ್ತು ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯ ರಸ್ತೆಗಳನ್ನು ಡಾಮರೀಕರಣಗೊಳಿಸಬೇಕೆಂದು ಒತ್ತಾಯಿಸುವ ನಿರ್ಣಯಗಳನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು.

ಮುಂದಿನ ಸಾಲಿಗೆ ಅಧ್ಯಕ್ಷರಾಗಿ ಕೃಷ್ಣಪ್ಪ ಕೊಂಚಾಡಿ, ಉಪಾಧ್ಯಕ್ಷರಾಗಿ ಚಂದ್ರಹಾಸ್, ಜೆ. ಸುಚಾತ, ಕೆ.ಪಿ. ಅಶೋಕ್ ಶ್ರೀಯಾನ್, ಕಾರ್ಯದರ್ಶಿಯಾಗಿ ನೆಲ್ಸನ್ ರೋಚ್, ಸಹಕಾರ್ಯದರ್ಶಿಗಳಾಗಿ ಉದಯಕುಮಾರ್ ಎನ್. ಶೆಟ್ಟಿ, ಪುಷ್ಪರಾಜ್, ಖಜಾಂಚಿಯಾಗಿ ರವಿಚಂದ್ರ, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಅಶೋಕ್ ಸಾಲಿಯಾನ್, ಕ್ರೀಡಾ ಕಾರ್ಯದರ್ಶಿಯಾಗಿ ಸತೀಶ್ ಕುಮಾರ್ ಬಜಾಲ್‌ರವನ್ನೊಳಗೊಂಡ 23 ಮಂದಿಯ ನೂತನ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಡಿ.ವೈ.ಎಫ್.ಐ ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷರಾದ ವಸಂತ ಆಚಾರಿ ಸಮಾರೋಪ ಭಾಷಣ ಮಾಡಿದರು.

ಕಾರ್ಪೋರೇಟರ್ ಜಿ. ಸದಾಶಿವ ಶೆಟ್ಟಿ, ಜಿ. ಚಂದ್ರಹಾಸ್ ಮತ್ತು ಅಶೋಕ್ ಶ್ರೀಯಾನ್‌ರವನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿ ಪ್ರತಿನಿಧಿ ಅಧಿವೇಶನ ನಡೆಸಿಕೊಟ್ಟಿತು. ನಿಕಟಪೂರ್ವ ಅಧ್ಯಕ್ಷರಾದ ಜಿ. ಸದಾಶಿವ ಶೆಟ್ಟಿ ಡಿ.ವೈ.ಎಫ್.ಐ.ಯ ತಮ್ಮ ಅನುಭವಗಳನ್ನು ವಿವರಿಸಿದರು.

: ಜಿ. ಚಂದ್ರಹಾಸರವರು ಸ್ವಾಗತಿಸಿದರು ಕೃಷ್ಣಪ್ಪ ಕೊಂಚಾಡಿ ವಂದಿಸಿದರು.

ಪರಲೋಕದಲ್ಲಿ ಒಳ್ಳೆಯ ಜೀವನ ಕೊಡುವ ಭರವಸೆ ನೀಡಿ ಈ ಜೀವನದಲ್ಲಿ ರೊಟ್ಟಿಯನ್ನು ಕೊಡದ ಆ ಭಗವಂತನ ವಿರುದ್ಧ ನನ್ನ ಹೋರಾಟ

- ವಿವೇಕಾನಂದ

'ಸಂಸ್ಕೃತಿ ಕೆ ಚಾರ್ ಅಧ್ಯಾಯ' ಪುಸ್ತಕದಿಂದ

ಸಮಾಜಘಾತುಕ ಶಕ್ತಿಗಳಿಗೆ ಶಿಕ್ಷೆಗೆ ಒತ್ತಾಯ


ಉಳ್ಳಾಲ : ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿ ಸಭೆ ಇತ್ತೀಚೆಗೆ ನಡೆಯಿತು.

ಡಿಸೆಂಬರ್ 6 ರ ಘಟನೆಯ ನಂತರ ದೇಶದಲ್ಲಿ ಉದ್ಭವಿಸಿದ ಪರಿಸ್ಥಿತಿ ಬಗ್ಗೆ ಪಕ್ಷದ ಕೇಂದ್ರ ಸಮಿತಿ ಕೈಗೊಂಡ ತಿರ್ಮಾನಗಳನ್ನು ಬಿ. ಮಾಧವ ಕಾರ್ಯಕರ್ತರಿಗೆ ವಿವರಿಸಿದರು, ರಾಮಚಂದ್ರ ಉಚ್ಚಿಲ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಡಿ. 6 ನಂತರ ಉಳ್ಳಾಲ ಪ್ರದೇಶದಲ್ಲಿ ನಡೆದ ದೊಂಬಿ, ಲೂಟಿ, ಆಕ್ರಮಣಗಳಲ್ಲಿ ತೊಡಗಿದ್ದ ಸಮಾಜಘಾತುಕ ಶಕ್ತಿಗಳನ್ನು ಪತ್ತೆಹಚ್ಚಿ ಶಿಕ್ಷಿಸಬೇಕು ಇಲ್ಲದಿದ್ದರೆ ಇದರಿಂದ ಲಾಭ ಪಡೆಯುವವರು ಮತ್ತೆ ಮತ್ತೆ ಅಧಿಕಾರಕ್ಕಾಗಿ ಹವಣಿಸಿ ಜನರು ಶಾಂತಿ ನೆಮ್ಮದಿಯಿಂದ ಬದುಕುವುದೇ ದುಸ್ತರವಾಗುವುದು ಎಂದು ಸಮಿತಿ ಕಾರ್ಯದರ್ಶಿ ಯು. ಜನಾರ್ದನ ನಾಯಕ್ ಹೇಳಿದ್ದಾರೆ.

ಸರಕಾರಿ ವಲಯದ ಬ್ಯಾಂಕ್‌ಗಳ ನಾಶದ ಪ್ರಯತ್ನ

ಉದಾರೀಕರಣದ ಹಾದಿಯಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯ ಬಗೆಗೆ ನರಸಿಂಹಮ್ ಸಮಿತಿ ನೀಡಿದ ವರದಿಯಲ್ಲಿನ ಶಿಫಾರಸ್ಸುಗಳನ್ನು ಸರ್ಕಾರ ಶಿರಸಾವಹಿಸಿ ಅನುಷ್ಠಾನಗೊಳಿಸುತ್ತಿದೆ. ಈಗ ಈ ಉದಾರೀಕರಣದ ದೊಡ್ಡ ಕಂತು ಅಂದರೆ ಖಾಸಗಿ ಬ್ಯಾಂಕುಗಳ ಸ್ಥಾಪನೆಗೆ ಮಾರ್ಗದರ್ಶನಗಳು ಹೊರಬಂದಿವೆ.



ನರಸಿಂಹರಾವ್ ಸರಕಾರದ 20ನೇ ತಿಂಗಳಲ್ಲಿ

ಭಾರತದ ಬ್ಯಾಂಕಿಂಗ್ ಕ್ಷೇತ್ರ ಪರಿಪೂರ್ಣವಾಗಿದೆ ಎಂದು ಯಾರೂ ಹೇಳುವುದಿಲ್ಲ. ಆದರೆ 1969 ರಿಂದ ಸರ್ಕಾರಿ ಸ್ವಾಮ್ಯದಲ್ಲೇ ಇರುವ ಬ್ಯಾಂಕುಗಳ ಕಾರ್ಯನಿರ್ವಹಣೆಯಲ್ಲಿ ನ್ಯೂನತೆಗಳಿವೆಯೆಂದರೆ ಅವಕ್ಕೆ ಇವುಗಳ ಸ್ವಾಮ್ಯ ಹೊಂದಿರುವ ಸರ್ಕಾರ ಪೂರ್ಣವಾಗಿ ಹೊಣೆ. ಈಗ ಸರ್ಕಾರ, ಆರೋಗ್ಯಪೂರ್ಣ ಸ್ಪರ್ಧೆಯ ಅವಶ್ಯಕತೆಗಾಗಿ ಖಾಸಗಿ ಕ್ಷೇತ್ರದಲ್ಲಿ ಬ್ಯಾಂಕುಗಳನ್ನು ಪ್ರೋತ್ಸಾಹಿಸಬೇಕಾಗಿದೆ ಎಂದರೆ ಅದನ್ನು ಒಪ್ಪಲು ಸಾಧ್ಯವಿಲ್ಲ.

ಈ ಖಾಸಗೀಕರಣದ ಪ್ರಯತ್ನವನ್ನು ಹಿಂಬಾಗಿಲಿನಿಂದ ಮಾಡಿರುವ ಸರ್ಕಾರ ಮತ್ತೆ ಜನರ ಕಣ್ಣಿಗೆ ಮಣ್ಣೆರಚುವ ಕೆಲಸ ಮಾಡಿದೆ. ಖಾಸಗಿ ಬ್ಯಾಂಕುಗಳ ಆದ್ಯತೆಯ ವಲಯಕ್ಕೆ ಸಾಲ ನೀಡಬೇಕು, ಎಷ್ಟೇ ಶೇರು ಹೊಂದಿದ್ದರೂ ಶೇ. 1. ರಷ್ಟು ಮತದಾನ ಹಕ್ಕು ಒಬ್ಬರಿಗೆ ಇರುತ್ತದೆ, ಬಂಡವಾಳ ಸಮರ್ಪಕ ಪ್ರಮಾಣದಲ್ಲಿ ಇರಬೇಕು. ಇತ್ಯಾದಿ ಷರತ್ತುಗಳನ್ನು ಸರ್ಕಾರ ತೋರುತ್ತದೆ, ಆದರೆ ಇವೆಲ್ಲವೂ ಐ.ಎಂ.ಎಫ್ ಮತ್ತು ವಿಶ್ವಬ್ಯಾಂಕುಗಳ ಷರತ್ತುಗಳು ಮತ್ತು ಈ ಯಾವ ಷರತ್ತುಗಳೂ ಮುಂಬರುವ ದಿನಗಳಲ್ಲಿ ಜನಸಾಮಾನ್ಯರ ನೆರವಿಗೆ ಬರುವುದಿಲ್ಲ ಎಂಬುದಂತೂ ಖಂಡಿತ.

ಆಳುವವರ್ಗದಹಿತಕಾಪಾಡಲುಹುಟ್ಟಿ-

ಬಹುವಾದ ಖಾಸಗಿ ಬ್ಯಾಂಕುಗಳು ಸರ್ಕಾರೀ ವಲಯದ ಬ್ಯಾಂಕುಗಳನ್ನು ಹಂತ ಹಂತವಾಗಿ ಕೊಂದು ದೇಶದ ಜನ ಸಾಮಾನ್ಯರನ್ನು ಅನಾಥರನ್ನಾಗಿಸಲಿದೆ.

ನರಸಿಂಹಮ್ ಸಮಿತಿ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವಂತೆ ಒತ್ತಡ ಹೇರುತ್ತಿರುವ ವಿಶ್ವ ಬ್ಯಾಂಕ್ ಕೂಟ ತನ್ನ ಕಾರ್ಯಚರಣೆಯಲ್ಲಿ ದೊಡ್ಡ ಪ್ರಗತಿ ಸಾಧಿಸಿದಂತಾಗಿದೆ.

ಮುಂಬಯಿ : ರಫ್ತು ಸ್ಥಗಿತ

ಮುಂಬಯಿಯ ಕೋಮು ದಳ್ಳುರಿಯಿಂದಾಗಿ ಮುಂಬಯಿಯ ಸಾಂತಾ ಕ್ರೂಝ್ ಇಲೆಕ್ಟ್ರಾನಿಕ್ ರಫ್ತು ಅಭಿವೃದ್ಧಿ ವಲಯದಿಂದ ರಫ್ತು ಸ್ಥಗಿತಗೊಂಡಿದೆ. ಈ ವಲಯದಲ್ಲಿ ಇಲೆಕ್ಟ್ರಾನಿಕ್ ವಸ್ತುಗಳು, ಆಭರಣಗಳು ಇತ್ಯಾದಿಗಳನ್ನು ರಫ್ತು ಮಾಡುವ 123 ಘಟಕಗಳಿವೆ.

12000 ಕೆಲಸಗಾರರಿರುವ ಈ ವಲಯದಲ್ಲಿ ಇಂದಿಗೂ ಶೇ. 30 ರಷ್ಟು ಕೆಲಸಗಾರರು ಕೆಲಸಕ್ಕೆ ಹಾಜರಾಗುತ್ತಿಲ್ಲ. ಬರುವ ಕೆಲಸಗಾರರು ಬೇಗ ಹೊರಡುತ್ತಾರೆ ವಿದೇಶೀ ವಿನಿಮಯದ ಅಭಾವ ತೀವ್ರವಾಗಿರುವ ಈ ಸಂದರ್ಭದಲ್ಲಿ ಈ ಕೋಮು ದಂಗೆ ದೇಶವನ್ನು ಇನ್ನೂ ಹಿಂದಕ್ಕೆ ತಳ್ಳಲಿದೆ.

ಸಿಟಿ ಬ್ಯಾಂಕ್‌ನ ಅಸಹಜ ವ್ಯವಹಾರಗಳು

ಸಿಟಿ ಬ್ಯಾಂಕ್ ಎಂಬ ವಿದೇಶಿ ಬ್ಯಾಂಕ್ ಅಮೇರಿಕದ ಬ್ಯಾಂಕ್ ಜಂಟಿ ಪಾರ್ಲಿಮೆಂಟರಿ ಸಮಿತಿಗೆ ಒಪ್ಪಿಸಿರುವ ದಾಖಲೆಗಳಲ್ಲಿ ಕೆಲವು ತೀರ ಅಸಹಜ ಮತ್ತು ಸಂದೇಹಾಸ್ಪದ ವ್ಯವಹಾರಗಳು ಕಂಡು ಬಂದಿವೆ. ಶೇರು ಹಗರಣದ ಮೂಲವಾದ ರೆಡಿ-ಫಾರ್ವರ್ಡ್ ವ್ಯವಹಾರಗಳನ್ನು ತಾನು ಮಾಡೇ ಇಲ್ಲ ಎಂಬ ಸಿಟಿಬ್ಯಾಂಕ್‌ನ ಸುಳ್ಳು ಬಯಲಿಗೆ ಬರುವ ಲಕ್ಷಣಗಳು ಕಾಣುತ್ತಿವೆ.

ಅಂತಹ ಒಂದು ಖಾತೆಯೆಂದರೆ ಗ್ಲಾಸಿಮ್ ಲಿ ಎಂಬ ಕಂಪನಿಯದು. ಈ ಕಂಪನಿಯದು ಸಿಟಿ ಬ್ಯಾಂಕ್‌ನಲ್ಲಿ ನಾಲ್ಕು ಖಾತೆಗಳಿವೆ. ಈ ಖಾತೆಗಳಲ್ಲಿನ ಗರಿಷ್ಠ ವ್ಯವಹಾರದ ಮಟ್ಟ ತಿಳಿಯದು. ಆದರೆ ಇತರ ವಿವರಗಳ ಪ್ರಕಾರ ಗ್ರಾಸಿಮ್ 49.28 ಕೋಟಿ ರೂಪಾಯಿಗಳನ್ನು ಪೋರ್ಟ್‌ಪೋಲಿಯೊ ಮ್ಯಾನೇಜ್‌ಮೆಂಟ್ ಯೋಜನೆಯಲ್ಲಿ ತೊಡಗಿಸಿದೆ. ಗ್ರಾಸಿಮ್‌ನ ಬಂಡವಾಳ ಇತ್ಯಾದಿಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡರು ಈ ಯೋಜನೆಯಡಿ ರೂ 300 ಕೋಟಿಗೂ ಹೆಚ್ಚು ತೊಡಗಿಸುವಂತಿಲ್ಲ. ಆದರೆ ಸಿಟಿ ಬ್ಯಾಂಕ್ ರೂ 3228.21 ಕೋಟಿಗಳ ಬೆಲೆಯ ಯೂನಿಟ್‌ಗಳನ್ನು ಖರೀದಿಸಿದೆ. ಮೇ 6ನೇ ತಾರೀಖಿನಂದು ಒಂದೇ ದಿನದಲ್ಲಿ ಸಿಟಿ ಬ್ಯಾಂಕ್ ರೂ 1382 ಕೋಟಿಗಳ ಯೂನಿಟ್‌ಗಳನ್ನು ಖರೀದಿಸಿದೆ.

ಗ್ರಾಸಿಮ್‌ನದು ಬರೀ ರೂ 300 ಕೋಟಿ-

ಶೇರು ಹಗರಣ

ಗಳಿದ್ದರೆ ಇಷ್ಟೊಂದು ದೊಡ್ಡ ಮೊತ್ತದ ಯೂನಿಟ್‌ಗಳನ್ನು ಸಿಟಿಬ್ಯಾಂಕ್ ಯಾಕೆ ಖರೀದಿಸಿತು.

ಜಾನಕಿರಾಮನ್ ಸಮಿತಿಯ ವರದಿ ಈ ಬ್ಯಾಂಕ್‌ಲಾಭಗಳಿಸಲು ಬೇನಾಮಿ ಗ್ರಾಹಕರ ಹೆಸರಿನಲ್ಲಿ ವ್ಯವಹಾರ ನಡೆಸುತ್ತಿತ್ತು ಎಂದಿದೆ. ಇದೂ ಅಂತಹ ಒಂದು ವ್ಯವಹಾರ ಇರಬಹುದಲ್ಲವೇ ?

ಈ ಬ್ಯಾಂಕ್‌ನ ವ್ಯವಹಾರಗಳನ್ನು ತನಿಖೆಮಾಡಿದ ಭಾರತೀಯ ರಿಸರ್ವ್ ಬ್ಯಾಂಕ್‌ನ ಕಲ್ಯಾಣಿವಾಲಾ ಮಿಸ್ತ್ರಿ ಬ್ಯಾಂಕಿನ ಬಗ್ಗೆ ನಕಾರಾತ್ಮಕ ವರದಿ ನೀಡಿದ್ದಾರೆ. ಇದೇ ಸಮಯದಲ್ಲಿ ಅಮೇರಿಕದ ಫೆಡರಲ್ ರಿಸರ್ವ್ ಅಧಿಕಾರಿಗಳೂ ಸಹ ಭಾರತಕ್ಕೆ ಬಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿರುವುದಾಗಿ ತಿಳಿದುಬಂದಿದೆ. ಅಮೇರಿಕದ ಕೇಂದ್ರೀಯ ಬ್ಯಾಂಕ್ ಸಹ ಸಿಟಿ ಬ್ಯಾಂಕ್ ಅನ್ನು ಆರೋಪಮುಕ್ತಗೊಳಿಸುವ ಸಾಧ್ಯತೆ ಕಡಿಮೆ ಎಂದು ಹೇಳಲಾಗಿದೆ.

ಕೃಷ್ಣ ಮೂರ್ತಿಯ ವಾರಸುದಾರ

ಹಿಂದೆ ಸರ್ಕಾರಿ ವಲಯದ ಮಾರುತಿ ಉದ್ಯೋಗ ಲಿ.ನ ಅಧ್ಯಕ್ಷರಾಗಿದ್ದ ಕೃಷ್ಣಮೂರ್ತಿ ಈ ಸಂಸ್ಥೆ ಬಿಡುವಾಗ ತಮ್ಮ ಕೃತ್ಯಗಳಿಗೆ ಒಬ್ಬ ವಾರಸುದಾರನನ್ನು ಬಿಟ್ಟು ಹೋಗಿರುವುದು ಈಗ ಸುದ್ದಿ. ಕೃಷ್ಣ ಮೂರ್ತಿಯ ನಂತರ ಆ ಸ್ಥಾನಕ್ಕೆ ಬಂದ ಆರ್.ಸಿ. ಭಾರ್ಗವನೂ ಹಗರಣಕಾರನೇ. ಈ ಹಗರಣಗಳ ತನಿಖೆ ನಡೆಸುತ್ತಿರುವ ಸಿಬಿಐ ಈತನ ವಿರುದ್ಧವೂ ಮೊಕದ್ದಮೆ ಹೂಡಿದೆ.

ಭಾರ್ಗವ ಕೃಷ್ಣಮೂರ್ತಿಯ ಜೊತೆಗೂಡಿ ಕೃಷ್ಣಮೂರ್ತಿಯ ಮಗ ಜಯಕರನ ವಹಿವಾಟುಗಳಿಗೆ ನೆರವು ನೀಡಿದ್ದಾನೆ ಎಂದು ಮೊಕದ್ದಮೆಯಲ್ಲಿ ಆಪಾದಿಸಲಾಗಿದೆ. ಈಗಿನ ಆರೋಪ ಕೃಷ್ಣಮೂರ್ತಿಯ ಮೇಲಿನ ಹಿಂದಿನ ಎಲ್ಲ ಆರೋಪಗಳಿಗಿಂತ ದೊಡ್ಡದಾಗಬಹುದು ಎಂದು ಬಲ್ಲ ಮೂಲಗಳು ಹೇಳುತ್ತಿವೆ.

ಕೃಷ್ಣಮೂರ್ತಿಯ ಮಕ್ಕಳು ನಡೆಸುತ್ತಿರುವ ಹೈಡ್ರೋಲಿಕ್ ಕಂಪನಿಗೆ ಕೋಟ್ಯಂತರ ರೂಪಾಯಿಗಳ ವ್ಯವಹಾರ ನೀಡಿದ ಕೃಷ್ಣಮೂರ್ತಿ ಮತ್ತು ಭಾರ್ಗವ ಇತರೆ ಕಂಪನಿಗಳನ್ನು ದೂರವಿಟ್ಟಿದ್ದರು.

ಇನ್ನೂ ಹಲವು ಮೊಕದ್ದಮೆಗಳ[illegible] ಹೂಡಲಿರುವ ಸಿ.ಬಿ.ಐ ಕೃಷ್ಣಮೂರ್ತಿ[illegible] ಇನ್ನೆಷ್ಟು ಭ್ರಷ್ಟ ರೀತಿಗಳನ್ನು ದಾಖಲೆಗಳ[illegible] ಹೊಂದಿವೆಯೋ?

ಇಂತಹ ಖದೀಮ ಯೋಜನಾ ಆಯೋಗದ ಸದಸ್ಯನಾಗುವುದು ನಮ್ಮ ವ್ಯವಸ್ಥೆಯ[illegible] ಇನ್ನೆಲ್ಲಿ ಸಾಧ್ಯ ?

ಕ್ಯೂಬಾದಿಂದ ಕಾಂ.ಸುರ್ಜಿತ್‌ರವರ ಪತ್ರ

ಮಾನ್ಯ ಪ್ರಧಾನ ಮಂತ್ರಿಗಳೇ, ಈಗಲಾದರೂ ದೃಢ ಕ್ರಮ ಕೈಗೊಳ್ಳಿ



ಜಾತ್ಯತೀತ ಶಕ್ತಿಗಳಿಂದ ಅಭೂತಪೂರ್ವ ಸಹಕಾರ ದೊರೆತರೂ , ನಮ್ಮ ದೇಶದ ಪ್ರಧಾನಮಂತ್ರಿಗಳು ಯಾವ ದುಷ್ಟ ಶಕ್ತಿಗಳ ವಿರುದ್ಧ ಸಮರ ನಡೆಸಬೇಕಾಗಿದೆಯೋ ಅಂತಹ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳುತ್ತಿದ್ದಾರೆ. ಏಕೆಂದು ನನಗೆ ತಿಳಿಯುತ್ತಿಲ್ಲ ಎಂದು ಸಿಪಿಐ(ಎಂ) ಪ್ರಧಾನಕಾರ್ಯದರ್ಶಿಗಳು ದೇಶಪ್ರೇಮಿ ಶಕ್ತಿಗಳ ಕಸಿವಿಸಿಗೆ ದನಿ ನೀಡಿದ್ದರು ಜನವರಿ 4 ರಂದು ಕ್ಯೂಬಾದ ರಾಜಧಾನಿ ಹವಾನಾದಿಂದ ಬರೆದ ಈ ಪತ್ರದಲ್ಲಿ. ಪ್ರಧಾನಮಂತ್ರಿಗಳ ವಿಚಿತ್ರವೆಂದು ಕಂಡು ಬರುವ ನಡವಳಿಕೆಗಳ ಪರಿಶೀಲನೆ ನಡೆಸಿರುವ ಈ ಪತ್ರವನ್ನು ನಮ್ಮ ಓದುಗರಿಗಾಗಿ ಇಲ್ಲಿ ಪ್ರಕಟಿಸುತ್ತಿದ್ದೇವೆ.

ಪ್ರಿಯ ಶ್ರೀ ನರಸಿಂಹರಾವ್,

ನಾನಿಲ್ಲಿ ಕಣ್ಣಿನ ಚಿಕಿತ್ಸೆ ಪಡೆಯುತ್ತಿದ್ದೇನೆ ಎಂದು ನಿಮಗೆ ತಿಳಿದಿರಬಹುದು. ಸ್ವದೇಶದಲ್ಲಿನ ಬೆಳವಣಿಗೆಗಳಿಂದ ನನಗೆ ಚಿಂತೆಯಾಗಿದೆ. ಈ ಆಳವಾದ, ಅಭೂತಪೂರ್ವವಾದ ಬಿಕ್ಕಟ್ಟಿನ ವೇಳೆಯಲ್ಲಿ ನನ್ನ ಜನರೊಂದಿಗಿರಲು ನಾನು ಬೇಗನೇ ವಾಪಾಸು ಬರಲು ಇಚ್ಛಿಸುತ್ತೇನೆ. ಹಿಂದೆಂದೂ ಕಾಣದ ರೀತಿಯಲ್ಲಿ ಕೋಮುವಾದದ ಕರಾಳ ಶಕ್ತಿಗಳು ನಮ್ಮ ಸಮಾಜದ ಜಾತ್ಯತೀತ ತಳಪಾಯದ ಮೇಲೆಯೇ ಧಾಳಿಯನ್ನು ಕೇಂದ್ರೀಕರಿಸುತ್ತಾ ರಾಷ್ಟ್ರೀಯ ಐಕ್ಯತೆಗೆ ಬೆದರಿಕೆಯೊಡ್ಡಿದ್ದಾರೆ. ಕೋಮು ಆಧಾರದ ಮೇಲೆ ದೇಶದಲ್ಲಿ ಒಂದು ಶಾಶ್ವತ ಧ್ರುವೀಕರಣ ಉಂಟುಮಾಡುವುದೇ ಅವರ ಉದ್ದೇಶ. ಈ ಸಂದರ್ಭದಲ್ಲಿ ಮಹಾತ್ಮಗಾಂಧಿಯ, ಪಂಡಿತ್ ನೆಹರೂರವರ ಪರಂಪರೆಯನ್ನು ಮುಂದುವರೆಸಬಹುದೆಂಬ ನಿರೀಕ್ಷೆ ಸಹಜವೇ. ದುರದೃಷ್ಟವಶಾತ್, ನಿಮ್ಮ ಪ್ರತಿಯೊಂದು ಹೆಜ್ಜೆಯಲ್ಲೂ ನಾವು ಕಾಣುತ್ತಿರುವುದು ಈ ದೇಶವನ್ನು ಹಾಳುಗೆಡವಲು ತತ್ಪರರಾಗಿರುವ ಶಕ್ತಿಗಳೊಂದಿಗೆ ನೀತಿ ಬಾಹಿರವಾಗಿ ರಾಜಿಮಾಡಿಕೊಳ್ಳುವ ಪ್ರಯತ್ನವಷ್ಟೆ.

ಹವಾನಕ್ಕೆ ತೆರಳುವ ಮೊದಲು ಡಿಸೆಂಬರ್ 25 ರಂದು ನಿಮ್ಮೊಡನೆ ಮಾತನಾಡುವಾಗ ನಾನು ಕೋಮುವಾದಿಗಳ ಸವಾಲನ್ನು ದೃಢವಾಗಿ ಎದುರಿಸಲು, ರಾಷ್ಟ್ರೀಯ ಐಕ್ಯತೆ, ರಕ್ಷಿಸಲು ಎಲ್ಲಾ ಜಾತ್ಯತೀತ ಶಕ್ತಿಗಳನ್ನು ಒಗ್ಗೂಡಿಸುವ ಅಗತ್ಯದ ಬಗ್ಗೆ ನಿಮಗೆ ಮನವರಿಕೆ ಮೂಡಿಸಲು ಯತ್ನಿಸಿದ್ದೆ. ಎಲ್ಲಾ ದೇಶಪ್ರೇಮಿ, ಜಾತ್ಯತೀತ ಶಕ್ತಿಗಳನ್ನು ಒಗ್ಗೂಡಿಸಬಹುದಾದ ಕ್ರಮಗಳನ್ನು ಸೂಚಿಸಿದ್ದೆ.

1.) ಮಸೀದಿಯನ್ನು ನಾಶಮಾಡಿದ ನಂತರ ವಿಗ್ರಹಗಳನ್ನು ಸ್ಥಾಪಿಸಿದ ಜಾಗದಲ್ಲಿ ಯಾವುದೇ "ದರ್ಶನ"ಕ್ಕೆ ಅವಕಾಶ ನೀಡಬಾರದು, ಏಕೆಂದರೆ ಇದು ಇನ್ನಷ್ಟು ಕೋಮುಗಲಭೆಗೆ ಕಾರಣವಾಗಬಹುದು. 2.) ನ್ಯಾಯಾಲಯದ ಅಂತಿಮ ತೀರ್ಪು ಬರುವವರೆಗೆ ಎಲ್ಲಾ ವಿವಾದಿತ ಜಾಗಗಳನ್ನು 'ರಾಮಕಥಾಕುಂಜ'ವನ್ನು ಕೂಡಾ ಕೇಂದ್ರ ತನ್ನ ಸುಪರ್ದಿಗೆ ತಗೊಳ್ಳಬೇಕು. 3) ಈ ವಿವಾದಕ್ಕೆ ಸಂಬಂಧವಾಗಿರುವ ಎಲ್ಲಾ ಕೋರ್ಟ್ ಕೇಸುಗಳನ್ನು ಸಂವಿಧಾನದ 138 (2) ಕಲಮಿನ ಪ್ರಕಾರ ಸುಪ್ರೀಂಕೋರ್ಟಿನ ಒಂದು ವಿಶೇಷ ಪೀಠಕ್ಕೆ ತ್ವರಿತ ತೀರ್ಪಿಗಾಗಿ ಒಪ್ಪಿಸಬೇಕು. ಇದಲ್ಲದೆ ಸಂವಿಧಾನ ಮತ್ತು ಕಾನೂನಿನ ಶಾಸನವನ್ನು ರಕ್ಷಿಸಲು ಒಂದಾಗಿ ಎಂದು ದೇಶಬಾಂಧವರಿಗೆ ನೀವು ಒಂದು ವಿಶೇಷ ಮನವಿ ಮಾಡಿಕೊಳ್ಳಬೇಕು ಎಂದು ಕೇಳಿಕೊಂಡಿದ್ದೆ.

ನೀವು ಬೆಳೆದು ಬರುತ್ತಿರುವ ಗಂಭೀರ ಪರಿಸ್ಥಿತಿಯ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರಿಂದ ದೇಶದ ವ್ಯಾಪಕ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮೆದುರು ಇರುವ ಸವಾಲನ್ನು ಎದುರಿಸುವ ಉದ್ದೇಶವುಳ್ಳ ಈ ಪ್ರಸ್ತಾಪಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ನಾನು ಭಾವಿಸಿದ್ದೆ. ಆದರೆ ನಂತರ ಸರಕಾರ ಕೈಗೊಂಡ ಕ್ರಮಗಳು ತದ್ವಿರುದ್ಧವಾಗಿದ್ದವು.

ಡಿಸೆಂಬರ್ ಕೊನೆಯ ವೇಳೆಗೆ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ವಿಸ್ತೃತ ಸಭೆ ಬಿ.ಜೆ.ಪಿ.-ಆರ್.ಎಸ್.ಎಸ್.-ವಿ.ಹೆಚ್.ಪಿ. ನೇತೃತ್ವದ ಕೋಮುವಾದಿ ಶಕ್ತಿಗಳ ವಿರುದ್ಧ ನೀಡಿದ ಹೋರಾಟದ ಕರೆ ಜಾರಿಗೆ ಬರುತ್ತದೆ. ಕಾಂಗ್ರೆಸ್ ಮುಂದೊತ್ತಿ ಬರುತ್ತಿರುವ ಕೋಮುಧಾಳಿಗಳ ವಿರುದ್ಧ ಸಮರವನ್ನು ಸೇರಿಕೊಳ್ಳುತ್ತದೆ ಎಂದು ದೇಶದ ಜಾತ್ಯಾತೀತರು ಆಸೆಯಿರಿಸಿಕೊಂಡಿದ್ದರು. ಕೊನೆಗೂ ಕಾಂಗ್ರೆಸ್ ದೇಶದ ಮುಂದಿರುವ ಅಪಾಯವನ್ನು ಅರಿತುಕೊಂಡು, ಇನ್ನು ಮುಂದೆಂದೂ ಈ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳುವುದಿಲ್ಲ, ಸಂಕುಚಿತ ರಾಜಕೀಯ ಲಾಭಗಳಿಗಿಂತ ದೇಶದ ಹಿತಾಸಕ್ತಿಗೆ ಆದ್ಯತೆ ನೀಡುತ್ತದೆ ಎಂದು ಅವರು ಭಾವಿಸಿದರು. ನಂತರದ ನಿಮ್ಮ ಕ್ರಮಗಳೆಲ್ಲಾ ಈ ಆಸೆಗಳಿಗೆಲ್ಲಾ ತಣ್ಣೀರೆರಚಿದೆ ಮಾತ್ರವಲ್ಲ ಕಾಂಗ್ರೆಸ್ ದೊಡ್ಡದಾಗಿ ಹೇಳಿಕೊಂಡುದಕ್ಕೇ ವಿರುದ್ಧವಾಗಿವೆ. "ದರ್ಶನ"ಕ್ಕೆ ಅವಕಾಶ ನೀಡುವ ಈ ನಿರ್ಣಯವನ್ನು ಫೈಜಾಬಾದ್ ಜಿಲ್ಲಾ ಆಡಳಿತ ತೆಗೆದುಕೊಂಡಿತು, ಕೇಂದ್ರ ಸರ್ಕಾರವಲ್ಲ ಎಂದು ಹೇಳಿ ಮತ್ತೊಮ್ಮೆ ಹಿಂಜರಿದಿರಿ. ಆ ರಾಜ್ಯ ರಾಷ್ಟ್ರಪತಿ ಆಳ್ವಿಕೆಯಲ್ಲಿರುವಾಗ ಇಂತಹ ವ್ಯಾಪಕ ಪರಿಣಾಮದ ಕ್ರಮವೇನು, ಸಣ್ಣ-ಪುಟ್ಟ ನಿರ್ಣಯಗಳನ್ನು ಕೂಡಾ ಫೈಜಾಬಾದ್ ಆಡಳಿತ ತಗೊಳ್ಳುತ್ತದೆ ಎಂದು ನಂಬಲು ಸಾಧ್ಯವಿಲ್ಲ. "ನಮಾಜ್" 'ಗೆ ಕೂಡಾ ಅವಕಾಶಮಾಡಿಕೊಡಲಾಗುವುದು ಎಂಬ ಗೃಹಮಂತ್ರಿಗಳ ಹೇಳಿಕೆ, ನಂತರ 'ನಮಾಜ್'ಮಾಡ ಹೊರಟವರನ್ನು ತಡೆಯುವ ಕ್ರಮ- ಇವು ಈ ಸಂಗತಿಯನ್ನು ಇನ್ನಷ್ಟು ಗೋಜಲುಗೊಳಿಸಿತು.

ಬಿ.ಜೆ.ಪಿ.-ಆರ್.ಎಸ್.ಎಸ್. -ವಿ.ಹೆಚ್.ಪಿ. ಆನಂದ ಭರಿತರಾಗಿದ್ದಾರೆ. ಅವರಲ್ಲಿ ಇದು ಮತ್ತಷ್ಟು ಧೈರ್ಯತುಂಬಿದರೆ ಅಲ್ಪಸಂಖ್ಯಾತ ಕೋಮಿನ ಜನಗಳು ಸುಮಾರಾಗಿ ಭಯಗ್ರಸ್ತರೇ ಆಗಿ ಬಿಟ್ಟಿದ್ದಾರೆ. ಬಾಬ್ರಿ ಮಸೀದಿಯಿದ್ದಲ್ಲಿ ನಮಾಜು ಮಾಡಲು ಹೊರಟ ಮೆರವಣಿಗೆಯನ್ನು ನೋಡಿದರೆ ಮುಸ್ಲಿಂ ಕೋಮಿನ ನಾಯಕತ್ವ ಬಹುಮಟ್ಟಿಗೆ ಮಂದಗಾಮಿ ನಿಲುವನ್ನು ತಳೆಯುತ್ತಿರುವವರ ಕೈ ತಪ್ಪಿ ಉಗ್ರಗಾಮಿ ನಿಲುವು ತಳೆಯುತ್ತಿರುವ ಕೈಗೆ ಹೋಗುತ್ತಿದೆ ಎಂದು ಕಾಣುತ್ತದೆ. ಇದು ಹಿಂದೂ ಕೋಮುವಾದಕ್ಕೆ ಇನ್ನಷ್ಟು ಬಲನೀಡುತ್ತದೆ.

ಬಹುಪಾಲು ಮುಸ್ಲಿಮರೇ ಇರುವ ದೇಶಗಳಲ್ಲಿ ಮತ್ತು ಪಶ್ಚಿಮದ ಜನಗಳು ವಾಸಿಸುತ್ತಿರುವ ದೇಶಗಳಲ್ಲಿ ಕೂಡಾ ಸರಕಾರಗಳಿಂದ ಜನಗಳಿಂದ ಬಂದ ಪ್ರತಿಕ್ರಿಯೆ ನೋಡಿದರೆ ಈ ಪ್ರಶ್ನೆಯ ಹರಹು ಕೇವಲ ನಮ್ಮ ದೇಶಕ್ಕೆ ಮಿತಿಗೊಂಡಿಲ್ಲ ಎಂದು ಕಂಡು ಬರುತ್ತದೆ. ಈ ಬಿಕ್ಕಟ್ಟನ್ನು ಭಾರತ ಹೇಗೆ ಎದುರಿಸುತ್ತದೆ ಎಂದು ಜಗತ್ತು ಕಾದುನೋಡುತ್ತಿದೆ. ಅಲ್ಲದೆ ಅಯೋಧ್ಯೆಯಲ್ಲಿ ಡಿಸೆಂಬರ್ 6 ರ ಅತ್ಯಾಚಾರದ ನಂತರ ಪಾಕಿಸ್ತಾನದಲ್ಲಿ ಸರಕಾರ-ಪ್ರೇರಿತ ಕ್ರಮಗಳು ಹಾಗೂ ಬಾಂಗ್ಲಾದೇಶದಲ್ಲಿ ಅಯೋಧ್ಯೆಯತ್ತ ಸಾಗುವ ಪ್ರಯತ್ನ-ಇವೆಲ್ಲಾ ದೇಶದೊಳಗೆ ಮುಸ್ಲಿಂ ಮೂಲಭೂತವಾದವನ್ನು ಹಾಗೂ ಹಿಂದೂ ಕೋಮುವಾದವನ್ನು ಬೆಳೆಸಲು ನೆರವಾಗುತ್ತವೆ.

ನಿಮ್ಮ ಕ್ರಮಗಳ ಮೂಲಕ ನೀವೀಗ ಹಿಡಿದಿರುವ ದಾರಿಯ ಹಿಂದೆ ನಿಮ್ಮ ಯೋಚನೆಯೇನು ಎಂದು ಅರಿಯಲು ನನಗೆ ಸಾಧ್ಯವಾಗುತ್ತಿಲ್ಲ. ಮೊದಲಿಗೆ ಮೂರ್ತಿಗಳನ್ನು ಕಳ್ಳತನದಿಂದ ಮಸೀದಿಯೊಳಗೆ ಇಟ್ಟಾಗ ಪಂಡಿತ್ ನೆಹರೂ ಸರ್ದಾರ್ ಪಟೇಲ್ ಹಾಗೂ ಜಿ.ಬಿ. ಪಂತ್‌ರವರ ನಡುವೆ ನಡೆದ ಪತ್ರವ್ಯವಹಾರಗಳ ಬಗ್ಗೆ ನಿಮಗೆ ನೆನಪು ಮಾಡಬಯಸುತ್ತೇನೆ. 1986 ರಲ್ಲಿ ಬೀಗ ತೆಗೆಸುವವರೆಗೆ ಈ ವಿವಾದ ನ್ಯಾಯಾಲಯಕ್ಕೆ ಸೀಮಿತಗೊಂಡಿತ್ತು. ನಂತರ "ಶಿಲಾನ್ಯಾಸ" ಇತ್ಯಾದಿಗಳು ನಡೆದವು. 1986 ರ ನಂತರ ಎಲ್ಲಾ ಸಂದರ್ಭಗಳಲ್ಲೂ ಕಾಂಗ್ರೆಸ್ ಮತ್ತು ಅದರ ನೇತೃತ್ವದ ಕೇಂದ್ರ, ರಾಜ್ಯ ಸರಕಾರಗಳು ಬಾಬ್ರಿ ಮಸೀದಿಯನ್ನು ಕೆಡವ ಬಯಸಿದ್ದ ಆಂದೋಲನದ ನೇತೃತ್ವ ವಹಿಸಿದ ಶಕ್ತಿಗಳೊಂದಿಗೆ ರಾಜಿ ಮಾಡಿಕೊಂಡಿವೆ. ಇದರಲ್ಲಿ ಕಾಂಗ್ರೆಸ್ ಲೆಕ್ಕಾಚಾರ ತಲೆಕೆಳಗಾಗಿ ದೇಶ ಇದಕ್ಕಾಗಿ ದೊಡ್ಡ ಬೆಲೆ ತೆರಬೇಕಾಗಿ ಬಂದಿದೆ.

ಜುಲೈ 1992 ರಲ್ಲಿ ಬಿ.ಜೆ.ಪಿ.-ಆರ್.ಎಸ್.ಎಸ್.- ವಿ.ಹೆಚ್.ಪಿ. ಕೂಟ ನಿರ್ಮಾಣಕಾರ್ಯ ಆರಂಭಿಸುವುದಾಗಿ ತಿಳಿಯಪಡಿಸಿದಾಗ ರಾಷ್ಟ್ರೀಯ ಸಮಗ್ರತಾ ಮಂಡಳಿ ಸಭೆಯಲ್ಲಿ ಬಿ.ಜೆ.ಪಿ. ಬಿಟ್ಟು ಬೇರೆಲ್ಲಾ ಪಕ್ಷಗಳು ಸನ್ನಿವೇಶವನ್ನು ಎದುರಿಸಲು ಯಾವುದೇ ಸೂಕ್ತ ಕ್ರಮಕೈಗೊಳ್ಳಲು ಸಂಪೂರ್ಣ ಬೆಂಬಲ ಸೂಚಿಸಿದವು ಎಂಬುದನ್ನು ನೀವು ನೆನಪಿಸಿಕೊಳ್ಳಬಹುದು. ಆದರೆ ನ್ಯಾಯಾಲಯದ ಆಜ್ಞೆಗೆ ವ್ಯತಿರಿಕ್ತವಾಗಿ ನಿರ್ಮಾಣ ಕಾರ್ಯಕ್ಕೆ ಅನುಮತಿ ನೀಡಲಾಯಿತು. ವೇದಿಕೆ ಕಟ್ಟಿದ ಮೇಲೆಯೇ ಅದು ನಿಂತಿತು, ನಂತರ ಡಿಸೆಂಬರ್ 6 ರಂದು ಮತ್ತೆ ನಿರ್ಮಾಣ ಕಾರ್ಯ ಆರಂಭಿಸುವ ಬೆದರಿಕೆ ನೀಡಿದಾಗ ಇದನ್ನು ಎದುರಿಸಲು ದೃಢ ಕ್ರಮ ಕೈಗೊಳ್ಳುವ ಬದಲು ಈ ಕಿಡಿಗೇಡಿತನದಲ್ಲಿ ತೊಡಗಿದವರೊಂದಿಗೆ ಮಾತುಕತೆಗೆ ಇಳಿದಿರಿ. ಈ ಶಕ್ತಿಗಳ ಉದ್ದೇಶ, ಆಟಗಳು ನಿಮಗೆ ತಿಳಿದಿರಲಿಲ್ಲ ಎಂದು, ಭಾವಿಸಲು ಯಾವ ಕಾರಣಗಳೂ ಇಲ್ಲ. ರಾಷ್ಟ್ರೀಯ ಸಮಗ್ರತಾ ಮಂಡಳಿ ಮತ್ತೊಮ್ಮೆ ನವಂಬರ್ 23,1992 ರಂದು ಈ ಸವಾಲನ್ನು ಎದುರಿಸುವಲ್ಲಿ ಒಗ್ಗಟ್ಟಿನ ಅತ್ಯುತ್ತಮ ಪ್ರದರ್ಶನ ನೀಡುತ್ತಾ ಮತ್ತೊಮ್ಮೆ ಸಂವಿಧಾನವನ್ನು, ಕಾನೂನನ್ನು, ನ್ಯಾಯಾಂಗವನ್ನು ಹಾಗೂ ಕಾನೂನು ಆಳ್ವಿಕೆಯನ್ನು ಎತ್ತಿ ಹಿಡಿಯಲು ಸೂಕ್ತ ಕ್ರಮ ಕೈಗೊಳ್ಳಲು ನಿಮಗೆ ಅಧಿಕಾರ ನೀಡಿತು. ಆದರೆ ನೀವು ಮತ್ತೆ ವಿಫಲರಾದಿರಿ.

ನಿರ್ಮಾಣ ಕಾರ್ಯವನ್ನು, ಬಾಬ್ರಿ ಮಸೀದಿ ಕಟ್ಟಡಕ್ಕೆ ಬೆದರಿಕೆಯನ್ನು ವಿಫಲಗೊಳಿಸಲು ಉತ್ತರಪ್ರದೇಶ ಸರಕಾರವನ್ನು ವಜಾ ಮಾಡಲು ಸಂವಿಧಾನದ 356 ನೇ ಕಲಮನ್ನು ಬಳಸಬೇಕು ಎಂದು ಒತ್ತಾಯಿಸಿದಾಗ ನೀವು ಅದನ್ನು ತಳ್ಳಿಹಾಕಿದಿರಿ. ಅದಕ್ಕೆ ಕೊಟ್ಟ ಕಾರಣ ಹಾಸ್ಯಾಸ್ಪದ. ಏಕೆಂದರೆ ನೀವೇ ಗೃಹಮಂತ್ರಿಯ ಕೆಲಸ ಮಾಡಿದ್ದೀರಿ. ನಿಮ್ಮ ಪಕ್ಷದ ಸಂಕುಚಿತ ಹಿತಾಸಕ್ತಿಗಳಿಗಾಗಿ ಅದನ್ನು ಎಷ್ಟು ಸಲ ರಾಜ್ಯ ಸರಕಾರಗಳನ್ನು ವಜಾ ಮಾಡಲು ದುರುಪಯೋಗ ಪಡಿಸಲಾಯಿತು ಎಂಬುದು ನಿಮಗೆ ಗೊತ್ತಿದೆ.

ಇಷ್ಟು ಸಾಲದೆಂಬಂತೆ ಗಾಯದ ಮೇಲೆ ಬರೆ ಎಳೆಯುವಂತೆ ಮಸೀದಿಯನ್ನು ಸಂಪೂರ್ಣ ಕೆಡವಿ, ಕೇಂದ್ರ ಶಾಸನ ಹೇರಿದ ಮೇಲೂ ಕೇಂದ್ರೀಯ ಪಡೆಗಳು ಹತ್ತಿರ ಸುಳಿಯಲಿಲ್ಲ. ವಿಗ್ರಹಗಳನ್ನು ಸ್ಥಾಪಿಸಿ ತಾತ್ಕಾಲಿಕ ರಚನೆಯೊಂದು ಆದ ಮೇಲೆಯೇ ಅವು ಕಾರ್ಯಾಚರಣೆಗಿಳಿದದ್ದು. ಪರಿಸ್ಥಿತಿಯನ್ನು ಸರಿಪಡಿಸಲು ತಕ್ಷಣ ಕ್ರಮ ತೆಗೆದುಕೊಂಡಿದ್ದರೆ ಅದಕ್ಕೆ ಇಡೀ ದೇಶದ ಬೆಂಬಲ ದೊರೆಯುತ್ತಿತ್ತು.

ಎಡ ಮತ್ತು ಜಾತ್ಯಾತೀತ ವಿರೋಧ ಪಕ್ಷಗಳು ಒತ್ತಾಯಿಸುತ್ತಿದ್ದಂತೆ 138 (2) ನೇ ಕಲಮಿನ ಬದಲು 143 ನೇ ಕಲಮಿನ ಪ್ರಕಾರ ಮಸೀದಿಗಿಂತ ಮೊದಲು ಒಂದು ದೇವಸ್ಥಾನವಿತ್ತೆ ಎಂಬ ಬಗ್ಗೆ ಸುಪ್ರೀಂ ಕೋರ್ಟಿನಿಂದ ಅಭಿಪ್ರಾಯ ಕೇಳಿರುವುದು ಅತ್ಯಂತ ಗಂಭೀರ ಪರಿಣಾಮಗಳಿಗೆ ಎಡೆ ಮಾಡಿಕೊಡುವ ಕೃತ್ಯ. ನ್ಯಾಯಾಲಯದ ಅಭಿಪ್ರಾಯ ಹಾಗೂ ಅದರ ಪರಿಣಾಮ ಏನೇ ಇರಲಿ, ಇಂತಹ ಒಂದು ಕ್ರಮದ ನಂತರ ಇಂತಹ ಎಲ್ಲಾ ವಿವಾದಗಳು ಹಾಗೂ ಮುಂದೆ ಎಬ್ಬಿಸಬಹುದಾದ ವಿವಾದಗಳು ಸಾಲುಗಟ್ಟಿ ನಿಲ್ಲುತ್ತವೆ.

ಅಯೋಧ್ಯಾ ಅತ್ಯಾಚಾರದ ನಂತರ ಕೈಗೊಂಡ ಅರೆ-ಮನಸ್ಸಿನ ಕ್ರಮಗಳು, ಅವನ್ನು ನಿರ್ಲಕ್ಷದಿಂದ ಜ್ಯಾರಿಗೆ ತಂದ ರೀತಿ ಇವೆಲ್ಲಾ ಕೋಮುವಾದಿಗಳ ಉತ್ಸಾಹವನ್ನು ತಣ್ಣಗಾಗಿಸುವ ಬದಲು ಅವರಲ್ಲಿ ಹೊಸ ಉತ್ಸಾಹ ತುಂಬಿದೆ. ಇದರ ಜತೆಗೆ 'ದರ್ಶನ'ಕ್ಕೆ ನೀಡಿದ ಅವಕಾಶ ಹಾಗೂ ಕಲಮು 143 ರ ಅನ್ವಯ ಸಲಹೆ ಮೂಲಕ ರಾಜಿಗಳ ಮೇಲೆ ರಾಜಿಮಾಡಿಕೊಳ್ಳುತ್ತಿರುವಾಗ ಕೋಮು ಶಕ್ತಿಗಳು ಇನ್ನಷ್ಟು ಭಂಡತನ ತೋರದೆ ಇನ್ನೇನು ಮಾಡುತ್ತವೆ ?

ದೇಶಕ್ಕೆ ಒದಗಿರುವ ಪರಿಸ್ಥಿತಿ. ಅದಕ್ಕೆ ಕಾರಣವಾದ ಸಂಗತಿಗಳೇನೇ ಇರಲಿ, ನಾನು ಮತ್ತೊಮ್ಮೆ ರಾಜಿ ಮಾಡಿಕೊಳ್ಳುವ , ಕೋಮುವಾದಿಗಳನ್ನು ತುಷ್ಟೀಕರಿಸುವ ಧೋರಣೆಗಳನ್ನು ದಯವಿಟ್ಟು ಬಿಟ್ಟು ಬಿಡಿ, ಎಂದೂ ಸರಿಪಡಿಸಲಾಗದ ರೀತಿಯಲ್ಲಿ ಕೋಮು ವಿಭಜನೆಯನ್ನು ತರುತ್ತಿರುವ ಕರಾಳ ಶಕ್ತಿಗಳ ವಿರುದ್ಧ ದೃಢ ಕ್ರಮ ಕೈಗೊಳ್ಳಿ. ಬಿ.ಜೆ.ಪಿ.-ಆರ್.ಎಸ್.ಎಸ್.- ವಿ.ಹೆಚ್.ಪಿ. ಕೂಟ ತುಸು ಕೂಡಾ ಪಶ್ಚಾತ್ತಾಪವಿಲ್ಲದ, ಆಕ್ರಮಣಕಾರೀ ನಿಲುವು ತೋರುತ್ತಿದ್ದಾರೆ. ಸರಕಾರ ಸಂಪೂರ್ಣ ಅಸ್ತವ್ಯಸ್ತಗೊಂಡಂತಿದೆ.

ಈ ಶಕ್ತಿಗಳ ವಿರುದ್ಧ ಯಾವ ರಾಜಿಯನ್ನು ಮಾಡಿಕೊಳ್ಳದ ದೃಢ ನಿಲುವು ತಳೆದರೆ ದೇಶ ನಿಮ್ಮ ಜತೆಗಿರುತ್ತದೆ ಎಂಬ ಬಗ್ಗೆ ನನಗೆ ಸಂಪೂರ್ಣ ಭರವಸೆಯಿದೆ.

ನಿಮ್ಮ ವಿಶ್ವಾಸಿ,

ಹರ್ಕಿಶನ್‌ಸಿಂಗ್ ಸುರ್ಜಿತ್

ಕೋಟಿ ಕೋಟಿ ಕೆಲಸ[...]

ಐ.ಎಂ.ಎಫ್ ಮತ್ತು ವಿಶ್ವಬ್ಯಾಂಕ್‌ಗಳು ನೀಡುವ ಸಾಲಗಳಿಗೆ ಹಾಕಿರುವ ಶರತ್ತುಗಳಲ್ಲಿ ಒಂದು ಭಾರತ ಎಕ್ಸಿಟ್ ನೀತಿಯನ್ನು ಕಾನೂನುಬದ್ಧಗೊಳಿಸಲು ಒಂದು ಕಾಯಿದೆ ತರುವುದು. ಎಕ್ಸಿಟ್ ನೀತಿ ಎಂದರೆ ಏನು? ಉದ್ದಿಮೆಗಳಿಗೆ ಅನ್ವಯವಾಗುವ ಈ ನೀತಿಯ ಪ್ರಕಾರ ಯಾವುದೇ ಸಮಯದಲ್ಲಿ ಯಾವುದೇ ಬಾಧ್ಯತೆಗಳಿಲ್ಲದೆ ಒಬ್ಬ ಉದ್ಯಮಿ ತನ್ನ ಉದ್ಯಮವನ್ನು ಮುಚ್ಚಬಹುದು. ಆತನಿಗೆ ತನಗೆ ಬೇಕೆನಿಸಿದಾಗ ಕೆಲಸಗಾರರನ್ನು ತೆಗೆದುಕೊಳ್ಳುವ ಅಥವಾ ತೆಗೆದುಹಾಕುವ ಅಧಿಕಾರವನ್ನು ಈ ನೀತಿ ನೀಡುತ್ತದೆ. ಹಾನಿ ಅನುಭವಿಸುತ್ತಿರುವ ಸಾರ್ವಜನಿಕ ವಲಯದ ಉದ್ದಿಮೆಗಳಿಗೂ ಇದು ಅನ್ವಯಿಸುತ್ತದೆ. ಹಾಗೆ ಎಕ್ಸಿಟ್ ನೀತಿ ರೋಗಪೀಡಿತ ಉದ್ದಿಮೆಗಳನ್ನು ಮುಚ್ಚುವ ಅಧಿಕಾರವನ್ನು ಉದ್ದಿಮೆಗಾರರಿಗೆ - ಅವರು ಖಾಸಗಿಯವರಿರಬಹುದು ಅಥವಾ ಸರಕಾರವೇ ಇರಬಹುದು - ನೀಡುತ್ತದೆ.

• ಇದರಲ್ಲೇನು ತಪ್ಪು? ರೋಗಪೀಡಿತ ಉದ್ದಿಮೆಗಳನ್ನು ಮುಚ್ಚುವುದು ಒಳಿತಲ್ಲವೆ? ಈ ಪ್ರಶ್ನೆಯನ್ನು ಹಲವರು ಕೇಳುತ್ತಾರೆ. ಹಿಂದಿನ ಅನುಭವಗಳ, ಬೆಳವಣಿಗೆಗಳ ಹಿನ್ನೆಲೆಯಲ್ಲಿ ಈ ಪ್ರಶ್ನೆಗೆ ಉತ್ತರ ಹುಡುಕಬೇಕಾಗುತ್ತದೆ. ಇಲ್ಲಿ ಬಹು ಮುಖ್ಯವಾಗಿ ಇರುವುದು ನಿರುದ್ಯೋಗದ ಪ್ರಶ್ನೆ. ಉದ್ದಿಮೆಗಳು ಮುಚ್ಚಿದಾಗ ಕೆಲಸಗಾರರು ಕೆಲಸ ಕಳೆದುಕೊಳ್ಳುತ್ತಾರೆ. ಈ ಸಮಸ್ಯೆಗೆ ಪರಿಹಾರವೇನು? ಸರಕಾರ ವಿಶ್ವಬ್ಯಾಂಕ್-ಐಎಂಎಫ್‌ಗಳು ಅವಕ್ಕೆ ಉತ್ತರ ನೀಡುತ್ತಾರೆ "ರಾಷ್ಟ್ರೀಯ ಪುನರುಜ್ಜೀವನ ನಿಧಿ ಸ್ಥಾಪನೆ" ಈ ನಿಧಿಯಿಂದ ಕಾರ್ಮಿಕರನ್ನು ತರಬೇತುಗೊಳಿಸಿ ಪುನರ್ನೇಮಕಕ್ಕಾಗಿ ತಯಾರುಗೊಳಿಸಲಾಗುವುದು ಸರಿ. ಆದರೆ ಪುನರ್ನೇಮಕ ಎಲ್ಲಿ?

ಅಂಕಿ ಸಂಖ್ಯೆಗಳನ್ನು ತೆಗೆದುಕೊಳ್ಳೋಣ. ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ನೀಡಲಾದ ಅಂಕಿ ಸಂಖ್ಯೆಗಳ ಪ್ರಕಾರ 1992-93ರ ಅವಧಿಯಲ್ಲಿ 35 ದಶಲಕ್ಷದಷ್ಟು ಕಾರ್ಮಿಕರನ್ನು ತೆಗೆದು ಹಾಕಲಾಗುತ್ತದೆ. ಹಾಗೆಯೇ 1997-2002ರ ಅವ[...]

ಸುಳ್ಳುಗಳ ಸುರಿಮಳೆಯಿಂದಾಗಿಯೆ[...] ಕಾವಿಶರಟುಗಳ ಹೊಸ[...]

ಬಾಬ್ರಿಮಸೀದಿ ಕೆಡವಿಹಾಕಿದಾಗ
ಅಲ್ಲಿ ರಾಮದೇವಸ್ಥಾನವಿದ್ದುದರ
ಪುರಾವೆ ಸಿಕ್ಕಿಯೇ ಬಿಟ್ಟಿದೆ -
ಆದರೂ ಈ "ಜಾತ್ಯಾತೀವಾದಿ"ಗಳೇಕೆ
ವಾಸ್ತವತೆಯನ್ನು ಒಪ್ಪಿಕೊಳ್ಳುವುದಿಲ್ಲ?
ಇದು ಕಾವಿಶರಟುಗಳ
ಪೊಳ್ಳ ಹೊಸ ಪ್ರಚಾರ
ಬಹಳ ಬುದ್ಧಿವಂತಿಕೆಯ ಪ್ರಚಾರ
ಎಂದು ಅವರ ಭಾವನೆ
ಏಕೆಂದರೆ
ಅಡ್ವಾಣಿ ಸಿಂಘಾಲ್ ಆದಿಯಾಗಿ
ಬಿ.ಜೆ.ಪಿ. ವಿ.ಹೆಚ್.ಪಿ.
ಮುಖಂಡರಷ್ಟೇ ಅಲ್ಲ,
ಪೇಜಾವರ ಸ್ವಾಮಿರಂತವರಷ್ಟೇ ಅಲ್ಲ,
"ಪ್ರಖ್ಯಾತ" ಪತ್ರಕರ್ತ .
ಅರುಣ್‌ಶೌರಿಯವರಂತವರೂಕೂಡಾ
ಇದನ್ನು ಹೇಳುತ್ತಾ ತಿರುಗುತ್ತಿದ್ದಾರೆ.
ಆದರೆ ಇದೂ
ಕಾವಿಶರಟುಗಳ "ಭವ್ಯಪರಂಪರೆ"ಗೆ
ತಕ್ಕುದಾದ ಪೊಳ್ಳ-ಪೊಸ ಸುಳ್ಳು
ಎಂದು ನಿಷ್ಪಕ್ಷಪಾತ
ಪುರಾತತ್ವ ಶಾಸ್ತ್ರಜ್ಞರಂತೂ
ಆಗಲೇ ತೀರ್ಮಾನಿಸಿದ್ದರು.
ಕಾವಿಶರಟುಗಳು ಪ್ರಚಾರ ಮಾಡುವ
ವಿಧಾನದಿಂದಲೇ
ಈ ಪ್ರಚಾರ "ಶುದ್ಧ ಸುಳ್ಳು"
ಎಂದು ಈಗ ಸಾಮಾನ್ಯರಿಗೂ
ಅರ್ಥವಾಗುತ್ತಿದೆ.
ಜುಲೈ 1992 ರ
ಕಾನೂನು ಬಾಹಿರ ಕರಸೇವೆಯಲ್ಲಿ
ದೊರೆಯಿತೆನ್ನಲಾದ ಆದರೆ
ಅದನ್ನು ನ್ಯಾಯಾಲಯದ ಎದುರು
ಮಾತ್ರ ಇಡಲೊಲ್ಲದ
"ಪುರಾವೆ"ಯ ಠಕ್ಕುತನವನ್ನು
ಬಯಲಿಗೆಳೆದ 'ಫ್ರಂಟ್‌ಲೈನ್'
ಇಂಗ್ಲೀಷ್ ಪಾಕ್ಷಿಕ ಪತ್ರಿಕೆಯ
ಸುಕುಮಾರ್ ಮುರಳೀಧರನ್
ಈ ಹೊಸ "ಪುರಾವೆ"ಯ
ಹಿಂದಿರುವ ಠಕ್ಕುತನವನ್ನೂ
ಬಯಲಿಗೆಳೆದಿದ್ದಾರೆ.
ಅವರ ಲೇಖನದ ಕೆಲವು ಅಂಶಗಳು.

ಡಿಸೆಂಬರ[...] ಶಾಸ್ತ್ರಜ್ಞರು ಹ[...] ರೆಂದು ಹೇಳಿಕೊ[...] ಪತ್ರಿಕಾ ಸಮ್ಮೇ[...] 'ಬಾಬ್ರಿ ಮಸೀದಿ[...] ಸ್ಥಾನದ ಅವಶೇ[...] ಏನು ಈ[...] ದಲ್ಲಿ ಉಲ್ಲೇ[...] ಮರಳುಗಲ್ಲಿನ ಪ[...] ನೆಯಿರುವ ದೇ[...] ಬಿಳಿ ಅ[...] 'ಕೋದಂಡರಾ[...] ಲ್ಲವೇ ಬಾಬ್ರಿ ಮ[...] ಸ್ಥಾನವನ್ನು ಒಡೆ[...]

ಪುರಾತತ್ವ[...] ಅವಶೇಷದ ಅ[...] ತೀರ್ಮಾನಕ್ಕೆ [...] ದಡಿ ಎಷ್ಟು ಅ[...] ಸಿಕ್ಕಿತು ಎಂಬುದ[...] ತ್ತದೆ. 1975 ರ [...] ಕಾಲ ಈ ಪ್ರದೇ[...] ಸರ್ವೇಕ್ಷಣೆ ಇ[...] ಮಹಾನಿರ್ದೇಶ[...] ನೇತೃತ್ವದಲ್ಲಿ [...] ಕೆಲಸ ಮಾಡಿದ್ದ[...] ಅವಧಿಯಲ್ಲಿ [...] ಮಾನವ ವಸತಿ [...] ಹುಗಳಿಲ್ಲ ಎಂಬ[...] ದೇವಸ್ಥಾನದ [...] ಅದರ ಕುರುಹುಗ[...] ಕಾಣಬೇಕಿತ್ತು. [...] ಎಂದಿದ್ದರು. [...] ವಾಗಿ ಪರಿಶೀಲಿ[...] 19ರಂದು ಪತ್ರಿಕಾ[...] ಹೇಗೆ ಸಿಕ್ಕಿತು ? [...]

ಈ [...]

ಈ 'ಅವಶ[...] ವಿ.ಹೆಚ್.ಪಿ.[...]

...ರರನ್ನು ಬೀದಿಗಟ್ಟುವ "ಎಕ್ಸಿಟ್ ನೀತಿ"

...ಈ ಸಂಖ್ಯೆ 36 ದಶಲಕ್ಷ ಕಾರ್ಮಿಕರನ್ನು ತೆಗ...ಯುತ್ತದೆ. ಏಪ್ರಿಲ್ 1992ರ ವೇಳೆಗಾಗಲೇ ...ಕವೇಕಿಂದಿರುವ 23 ದಶಲಕ್ಷ ಕಾರ್ಮಿಕರ ಬಾಕಿ ...ಂಡರೆ 1992-93ರ ಅವಧಿಯಲ್ಲಿ 58 ದಶಲಕ್ಷ ...ಗಳನ್ನು ನೀಡಬೇಕಾಗುತ್ತದೆ. ಮುಂದಿನ ಹತ್ತು ...ಅವಧಿಯಲ್ಲಿ 94 ದಶಲಕ್ಷ ಉದ್ಯೋಗಗಳ ಸೃಷ್ಟಿ...ಕಾಗುತ್ತದೆ. ಆದರೆ ಹಿಂದಿನ ಅನುಭವವೇನು?

...ದಷ್ಟು ಉತ್ಪನ್ನ ಹೆಚ್ಚಿದಾಗ 1972-73 ಮತ್ತು ...ರ ಅವಧಿಯಲ್ಲಿ ಶೇ. 0.61 ರಷ್ಟು ಉದ್ಯೋಗ ...1977-78ರಿಂದ 1983ರ ಅವಧಿಯಲ್ಲಿ ಶೇ. 0.55 ...ದ್ಯೋಗ ಹೆಚ್ಚಿತು ಮತ್ತು 1983ರಿಂದ ...87-88ರ ...ಲ್ಲಿ ಶೇ. 0.38ರಷ್ಟು ಉದ್ಯೋಗ ಹೆಚ್ಚಿತು. ಕಳೆದ ...ಲ್ಲಿ ಕಾರ್ಮಿಕ ಮೂಲ ಉತ್ಪಾದನೆಗಿಂತ ಬಂಡವಾಳ ...ಉತ್ಪಾದನೆಗೆ ಹೆಚ್ಚು ಒಲವು ಕಂಡುಬಂದಿದೆ. ಇದು ...ನೀತಿಗಳಿಂದಾಗಿ ಈ ಒಲವನ್ನು ತೋರಿದೆ. ಇನ್ನೊಂದು ...ದರೆ ಎಲ್ಲಾ ವಲಯಗಳಿಗಿಂತ ಕೃಷಿ ಹೆಚ್ಚು ಕೆಲಸ... ತೊಡಗಿಸಿಕೊಳ್ಳುವುದು. ಆದರೆ ಅಬ್ಬಬ್ಬ ಎಂದರೆ ...ಪ್ಪ ಬೆಳವಣಿಗೆ ತೋರಬಲ್ಲ ಕೃಷಿ ಪ್ರತಿ ಲಕ್ಷ ಶೇ. 1 ...ರ್ಮಿಕ ವರ್ಗವನ್ನು ಸ್ವೀಕರಿಸಬಲ್ಲದು. ಇದು ಕಾರ್ಮಿ...ಯ ಬೆಳವಣಿಗೆಗಿಂತ ಬಹಳ ಕಡಿಮೆ. ಹಾಗಾದರೆ ...ಗೆ ಉದ್ಯೋಗವೆಲ್ಲಿ? ಸಣ್ಣ ಕೈಗಾರಿಕೆಗಳ ಸ್ಥಿತಿಯೂ ...ರ್ಥಿಕ ನೀತಿಯಿಂದ ಹದಗೆಟ್ಟು ಹೋಗಿದೆ. ಮಧ್ಯಮ ...ದೊಡ್ಡ ಉದ್ಯಮಗಳ ಸ್ಥಿತಿಯೂ ಉತ್ತಮವಾಗೇನೂ...

...ದ್ರ ಸರಕಾರದ ಸ್ವಾಮ್ಯದಲ್ಲಿ ಬರುವ ಉದ್ದಿಮೆಗಳ ...ೇನು? ಡಿಸೆಂಬರ್ 1991ರ ವರದಿಗಳ ಪ್ರಕಾರ ... 7.9 ಲಕ್ಷ ಕೆಲಸಮಾಡುವ 98 ಘಟಕಗಳು ಸ್ಥಾಪಿ...ದಿತ್ತಿವೆ.

...ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳನ್ನು ತೆಗೆದುಕೊಂ...ಡರೆ 1455 ಕೈಗಾರಿಕೆಗಳು ರೋಗಪೀಡಿತವಾಗಿವೆ. ಇವಲ್ಲದೆ 814 ಕೈಗಾರಿಕೆಗಳು ದುರ್ಬಲವೆಂದು ವರ್ಗೀಕರಿಸಲ್ಪಟ್ಟಿವೆ. ಈ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ ಲಭ್ಯವಿಲ್ಲ. ಈ ಎಲ್ಲಾ ಕೈಗಾರಿಕೆಗಳು ಮುಚ್ಚಿ ಹೋದಲ್ಲಿ ನಿರುದ್ಯೋಗಿಗಳಾಗುವ ಕಾರ್ಮಿಕರೆಷ್ಟು?

ಬಹುಮುಖ್ಯವಾಗಿ ನಾವು ಗಮನದಲ್ಲಿಡಬೇಕಾದದ್ದು ಬಹುತೇಕ ಕೈಗಾರಿಕೆಗಳು ರೋಗಪೀಡಿತವಾದದ್ದು ಸರಕಾರಿ ನೀತಿಗಳಿಂದ. ಪ್ರತಿಯೊಂದು ಕೈಗಾರಿಕೆಗೂ ರೋಗಪೀಡಿತವಾಗಲು ಅದರದ್ದೇ ಆದ ವಿಶಿಷ್ಟ ಕಾರಣಗಳಿವೆ. ಈ ಕಾರಣಗಳನ್ನು ಕೂಲಂಕುಶವಾಗಿ ಅಭ್ಯಸಿಸಿ ಪರಿಹಾರ ಕಂಡುಹಿಡಿಯುವುದು ಸಾಧ್ಯ. ಆದರೆ ಸರಕಾರಕ್ಕೆ ಅದರಲ್ಲಿ ಆಸಕ್ತಿಯಿಲ್ಲ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ವಿಶ್ವಬ್ಯಾಂಕ್ ಐಎಂಎಫ್‌ಗಳಿಗೆ ಇದು ಬೇಕಿಲ್ಲ.

ಹೊಸ ಉದ್ಯೋಗ ಸೃಷ್ಟಿ ಹೇಗೆ?

ಸರ್ಕಾರ ಆಚರಣೆಗೆ ತಂದಿರುವ ಕ್ರಮಗಳೆಲ್ಲಾ ಉತ್ಪಾದನಾ ಪ್ರಕ್ರಿಯೆಯಲ್ಲಿ ಕಾರ್ಮಿಕರ ಪಾತ್ರವನ್ನು ಕಡಿತ ಮಾಡಿ ಬಂಡವಾಳಪಾತ್ರವನ್ನು ಹೆಚ್ಚಿಸುತ್ತವೆ ಹಾಗಾದರೆ ಉದ್ಯೋಗ ಹೆಚ್ಚಳ ಎಲ್ಲಾಗುತ್ತದೆ? ಮತ್ತು ಹೇಗೆ ಆಗುತ್ತದೆ?

ರಾಷ್ಟ್ರೀಯ ಪುನರುಜ್ಜೀವನ ನಿಧಿ

ಈ ನಿಧಿಗೆ ಎರಡು ಘೋಷಿತ ಉದ್ದೇಶಗಳು,

1. ಕೈಗಾರಿಕೆಗಳ ಮುಚ್ಚುವಿಕೆಯಿಂದ ಕೆಲಸ ಕಳೆದುಕೊಳ್ಳುವ ಕೆಲಸಗಾರರಿಗೆ ಪ್ರನಃ ತರಬೇತಿ ನೀಡುವುದು.
2. ಅಕಸ್ಮಾತ್ ಪುನಃ ಕೆಲಸ ... ದೊರೆಯದಿದ್ದರೆ ... ದೊಡ್ಡ ಮೊತ್ತದ (?) ಪರಿಹಾರ ನೀಡುವುದು.

ಎಕ್ಸಿಟ್ ನೀತಿ ಜಾರಿಗೆ ಬಂದರೆ ಸುಮಾರು 20 ಲಕ್ಷ ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಾರೆ. ಇಷ್ಟೊಂದು ಜನರನ್ನು ಪುನರ್ನೇಮಕ ಮಾಡಿಕೊಳ್ಳುವುದು ಎಲ್ಲಿ? ಎಲ್ಲರೂ ಪುನರ್ನೇಮಕ ಬಯಸದೆ ನಿವೃತ್ತಿ ಹೊಂದಲು ಒಪ್ಪಿದರೆ ಒಬ್ಬನಿಗೆ ಒಂದು ಲಕ್ಷರೂಗಳ ಪರಿಹಾರ ನೀಡಿದರೂ ಒಟ್ಟು ಮೊತ್ತವೆಷ್ಟು ಗೊತ್ತೇ? 20000 ಕೋಟಿ ರೂಪಾಯಿಗಳು ರಾಷ್ಟ್ರೀಯ ಪುನರುಜ್ಜೀವನ ನಿಧಿ ಬರೀ 1500 ಕೋಟಿ ರೂಪಾಯಿಗಳನ್ನು ಹೊಂದಿದೆ. ಉಳಿದ ಹಣವನ್ನು ಎಲ್ಲಿಂದ ತರುವುದು?

ಹೀಗೆ 'ಎಕ್ಸಿಟ್ ನೀತಿ' ವಾಸ್ತವವನ್ನು ಗಣನೆಗೆ ತೆಗೆದುಕೊಂಡು ರೂಪಿಸಿರುವ ನೀತಿಯಲ್ಲಿ ಬದಲಿಗೆ ಸಾಲದಾತರು ತಮ್ಮ ಅನುಕೂಲಕ್ಕೆ ತಕ್ಕಂತೆ ಹೇಳಿ ರೂಪಿಸಿರುವ ನೀತಿ ಇದು.

ನಿಜವಾಗಿಯೂ ರೋಗ ಪೀಡಿತ ಘಟಕಗಳನ್ನು-ಅವುಗಳ ಪುನರುಜ್ಜೀವನ, ಲಾಭದಾಯಕ ಮುನ್ನಡೆ ಸಾಧ್ಯವಿಲ್ಲವಾಗ ಮುಚ್ಚುವುದನ್ನು ಯಾರು ವಿರೋಧಿಸಲಾರರು. ಆದರೆ ಸಾರಾಸಗಟು ಕಾರ್ಮಿಕ ವಿರೋಧಿ ಉದ್ದೇಶಗಳಿಂದ ಕೂಡಿದ ನೀತಿಯನ್ನು ಸಹಿಸುವುದೂ ಸಾಧ್ಯವಿಲ್ಲ. ಯಾವುದೇ ನೀತಿಯನ್ನು ರೂಪಿಸುವಾಗ ಅದರ ಸಾಮಾಜಿಕ-ಆರ್ಥಿಕ ಪರಿಣಾಮಗಳನ್ನು ಲಾಭಾ ಹಾನಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾದ್ದು ಅವಶ್ಯ

'ಎಕ್ಸಿಟ್ ನೀತಿ' ಅಂತಹ ಪ್ರಯತ್ನ ಮಾಡುವ ಬದಲು ಅದಕ್ಕೆ ವ್ಯತಿರಿಕ್ತ ಪ್ರಯತ್ನ ಮಾಡುತ್ತಿದೆ ಸಾಮ್ರಾಜ್ಯಶಾಹಿಗಳು ತಮ್ಮ ಬಂಡವಾಳವನ್ನು ಇಲ್ಲಿ ತೊಡಗಿಸಿ ಯಾವುದೇ ಜವಾಬ್ದಾರಿ...

...ಳನ್ನು ಹೊರದೆ ಇಲ್ಲಿನ ಮಾರುಕಟ್ಟೆ ಮತ್ತು ಸೌಲಭ್ಯಗಳನ್ನು ಲಭ್ಯ ಕಾರ್ಮಿಕ ಶಕ್ತಿ ಬಳಸಿ ಲಾಭಕೊಳ್ಳೆಹೊಡೆಯಲು ರೂಪಿಸಿರುವ ನೀತಿ ಇದು. ಆದ್ದರಿಂದಲೇ ಈ ನೀತಿ ಖಂಡನಾರ್ಹ ಮತ್ತು ಪ್ರತಿಭಟನೆಗೆ ಯೋಗ್ಯ.

ಔದ್ಯಮಿಕ ರೋಗ ಪೀಡನೆ		
	ರೋಗ ಪಿಡಿತ ಘಟಕಗಳ ಸಂಖ್ಯೆ	ಪಡೆದಿರುವ ಬ್ಯಾಂಕ್ ಸಾಲ ಕೋಟ ರೂಪಾಯಿಗಳಲ್ಲಿ
ಸಣ್ಣ ಕೈಗಾರಿಕಾ ಘಟಕಗಳು	2,18,828	2,427
ಕೈಗಾರಿಕಾ ಘಟಕಗಳು	1455	4539
ಸಣ್ಣ ಕೈಗಾರಿಕೇತರ ದುರ್ಬಲ ಘಟಕಗಳು	814	2387
ಒಟ್ಟು	221097	9353

...ಯಲುಗೊಂಡ ...ಸಂಶೋಧನೆ

...1992: ಪುರಾತತ್ವ ...ಕಲಾ ಇತಿಹಾಸಕಾರ ...ರು ದಿಲ್ಲಿಯಲ್ಲಿ ಒಂದು ...ಲ್ಲಿ ಘೋಷಿಸಿದರು- ...ಜಾಗದಲ್ಲಿ ದೇವ... ದೊರೆತಿವೆ.' ...ಶೇಷಗಳು? ಸಂಸ್ಕೃತ...ದ ಒಂದು ದೊಡ್ಡ ಮರಳುಗಲ್ಲಿನ ಕೆತ್ತ... ಕಂಬಗಳು ಹಾಗೂ ಕ... ...ಣ್ಣ ಹಾಕಿದ ...ತಿಮೆ. ಇಷ್ಟು ಸಾಕ್ಷ...ದನ್ನು ರಾಮದೇವ...ಲಾಯಿತು ಎನ್ನಲು? ...ಲ್ಲಿ ಯಾವುದಾದರೂ ...ಮೇಲೆ ಯಾವುದೇ ...ದರೆ ಅದು ನೆಲ... ...ಯಾವ ಸ್ಥಿತಿಯಲ್ಲಿ ...ಳ ಮಹತ್ವದ್ದಾಗು... ಹಲವಾರು ವರ್ಷ... ಭಾರತ ಪುರಾತತ್ವ ಶಾಸ್ತ್ರಜ್ಞರು ಆಗಿನ ...ಬಿಬಿ. ಲಾಲ್‌ರ ...ಪುರಾತತ್ವ ಅಗೆತದ ...-15 ಶತಮಾನದ ...ಶದಲ್ಲಿ ಯಾವುದೇ ...ಗೆ ಏನೇನೂ ಕುರು...ರ್ಣನಕ್ಕೆ ಬಂದಿದ್ದರು. ...ದ ಕೆಲಸ ನಡೆದಿದ್ದರೆ ...ಪ್ರದೇಶದ ಉದ್ದಕ್ಕೂ ...ಏನೇನೂ ಕಂಡಿಲ್ಲ ...ಗಳ ... ವ್ಯವಸ್ಥಿತ...ಸಿಕ್ಕದ್ದು ಡಿಸೆಂಬರ್ ...ನ ನಡೆಸಿದ್ದವರಿಗೆ ...ರ ಸಹಾಯದಿಂದ.


...ಕವು ...ಗಳು ?

...ಸಿಕ್ಕ ಬಗೆಯನ್ನು ...ಪ್ರಕಟಣೆ ಹೇಗೆ ...ಬಣ್ಣಿಸಿದೆ ನೋಡಿ- ಮಸೀದಿಯನ್ನು ಬೀಳಿಸುವ ಕೆಲಸ ...ಜರುಗುತ್ತಿರುವ ಸಾಗಿದ್ದಾಗ ಸುಧಾ ಮಾಲಯ್ಯ ಎಂಬ ಒಬ್ಬ "ಯುವ ಹಾಗೂ ಪ್ರತಿಭಾಶಾಲಿ ಕಲಾ ಇತಿಹಾಸಕಾರರು" ಬಂದರು. ಎಂತಹ ಆಶ್ಚರ್ಯ? ಮುರಿದುಬಿದ್ದಿದ್ದ ಮಸೀದಿಯ ಗೋಡೆಯೊಳಗಿಂದ ಮೂರ್ತಿಗಳು, ಕಂಬಗಳು, ಶಿಲಾಪ್ರತಿಮೆಗಳು ಮತ್ತಿತರ ಬಾಬ್ರಿ ಮಸೀದಿಯ ಹಿಂದಿನ ಕಾಲದ ಪುರಾತತ್ವ ಅವಶೇಷಗಳು ಅವರ ಕಣ್ಣಿಗೆ ಬಿದ್ದವು. ತಕ್ಷಣ ಅವು ಕಂಡ ಜಾಗದಲ್ಲೇ ಫೋಟೋ ತೆಗೆಯಲು ಕ್ಯಾಮರಾ ಕ್ಲಿಕ್ ಮಾಡಿದರು - 'ದುರದೃಷ್ಟವಶಾತ್' ಅವರಲ್ಲಿ ಫಿಲ್ಮ್ ಇರಲಿಲ್ಲ. ಇನ್ನೂ ಎರಡು ಕ್ಯಾಮರಗಳಿದ್ದವು. ಅವುಗಳಲ್ಲೂ ಫಿಲ್ಮ್ ಇರಲಿಲ್ಲ. ಎರಡು ವಿಡಿಯೋ ಕ್ಯಾಮರಗಳಿದ್ದವು. ಅವುಗಳಲ್ಲೂ ಫಿಲ್ಮ್ ಇರಲಿಲ್ಲ - ಎಂತಹ 'ದುರದೃಷ್ಟ'!

ಆದರೆ ಆಕೆ ಬಿಡಲಿಲ್ಲ. ಮರುದಿನ ಡಿಸೆಂಬರ್ 7ರಂದು ಫಿಲ್ಮ್ ಸಹಿತ ಬಂದರು. ಆದರೆ ಅಷ್ಟರಲ್ಲಿ ಆ 'ಅವಶೇಷ'ಗಳನ್ನು ರಾಮಕಥಾಕುಂಜ್‌ಗೆ ವರ್ಗಾಯಿಸಲಾಗಿತ್ತು. ಇನ್ನೇನು ಮಾಡುವುದು? ಅಲ್ಲಿ ಫೋಟೋ ಹೊಡೆದು ಅವರ ಜತೆಗೆ ದಿಲ್ಲಿಗೆ ಧಾವಿಸಿದರು. ತನ್ನ ಗುರು ಪುರಾತತ್ವಶಾಸ್ತ್ರಜ್ಞರು ಎಸ್.ಪಿ. ಗುಪ್ತಾರನ್ನ(ಅವರು ವಿ.ಹೆಚ್.ಪಿ.ಯ ಬಹಿರಂಗ ಬೆಂಬಲಿಗರು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ) ಭೇಟಿ ಮಾಡಿದರು. ಫೋಟೋಗಳ ಗುಣಮಟ್ಟ ಚೆನ್ನಾಗಿಲ್ಲವಾದ್ದರಿಂದಾಗಿ ಯಾವುದೇ ತೀರ್ಮಾನಕ್ಕೆ ಬರಲಾಗದು ಎಂದು ಅವರು ಅಯೋಧ್ಯೆಗೆ 'ಧಾವಿಸಿ'ದರು- ಡಿಸೆಂಬರ್ 13 ರಂದು! ಮತ್ತೆ 'ಅವಶೇಷ'ಗಳ ಫೋಟೋ, ವಿಡಿಯೋ, ಮುದ್ರಣ ಮಾಡಿಕೊಂಡರು. ವಿಶೇಷಜ್ಞರು ಅದರ ಪರಿಶೀಲನೆ ಮಾಡಿದರು. ಡಿಸೆಂಬರ್ 19 ರಂದು ತಮ್ಮ ತೀರ್ಮಾನವನ್ನು ವಿಜಯೋತ್ಸಾಹದಿಂದ ಪ್ರಕಟಿಸಿದರು - ನೋಡಿ ದೇವಸ್ಥಾನದ ಪುರಾವೆ ಸಿಕ್ಕಿಯೇ ಬಿಟ್ಟಿತು!

ಆದರೆ ಸುಧಾಮಾಲಯ್ಯರವರ 'ದುರದೃಷ್ಟ' ಇಲ್ಲಿಗೆ ಮುಗಿದಿರಲಿಲ್ಲ. ಪತ್ರಿಕಾ ಸಮ್ಮೇಳನದಲ್ಲಿ ಹಾಜರಿದ್ದ ಪುರಾತತ್ವ ಶಾಸ್ತ್ರದ ಬಗ್ಗೆ ತಿಳಿದಿದ್ದ ಪತ್ರಕರ್ತರ ಬಾಯಿ ಸುಮ್ಮನಿರಬೇಕಲ್ಲ! "ಸುಧಾರವರೇ ಬಾಬ್ರಿ ಮಸೀದಿ ಅಂದು ಕೆಡವುತ್ತಾರೆಂದು ನಿಮಗೆ ಅಡ್ವಾನ್ಸ್ ಸುದ್ದಿ ಸಿಕ್ಕಿತ್ತೇ?" ಇಲ್ಲ, ಇಲ್ಲ.., ತಾನು ಕಲಾ ಇತಿಹಾಸಕಾರರಾಗಿ ಬಂದಿರಲಿಲ್ಲ- ಪತ್ರಕರ್ತರಾಗಿ ಬಂದಿದ್ದೆ ಎಂಬ 'ಸ್ಪಷ್ಟನೆ' ಬಂತು. ಯಾವ ಪತ್ರಿಕೆ? 'ಓಜಸ್ವಿನಿ' ಎಂಬ ಪತ್ರಿಕೆ. ಆ ಪತ್ರಿಕೆಯೊಂದಿದ್ದರೆ ಇದುವರೆಗಂತೂ ಬೆಳಕು ಕಂಡಿಲ್ಲ ಎಂಬುದೂ ತಿಳಿಯಿತು. ಅದೇನೇ ಇರಲಿ, ಆ ದಿನ ಪತ್ರಕರ್ತರಿಗಾದ ಗತಿಯನ್ನು ನೆನೆಸಿಕೊಂಡಾಗ ಇನ್ನೊಂದು ಪ್ರಶ್ನೆ ಬಂತು

ಪುಟ ೬ ಕ್ಕೆ



ಈ 'ಕೋದಂಡರಾಮ'ನದೆಂಬ ಪ್ರತಿಮೆ, ಎರಡಡಿ ಅಗಲದ ಮರಳುಗಲ್ಲಿನ ಶಿಲಾಲೇಖ, ಮೂರಡಿ ಎತ್ತರ, ಒಂದಡಿ ವ್ಯಾಸದ ಇಂತಹ ಆರು ಕಂಬಗಳು, ಇನ್ನೂ ಹಲವಾರು 'ಅವಶೇಷ'ಗಳು ಬಾಬ್ರಿ ಮಸೀದಿಯ ಗೋಡೆಯ ನಡುವಿಂದ ಸಿಕ್ಕಿತಂತೆ. ನಿಜವಾಗಿಯೂ ಗೋಡೆಯ ನಡುವೆ ಇವೆಲ್ಲ ಇದ್ದುವೆ, ಅಥವಾ ಬಾಬ್ರಿ ಮಸೀದಿಯ ತಳಪಾಯದ ಅಡಿಯಲ್ಲಿ ಸಿಕ್ಕವೇ ಎಂದು ಕೇಳಿದಾಗ ಇರಬಹುದು ಎಂದವರು ಮೊದಲು ವಿಹೆಚ್‌ಪಿ "ಪ್ರತಿಭಾಶಾಲಿ ಕಲಾ ಇತಿಹಾಸಕಾರರು" ಎಂದು ವರ್ಣಿಸಿದ ನಂತರ ಪತ್ರಕರ್ತರೆಂದೂ ಹೇಳಿಕೊಂಡ, ನಂತರ ಕರಸೇವಕರೆಂದೂ ಒಪ್ಪಿಕೊಂಡ ಸುಧಾ ಮಾಲಯ್ಯ. ಇದೊಂದು ಹಾಸ್ಯಾಸ್ಪದ 'ಪುರಾವೆ', ವೈಜ್ಞಾನಿಕ ಚರ್ಚೆಗೆ ಅನರ್ಹವಾದ ಸಂಗತಿ, ಪುರಾತತ್ವ ಶಾಸ್ತ್ರದ ವೈಜ್ಞಾನಿಕ ಸ್ವರೂಪಕ್ಕೆ ಮಸಿ ಬಳಿಯುವಂತಹ ಪ್ರಯತ್ನ ಇದಾಗಿರುವುದರಿಂದಷ್ಟೇ ಆ ಬಗ್ಗೆ ಗಮನ ಹರಿಸಬೇಕು ಎನ್ನುತ್ತಾರೆ ಪ್ರಸಿದ್ಧ ಇತಿಹಾಸಕಾರರು ಹಾಗೂ ಪುರಾತತ್ವಜ್ಞರು.





.... ಇಲ್ಲೂ ಕಾಂಗ್ರೆ ಸಂಸ್ಕೃತಿ (ಪ್ರ)ದರ್ಶನ

ಗೂಂಡಾಗಿರಿ, ಅಂತಃಕಲಹ, ಪರಸ್ಪರ ಕಾಲನ್ನು ಹಿಡಿದು ಎಳೆದಾಡುವುದು, ಕೊನೆಗೆ ಮಾರಾಮಾರಿ......

ಇದು ಯಾರಿಗೆ ಸಂಬಂಧಪಟ್ಟ ಪ್ರಶ್ನೆ ಎಂದು ಒಗಟಿನ ರೀತಿಯಲ್ಲಿ ಪ್ರಶ್ನಿಸಿದರೆ ಸಾಕು, ರಾಜಕೀಯ ಎಬಿಸಿಡಿ ಬಲ್ಲ ಯಾರೂ ತಕ್ಷಣ ಉತ್ತರ ಹೇಳುತ್ತಾರೆ: ಕಾಂಗ್ರೆಸ್(ಐ).

ಪಕ್ಷದ ಸಭೆಗಳಲ್ಲಿ ಅಲ್ಲದೆ ಸಾರ್ವಜನಿಕ ಸಭೆ-ಸಮಾರಂಭಗಳಲ್ಲೂ ಕಾಂಗ್ರೆ ಮಂದಿ ಬಹಿರಂಗವಾಗಿ ಕಿತ್ತಾಡಿದ ಹಲವಾರು ಉದಾಹರಣೆಗಳಿವೆ. ಈಗೆ ಇಲ್ಲಿ ಪ್ರಸ್ತಾಪಿಸ ಹೊರಟಿರುವುದು ಅಂಥ ಯಾವುದೇ ಕಾರ್ಯಕ್ರಮವಲ್ಲ, ರಾಷ್ಟ್ರೀಯ ಮಹತ್ವದ ಒಂದು ಕಾರ್ಯಕ್ರಮದಲ್ಲೇ ನಡೆದಂಥ ಘಟನೆ ಬಗ್ಗೆ.

ಜನವರಿ 23ರಂದು ಕೇರಳದ ಕೊಚ್ಚಿಯಲ್ಲಿ ಕಾಂಗ್ರೆ ಆಶ್ರಯದಲ್ಲಿ ನಡೆದ ಕೋಮುವಾದ ವಿರೋಧಿ ಸಮ್ಮೇಳನವೊಂದು ರಾಜ್ಯ ಕಾಂಗ್ರೆಸ್‌ನ ಎರಡು ಬಣಗಳ ನಡುವಿನ ಜಗಳ-ಗೊಂದಲದಿಂದಾಗಿ ರದ್ದಾಯಿತು.

ನಾಗರಿಕ ಉಡುಪಿನಲ್ಲಿ ಪೋಲೀಸರು ಸಮಾರಂಭದಲ್ಲಿ ಭಾಗವಹಿಸಿದ್ದಾರೆ ಎಂಬುದು ಒಂದು ನೆಪವಾಗಿ ಗದ್ದಲ--ಜಟಾಪಟಿ ನಡೆಯಿತು. ಮಫ್ತಿಯಲ್ಲಿದ್ದ ಪೋಲೀಸರು ಎನ್ನಲಾದ ಕೆಲವರನ್ನು ಕಾಂಗ್ರೆ ಕಾರ್ಯಕರ್ತರು ಸಭಿಕರ ನಡುವಿನಿಂದ ಹಿಡಿದು ಎಳೆದು ವೇದಿಕೆಯೆದುರು ತಂದಾಗ ಗಲಭೆ ಪ್ರಾರಂಭಗೊಂಡಿತು.

ಗೊಂದಲ ಗದ್ದಲದಿಂದ ಉದ್ರಿಕ್ತರಾದ ಸಭಿಕರನ್ನು ಸಮಾಧಾನಪಡಿಸಲು ನಡೆಸಿದ ಪ್ರಯತ್ನಗಳೆಲ್ಲಾ ವಿಫಲವಾದಾಗ ಪ್ರದೇಶ ಕಾಂಗ್ರೆ ಅಧ್ಯಕ್ಷ ವಯಲಾರ್ ರವಿ ಸಮ್ಮೇಳನವನ್ನು ಮುಂದೂಡಲಾಗಿದೆ ಎಂದು ಪ್ರಕಟಿಸಿದರು. ಸಮ್ಮೇಳನ ಉದ್ಘಾಟಿಸಬೇಕಿದ್ದ ಮುಖ್ಯಮಂತ್ರಿ ಕರುಣಾಕರನ್ ಸಹಿತ ವೇದಿಕೆಯಲ್ಲಿ ಉಪಸ್ಥಿತರಿದ್ದ ಪ್ರಮುಖರೆಲ್ಲಾ ತಕ್ಷಣ ಜಾಗ ಖಾಲಿ ಮಾಡಿದರು.

ಎಳೆದಾಟದ ನಡುವೆ ಕೋಲಾಹಲಕ್ಕೆ ಮೂಲ ಕಾರಣವೆಂದು ಗುರುತಿಸಲಾದ ಆರು ಮಂದಿ ಪಕ್ಷ ಸದಸ್ಯರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲಾಗಿದೆ. ಉಚ್ಚಾಟಿತ ಸದಸ್ಯರಲ್ಲಿ ಮೂರು ಮಂದಿ ಕೇರಳ ಪ್ರದೇಶ ಕಾಂಗ್ರೆ ಸಮಿತಿ ಸದಸ್ಯರಾಗಿರುವುದು ಗಮನಾರ್ಹವಾಗಿದೆ.

ಕೋಲಾಹಲದಿಂದಾಗಿ ಪ್ರಾರ್ಥನೆಯನ್ನು ಹೊರತುಪಡಿಸಿದರೆ ಬೇರಾವುದೇ ಕಲಾಪ ನಡೆಯಲಿಲ್ಲ. ವೇದಿಕೆಯ ಕೆಳಗಿದ್ದ ಗಾಂಧೀಜಿಯವರ ಚಿತ್ರ ಇದ್ದ ಹಾಗೆಯೇ ಇತ್ತು. ಆದರೆ ಕರುಣಾಕರನ್ ಬೆಳಗಿದ್ದ ದೀಪವನ್ನು ನಂದಿಸಲಾಯಿತು ಹಾಗೂ ಅದರ ಬಳಿಯಿದ್ದ ಹೂವುಗಳನ್ನು ತುಳಿದ ಹಾಳು ಮಾಡಲಾಯಿತು.

ಈ ಎಲ್ಲದರ ಬಗ್ಗೆ ಬಹುಶಃ ಇನ್ನಷ್ಟು ಹೆಚ್ಚಿನ ವಿಶ್ಲೇಷಣೆ ಟಿಪ್ಪಣಿ ಬೇಡವೇನೋ...... ‑

ಕೋಮುವಾದ ವಿರೋಧಿ ಸಾಹಿತ್ಯ ಮಹಾಪೂರ

ಅಯೋಧ್ಯೆ ಘಟನೆಗಳ ಹಿನ್ನೆಲೆಯಲ್ಲಿ ಕೋಮುವಾದ ವಿರೋಧಿ ಆಂದೋಲನವನ್ನು ಕ್ರೋಢೀಕರಿಸುವ ಹಾಗೂ ಹೆಚ್ಚೆಚ್ಚು ಜನರಿಗೆ ಸಂದೇಶ ತಲುಪಿಸುವ ಉದ್ದೇಶದಿಂದ ಭಾರೀ ಪ್ರಮಾಣದಲ್ಲಿ ಸಾಹಿತ್ಯವನ್ನು ಪ್ರಕಟಿಸಲು ಪಶ್ಚಿಮ ಬಂಗಾಳ ಸಿಪಿಐ(ಎಂ) ಮತ್ತು ಅದರ ಸಾಮೂಹಿಕ ಸಂಘಟನೆಗಳು ನಿರ್ಧರಿಸಿವೆ. ಪ್ರಕಟಣೆ ಕೆಲಸ ಈಗಾಗಲೇ ಆರಂಭವಾಗಿದೆ.

ಇತ್ತೀಚಿನ ಘಟನೆಗಳ ಕುರಿತ ರಾಜಕೀಯ ವಿಶ್ಲೇಷಣೆ ಮಾತ್ರವಲ್ಲದೆ ಕೋಮುವಾದಿಗಳು ಎತ್ತಿರುವ ಪ್ರಶ್ನೆಗಳಿಗೆ ಉತ್ತರಗಳನ್ನೊಳಗೊಂಡ ಕೆಲವು ಸಣ್ಣ ಪುಸ್ತಿಕೆಗಳನ್ನು ಈಗಲೇ ಪ್ರಕಟಿಸಲಾಗಿದೆ. ಅಯೋಧ್ಯೆ ದುರಂತ ಆಸ್ಫೋಟಿಸಿದ ಬೆನ್ನಲ್ಲೇ ಒಂದನ್ನು ಪ್ರಕಟಿಸಲಾಗಿತ್ತು. ಅದಕ್ಕೆ ಪೂರಕವಾಗಿ ಇನ್ನೊಂದು ಪುಸ್ತಕವನ್ನು ಕೆಲ ದಿನಗಳ ಹಿಂದೆ ಮುದ್ರಿಸಲಾಯಿತು. ಈ ಪುಸ್ತಕಗಳ ಲಕ್ಷಾಂತರ ಪ್ರತಿಗಳು ಮಾರಾಟವಾಗಿವೆ. ಮನೆ ಮನೆ ಪ್ರಚಾರಕ್ಕಾಗಿ ಮುದ್ರಿಸಲಾದ ಪುಸ್ತಿಕೆಯೊಂದರ ಏಳು ಲಕ್ಷ ಪ್ರತಿಗಳು ಮಾರಾಟವಾದವು.

ಇತ್ತೀಚಿನ ವಿದ್ಯಮಾನಗಳನ್ನು ವಿಶ್ಲೇಷಿಸುವ ಹಲವಾರು ಲೇಖನಗಳನ್ನು ಒಂದು ತಿಂಗಳ ಕಾಲ ಪಕ್ಷದ ಮುಖವಾಣಿ 'ಗಣಶಕ್ತಿ'ಯಲ್ಲಿ ಪ್ರಕಟಿಸಲಾಗಿದೆ. ಸಾಮೂಹಿಕ ಸಂಘಟನೆಗಳು ತಮ್ಮ ತಮ್ಮ ಪ್ರಕಟಣೆಗಳ ವಿಶೇಷ ಬುಲೆಟಿನ್‌ಗಳನ್ನು ಪ್ರಕಟಿಸುತ್ತಿವೆ. ಪ್ರಚಾರಾಂದೋಲನ ಮತ್ತು ಉಪನ್ಯಾಸಕ್ಕೆ ಅನುಕೂಲವಾಗುವಂಥ ಮಾಹಿತಿಗಳುಳ್ಳ ಸಾಹಿತ್ಯವನ್ನು ಪಕ್ಷದ ರಾಜ್ಯ ಸಮಿತಿ ಸಿದ್ಧಪಡಿಸಿದೆ.

ಶಿವಸೇನೆಯ ವ್ಯವಸ್ಥಿತ ಆಕ್ರಮಣ

ಮುಂಬಯಿಯಲ್ಲಿ 10-12 ದಿನಗಳ ಕಾಲ ಅವ್ಯಾಹತವಾಗಿ ನಡೆದ ಹಿಂಸೆ 500ಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿದೆ. ಸಾವಿರಾರು ಜನರು ಗಾಯಗೊಂಡಿದ್ದಾರೆ. ಸ್ವತಂತ್ರ ಭಾರತದಲ್ಲಿ ಮುಂಬಯಿ ಕಂಡ ಈ ಅತ್ಯಂತ ಭೀಕರ ಹಿಂಸಾಕಾಂಡದಿಂದ ಬೆದರಿ ಗಾಬರಿಗೊಂಡು ಸಾವಿರಾರು ಜನರು ಬೇರೆ ಬೇರೆ ರಾಜ್ಯಗಳಿಗೆ ವಲಸೆ ಹೋಗಿದ್ದಾರೆ. ಉತ್ತರಪ್ರದೇಶ, ಬಿಹಾರ ರಾಜ್ಯಗಳಿಗೆ ಅತೀ ಹೆಚ್ಚು ಜನರು ಮರಳಿದ್ದಾರೆ. ಬೇರೆ ಹಲವು ರಾಜ್ಯಗಳಿಗೆ ಕೂಡಾ ಸಂತ್ರಸ್ತ ಜನರು ಹಿಂದಿರುಗಿದ್ದಾರೆ. ಇಂಥ ರಾಜ್ಯಗಳಲ್ಲಿ ಪಶ್ಚಿಮ ಬಂಗಾಳ ಕೂಡಾ ಒಂದು.

ಕಲ್ಕತ್ತಕ್ಕೆ ಮರಳಿ ಬಂದ ವಲಸೆಗಾರರ ಬಗ್ಗೆ ಐಎನ್‌ಎಸ್‌ನ ಸಂಕ್ಷಿಪ್ತ ವರದಿ ಇಲ್ಲಿದೆ.

ಎರಡು ವಿಶೇಷ ರೈಲುಗಳ ಮೂಲಕ ಜನರು ಕಲ್ಕತ್ತಕ್ಕೆ ಬಂದು ತಲುಪಿದ್ದು ಇನ್ನಷ್ಟು ಜನರು ಬರುವ ನಿರೀಕ್ಷೆಯಿದೆ. ಸುಮಾರು 50 ಗಂಟೆಗಳ ಪ್ರಯಾಣ ಮಾಡಿ ಬಂದ ಈ ಗಾಬರಿಗೊಂಡ ಜನರು ಹೌರಾ ನಿಲ್ದಾಣದಲ್ಲಿ ಇಳಿದಾಗ ಅದು ನಿರಾಶ್ರಿತರ ಶಿಬಿರದಂತೆ ಕಾಣುತ್ತಿತ್ತು. ಬಂದಿಳಿದ ಜನರ ಮುಖಗಳು ಬೇಳವವಾಗಿದ್ದವು. ಹಿಂಸೆಯ ನೋವು ಪ್ರತಿಬಿಂಬಿತವಾಗುತ್ತಿದ್ದವು.

ಪ್ರತಿಯೊಬ್ಬ ಸಂತ್ರಸ್ತನಲ್ಲಿ ಕೂಡಾ ಒಂದೇ ರೀತಿಯ ಕಥೆ. ಇದು ಎರಡು ಧಾರ್ಮಿಕ ಸಮುದಾಯಗಳ ನಡುವೆ ನಡೆದ ಗಲಭೆ ಎಂದು ಹೇಳಲು ಯಾರೂ ಸಿದ್ಧರಿಲ್ಲ. ಇದು ಶಿವಸೇನೆ ನಡೆಸಿದ ವ್ಯವಸ್ಥಿತ ಆಕ್ರಮಣವಾಗಿತ್ತು ಎಂದು ನಿರಾಶ್ರಿತನೊಬ್ಬ ನಗರದ ಒಂದು ದಿನಪತ್ರಿಕೆಗೆ ತಿಳಿಸಿದ.

ತಲೆಗೆ ಕಳದಿ ಪಟ್ಟಿ ಸುತ್ತಿಕೊಂಡು ಕೈಗಳಲ್ಲಿ ಮಚ್ಚು, ಬಡ್ಡ, ಲಾಠಿಗಳನ್ನು ಹಿಡಿದು ಹಾದಿ ಬೀದಿಗಳಲ್ಲಿ ಆಡಾಡುತ್ತಾ ಮುಗ್ಧ ಜನರ ಮೇಲೆ ಆಕ್ರಮಣ ನಡೆಸಿದ ಶಿವಸೈನಿಕರ ಅಮಾನುಷ ಕೃತ್ಯಗಳನ್ನು ನೆನಪಿಸಿಕೊಳ್ಳುತ್ತಿದ್ದಂತೆ ಈ ಜನರ ಮುಖಗಳು ಬಿಳಿ ಬಣ್ಣಕ್ಕೆ ತಿರುಗುತ್ತಿದ್ದವು. ಕೊಳಗೇರಿಗಳು -ಮನೆಗಳು ಸುಟ್ಟು ಹೋದವು, ನೂರಾರು ಜನರು ಕೊಲೆಯಾದರು, ಅಪಾರ ಪ್ರಮಾಣದಲ್ಲಿ ಲೂಟಿ ನಡೆಯಿತು.

ಒಂದೂಗಳ ಮೇಲೆಯೇ ದಾಳಿ...... ಇನ್ನೊಂದು ನಿರಾಶ್ರಿತ ಹೇಳಿದ್ದು ಹೀಗೆ : ಆರಂಭದಲ್ಲಿ ಶಿವಸೈನಿಕರು ಅಲ್ಪ ಮುಸ್ಲಿಂ ಪ್ರದೇಶಗಳ ಮೇಲೆ ದಾಳಿ ಮಾಡಿದರು. ಕ್ರಮೇಣ ಅವರು ಹಿಂದೂ ಧರ್ಮಕ್ಕೆ ಸೇರಿದ, ಆದರೆ ಮಹಾರಾಷ್ಟ್ರೀಯರಲ್ಲದವರ ಜನರ ಮೇಲೆಯೇ ಆಕ್ರಮಣವನ್ನು ವ್ಯವಸ್ಥಿತವಾಗಿ ನಡೆಸತೊಡಗಿದರು. ಮಹಾರಾಷ್ಟ್ರ ಮಹಾರಾಷ್ಟ್ರೀಯರಿಗೆ ಮಾತ್ರ ಎಂಬ ದೀರ್ಘಕಾಲದ ಪ್ರಾದೇಶಿಕವಾದದ ಗುರಿಯನ್ನು ಸಾಧಿಸುವುದು ಅವರ ಉದ್ದೇಶ......

ಕಲ್ಕತ್ತ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಿಂದ ಜೀವನ ನಿರ್ವಹಣೆಗಾಗಿ ಮುಂಬಯಿಗೆ ತೆರಳಿ ಶ್ರಮಪಟ್ಟು ಸಂಪಾದಿಸಿದ್ದೆಲ್ಲವನ್ನು ಕಳೆದುಕೊಂಡು ಬಂದಿರುವ ಜನರ ಭವಿಷ್ಯ ಅನಿಶ್ಚಿತವಾಗಿದೆ.

ಜಾಗವನ್ನು ಅತಿಕ್ರಮಿಸಲಿಕ್ಕಾಗಿ ಬೃಹತ್ ಆಸ್ತಿ ವ್ಯವಹಾರಸ್ಥರು ಹಾಗೂ ಕಟ್ಟಡ ನಿರ್ಮಾಣಕಾರರು ಕೊಳಗೇರಿಗಳಿಗೆ ಬೆಂಕಿ ಹಚ್ಚಿದರು ಹಾಗೂ ಲೂಟಿ ಮಾಡಿದರು ಎಂಬುದು ವಲಸೆಗಾರರ ಪೈಕಿ ಇದ್ದ ಕೊಳಗೇರಿ ನಿವಾಸಿಗಳು ಹೇಳಿದರು. ಇದು ಪರಿಸ್ಥಿತಿಯ ಇನ್ನೊಂದು ಘೋರ ಮುಖವಾಗಿದೆ.

ಆಶಾಕಿರಣ: ಗಲಭೆಗಳನ್ನು ನಿಯಂತ್ರಿಸಲು ಮಹಾರಾಷ್ಟ್ರ ಸರಕಾರ ಪೂರ್ಣ ವಿಫಲವಾ...ದು ಪಶ್ಚಿಮ ಬಂಗಾಳ ಮುಖ್ಯಮ... ಜ್ಯೋತಿ ಬಸು ಹೇಳಿದ್ದಾರೆ. ಗಲ... ಗಳು 'ಊಹಿಸಲೂ ಆಗದಿದ್ದಂಥದ್ದು' ಎ... ಅವರು ವರ್ಣಿಸಿದ್ದಾರೆ. ಪ್ರಧಾನಿ ಜತೆದೂ... ವಾಣಿ ಮೂಲಕ ಮಾತನಾಡಿದ ಅ... ಕಠಿಣ ಕ್ರಮಗಳನ್ನು ಕೈಗೊಳ್ಳಲು ಒತ್ತಾ... ಸಿದರು.

ಮರಳಿ ಬಂದ ಜನರಿಗೆ ಕ... ಎಂದಿನಂತೆ ಆಶಾಕಿರಣವನ್ನು ತೋ... ವಲಸೆ ಬಂದ ಜನರಲ್ಲಿ ಆತ್ಮವಿ... ಮೂಡಿದೆ.



- ವಿಶ್ವ

ತ್ರಿಪುರಾ ಆಳುವ ಕೂಟಕ್ಕೆ ಕೇಂದ್ರ ಪಡೆ ಬೆಂಬಲ

ತ್ರಿಪುರಾದ ವಿಧಾನಸಭೆ ಚುನಾ...ಣೆಗಳ ಹಿನ್ನೆಲೆಯಲ್ಲಿ ಕೇಂದ್ರೀಯ ಪ...ಯಾದ ಅಸ್ಸಾಂ ರೈಫಲ್ಸ್ ರಾಜ್ಯದ ಆ... ಕಾಂಗ್ರೆಸ್(ಐ)-ಟಿಯುಜೆಎಸ್ ... ಪರವಾದ ರೀತಿಯಲ್ಲಿ ವರ್ತಿಸುತ್ತಿ...

ಜನವರಿ 18ರಂದು ಕುಳ್ಳೆ ಕ್ಷೇ... ಸಿಕಾರಿಬಾರಿನಲ್ಲಿ ಸಿಪಿಐ(ಎಂ)ನ ಚು... ...ಣಾ ಸಭೆಯೊಂದನ್ನು ನಡೆಸಲು ಅ... ರೈಫಲ್ಸ್ ಸಿಬ್ಬಂದಿಗಳು ಅವಕಾಶ ನೀಡಲಿ... ನಾಯಕರನ್ನು ತಡೆದರು ಹಾಗೂ ಜನರ... ಓಡಿಸಿದರು. ಕ್ಷೇತ್ರದ ಸಿಪಿಐ(ಎಂ) ಅಭ್ಯ... ಹಪ್‌ನ್ಹಾ ರಿಯಾಂಗ್, ಪ್ರತಿಪಕ್ಷಗಳ ಚುನಾ...ವಣಾ ಪ್ರಚಾರ ಕಾರ್ಯಕ್ಕೆ ಅಡ್ಡಿಪಡಿಸ... ಅರೆಸೇನಾ ಪಡೆಗಳನ್ನು ಬಳಸಿಕೊಳ್ಳಲಾ...ತ್ತಿದೆ ಎಂದು ಚುನಾವಣಾಧಿಕಾರಿ ಸಲ್ಲಿ... ದೂರಿನಲ್ಲಿ ಹೇಳಿದ್ದಾರೆ.

ಕಾವಿಶರಟುಗಳ ಸಂಶೋಧನೆ ಎಂಬ ಸುಳ್ಳು

ಪುಟ 5ರಿಂದ

"ನೀವು ಹೇಗೆ ತಪ್ಪಿಸಿಕೊಂಡಿರಿ? "ಇಲ್ಲಿ-ಇಲ್ಲಿ ಮತ್ತೆ ಪ್ಲೇಟು ಬದಲಿಸಿದರು- "ನಾನು ಕರಸೇವಕಳಾಗಿ, ಒಬ್ಬ ಪತ್ರಕರ್ತೆಳಾಗಿ ಹಾಗೂ ಕಲಾ ಇತಿಹಾಸಕಾರಳಾಗಿ ಹೋಗಿದ್ದೆ" ಏನೊಂದು ಆಗದವರಂತೆ ಎರಡು ಬಾರಿ ಪ್ಲೇಟು ಬದಲಿಸಿದ್ದನ್ನೂ ಮರೆತು ಹೇಳಿಯೇಬಿಟ್ಟರು."

ಎಲ್ಲಿ ಸಿಕ್ಕವು ?

ಇದು ಈ "ಪುರಾವೆ " ಕಂಡುಹಿಡಿದವರ ಬಗ್ಗೆಯಾಯಿತು. ಇನ್ನು ಮೊದಲೇ ಹೇಳಿದಂತೆ ಈ "ಅವಶೇಷ"ಗಳು ಮಸೀದಿಯ ಗೋಡೆಗಳಿಂದ ಹೊರಬಿದ್ದವು! ಅಂದರೆ 450 ವರ್ಷ ಇವು ಆ ಮಸೀದಿ ಗೋಡೆಯಲ್ಲಿ ಹುದುಗಿದ್ದವು. ಆದರೆ ಈ 'ಅವಶೇಷ'ಗಳ ಸುತ್ತ ಆ ಗೋಡೆಯ ಪ್ಲಾಸ್ಟರ್-ದ್ದಾಗಲೀ, ಇನ್ನೇನೇ ತುಣುಕುಗಳಲೀ ಸ್ವಲ್ಪವೂ ಅಂಟಿಕೊಂಡಿಲ್ಲ. ಹಿರಣ್ಯಕಶಿಪು ಗೋಡೆಯೊಡೆದಾಗ ನರಸಿಂಹ ಅವತಾರದಂತೆ ಜಿಗಿದುಬಂತು. ಮೊಗಲರ ಬಗ್ಗೆ ವಿ.ಹೆಚ್.ಪಿ. ಪುರಾತತ್ವಜ್ಞರಿಗೆ ಏನೇ ಪೂರ್ವಾಗ್ರಹ ಇರಬಹುದು. ಆದರೆ ಅವರು ನಿಪುಣ ಕಟ್ಟಡಗಾರರು ಎಂಬ ಬಗ್ಗೆ ಕಲಾ ಇತಿಹಾಸ ತಿಳಿದ ಯಾರಿಗೂ ಸಂಶಯವಿಲ್ಲ. ಇಷ್ಟೊಂದು ಕಂಬಗಳನ್ನು ಶಿಲಾಲೇಖಗಳನ್ನು ಗೋಡೆಯೊಳಗೆ ಹುದುಗಿಸಿಟ್ಟು ಮಸೀದಿ ಕಟ್ಟಿದ್ದಾರೆ ಎಂದು ವಿವೇಚನಾ ಶಕ್ತಿಯಿರುವ ಕಲಾ ಇತಿಹಾಸಕಾರರು ಯಾರೂ ನಂಬಲು ಸಾಧ್ಯವಿಲ್ಲ. ಏಕೆಂದರೆ ಹಾಗೇನಾದರೂ ಅವರು ಮಾಡಿದ್ದರೆ ಈ ಕಟ್ಟಡ ಎಷ್ಟು ಅಸ್ಥಿರವಾಗಿರುತ್ತಿತ್ತೆಂದರೆ ಕಸೇವಕರ ಪಿಕಾಸಿ ಪ್ರಯೋಗವಾಗುವ ಎಷ್ಟೋ ಮೊದಲೇ ಆ ಕಟ್ಟಡ ಬಿದ್ದು ಹೋಗಬೇಕಾಗಿತ್ತು. ಹಾಗೆ ಆಗದೆ ಬಿ.ಜೆ.ಪಿ. ಅದನ್ನು 'ರಾಷ್ಟ್ರೀಯ ಪ್ರಶ್ನೆ' ಮಾಡಲು ಅದು ಬದುಕಿಳಿದಿತ್ತು ಎಂಬುದೇ ಈ ಕಥೆಯ ಹಿಂದಿನ ಕಪಟಕ್ಕೊಂದು ಸಾಕ್ಷಿ. ಅದೂ ಒತ್ತಟ್ಟಿಗಿರಲಿ. ಬಾಬ್ರಿ ಮಸೀದಿ ಕಟ್ಟಿದ ಮಿರ್‌ಬಾಕಿಗೆ ಇವನ್ನೆಲ್ಲ ಮಸೀದಿ ಗೋಡೆಯೊಳಗೆ ಹುದುಗಿಸಿಡುವ ಅಗತ್ಯವಾದರೂ ಏನಿತ್ತು? ಮುಂದೊಂದು ದಿನ ವಿ.ಹೆಚ್.ಪಿ. ಜನಗಳಿಗೆ ಸಾಕ್ಷಿಯಾಗಿ ಸಿಗಲೆಂದೇ ಇರಬಹುದೇ?

ಎಲ್ಲಿ ಸಿಕ್ಕರೇನಂತೆ?

ಪತ್ರಿಕಾ ಸಮ್ಮೇಳನದಲ್ಲಿದ್ದ ಪತ್ರಕರ್ತರು ಇಷ್ಟಕ್ಕೇ ಬಿಡಲಿಲ್ಲ. "ಮಸೀದಿ ಗೋಡೆಯೊಳಗೇ ಇವನ್ನು ನೀವು ಕಂಡಿರೆಂದು ಖಂಡಿತವೇನು? ಗೋಡೆಯೊಳಗೆ ಇವನ್ನು ಯಾವ ರೀತಿಯಲ್ಲಿ ಇಡಲಾಗಿತ್ತು ಎಂಬ ಬಗ್ಗೆ ನಿಮ್ಮ ಬಳಿ ಏನಾದರೂ ದಾಖಲೆಯಿದೆಯೇ?" ವಿ.ಹೆಚ್.ಪಿ.ಯ ಈ "ಪ್ರತಿಭಾ ಸಂಪನ್ನ ಕಲಾ ಇತಿಹಾಸಕಾರ"ರ ಬಳಿ ಉತ್ತರವಿರಲಿಲ್ಲ. "ಅವು ಬಾಬ್ರಿ ಮಸೀದಿಯ ತಳಪಾಯದ ಕೆಳಗಿದ್ದಿರಬಹುದೇ?" ಮತ್ತೊಂದು ಪ್ರಶ್ನೆ. "ಇರಬಹುದು" - ತಾನು ಹಿಂದೆ ಹೇಳಿದ್ದನ್ನು ಯಾವುದೇ ಮುಜುಗರವಿಲ್ಲದೆ ಮರೆತು ಉತ್ತರಿಸಿದರು. "ಹಾಗಾದರೆ ಕರಸೇವಕರು ಮಸೀದಿಯ ತಳಪಾಯವನ್ನು ಅಗೆದರೇ?" ಮತ್ತೊಂದು ಪ್ರಶ್ನೆ. "ನನಗೆ ಸರಿಯಾಗಿ ಗೊತ್ತಿಲ್ಲ" - ಸುಧಾ ಮಾಲಯ್ಯ ಉತ್ತರ.

ಅವರ ಬೇಟು ಹೆಚ್ಚೆಚ್ಚು ಪ್ರಶ್ನೆಗೊಳ್ಳುತ್ತಿರುವುದನ್ನು ಕಂಡ ಆರ್.ಎಸ್.ಎಸ್.ನ ದೀನದಯಾಳ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕ ಡಿ.ಎಸ್. ಅಗರ್‌ವಾಲ್ ನೆರವಿಗೆ ಧಾವಿಸಿದರು.- "ಎಲ್ಲಿ ಸಿಕ್ಕಿದರೇನಂತೆ- ದೇವಸ್ಥಾನದ ಅವಶೇಷ ಸಿಕ್ಕಿತು ಎಂಬುದೇ ಮುಖ್ಯ" ಎಂದರು. ಹೌದು. ಎಲ್ಲಿ ಸಿಕ್ಕರೇನಂತೆ, ಫೈಜಾಬಾದಿನಲ್ಲಿ ಸಿಗಲಿ, ಬೆಂಗಳೂರಿನಲ್ಲಿ ಸಿಗಲಿ ರಾಮದೇವಸ್ಥಾನದ ಅವಶೇಷವಾದರೆ ಸಾಕು ತಾನೇ? ಹೇಗಿದೆ ವಿ.ಹೆಚ್.ಪಿ. ತರ್ಕ?

ರಾಮನ ವಿಗ್ರಹವಲ್ಲ!

ಇನ್ನು 'ಮರವೃಷ್ಟಿ'ದ ಸಂಗತಿಯೆಂದರೆ ಈ ತರ್ಕವನ್ನು ಒಪ್ಪಿಕೊಂಡರೂ ಇದು 'ಪುರಾವೆ'ಯಂತೂ ಆಗುವುದಿಲ್ಲ ಏಕೆ ಗೊತ್ತೇ? ಅವರು ಕೋದಂಡರಾಮನ ಮೂರ್ತಿಯೆನ್ನುವ ವಿಗ್ರಹದ ಕಿವಿ, ಜುಟ್ಟು, ಇತ್ಯಾದಿ ನೋಡಿದರೆ ಅದು ವೈಷ್ಣವ ವಿಗ್ರಹದಂತೆ ಕಾಣುತ್ತಿಲ್ಲ, ಬದಲು ಜೈನವಿಗ್ರಹದಂತೆ ಕಾಣುತ್ತಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಅದು 14-15 ನೇ ಶತಮಾನದ ಯಾವುದೇ ಸಾಧು- ಸಂತರ ವಿಗ್ರಹವಿರಬಹುದು.

ಇನ್ನು ಸಂಸ್ಕೃತ ಶಿಲಾಲೇಖದ ಬಗ್ಗೆ ನೋಡಿ ದೇವನಾಗರಿ ಲಿಪಿಯಲ್ಲಿರುವ ಈ ಉಲ್ಲೇಖವನ್ನು ಓದಲು ಸಾಕಷ್ಟು ಸಮಯ ಹಿಡಿಯುತ್ತದೆ ಎಂದು ವಿನಯದಿಂದಲೇ ಸುಧಾ ಮಾಲಯ್ಯ ಹಾಗೂ ಎಸ್.ಪಿ.ಗುಪ್ತಾ ಹೇಳಿದ್ದಾರೆ. ಆದರೂ 'ಸಾಕೇತ ಮಂಡಲದ ಅಯೋಧ್ಯೆ ಎಂಬಲ್ಲಿ ಒಬ್ಬ ಬಹುಪೂಜ್ಯ ದೇವರ ಜನ್ಮಭೂಮಿಯ ಸ್ಮಾರಕವಾದ ಮಂದಿರವಿತ್ತು, ವಾಮನನಾಗಿ ಬಲಿ ರಾಜನನ್ನು ಸೋಲಿಸಿದ, ಇನ್ನೊಂದು ಅವತಾರದಲ್ಲಿ ಹತ್ತುತಲೆಯ ರಾವಣನನ್ನು ಸೋಲಿಸಿದ ದೇವರ ದೇವಸ್ಥಾನವದು" ಎಂದು ಈ ಶಿಲಾಲೇಖ ಹೇಳಿದೆ ಎಂಬ ತೀರ್ಮಾನಕ್ಕೆ ಅವರು ಬಂದು ಬಿಟ್ಟಿದ್ದಾರೆ.

'ಸಾಕೇತ ಮಂಡಲ'ವೆಂಬುದೇ ಇರಲಿಲ್ಲ!

ಮಧ್ಯಯುಗದ ಶಿಲಾಲೇಖಗಳ ಬಗ್ಗೆ ಸಾಕಷ್ಟು ಸಂಶೋಧನೆ ಮಾಡಿರುವ ದಿಲ್ಲಿ ವಿಶ್ವವಿದ್ಯಾಲಯದ ಡಾ. ಕೆ. ಎಮ್. ಶ್ರೀಮಾಲಿ ಇದನ್ನು ಒಪ್ಪಿಕೊಳ್ಳುವುದು ಕಷ್ಟ ಎಂದಿದ್ದಾರೆ. ಏಕೆಂದರೆ 11ನೇ ಶತಮಾನದ ವೇಳೆಗೆ ಈ ಪ್ರದೇಶದ ಆಳರಸರು ಗಢವಾಲಾ ಅರಸರು. ಅವರ ಕಾಲದ ಇತರ ತೀರ್ಥಸ್ಥಳಗಳ ಬಗ್ಗೆ ತಿಳಿದಿವೆ. ಅವುಗಳಲ್ಲಿ ಎಲ್ಲಿಯೂ 'ಜನ್ಮಭೂಮಿ ತೀರ್ಥ'ದ ಪ್ರಸ್ತಾಪವಿಲ್ಲ. ಅಷ್ಟೇ ಅಲ್ಲ ಈ ಅರಸರ ಕಾಲದಲ್ಲಿ 'ಮಂಡಲ'ಗಳು ಇರಲೇ ಇಲ್ಲ. ಇದ್ದುದ್ದು 'ಗ್ರಾಮ' 'ಪಟ್ಟಲ' ಗಳಷ್ಟೆ. ಇನ್ನೊಂದು ವಿಶೇಷವೆಂದರೆ ಗುಪ್ತಾ-ಸುಧಾ ಮಾಲಯ್ಯನವರು ತೋರಿಸಿರುವ ಶಿಲಾಲೇಖದಲ್ಲಿ ದಿನಾಂಕವೂ ಇಲ್ಲ, ಅದನ್ನು ಕೆತ್ತಿಸಿರುವ ರಾಜರ ಹೆಸರೂ ಇಲ್ಲ. ಗಢವಾಲಾ ಅರಸರ ಇದುವರೆಗೆ ದೊರೆತ ಶಿಲಾಲೇಖಗಳಲ್ಲೆಲ್ಲಾ ಇವು ಇವೆ.

ಶುದ್ಧ ವಂಚನೆ

ಆದರೂ ಸಾರ್ವಜನಿಕರು ಈ ಎಲ್ಲಾ 'ಅವಶೇಷ'ಗಳನ್ನು ಬಾಬ್ರಿ ಮಸೀದಿಯ ಮೊದಲಿದ್ದ ರಾಮದೇವಸ್ಥಾನದ ಕುರುಹುಗಳೆಂದು ವಿಶ್ವಾಸದಿಂದ ಒಪ್ಪಿಕೊಳ್ಳಬೇಕು ಎಂದು ವಿ.ಹೆಚ್.ಪಿ. ಪ್ರೇರಿತ ಇತಿಹಾಸಕಾರರ ವೇದಿಕೆಯ ಮನವಿ. ಏಕೆ? ಏಕೆಂದರೆ ಇಷ್ಟೊಂದು 'ಅವಶೇಷ'ಗಳನ್ನು ಯಾರಾದರೂ ಫೋರ್ಜರಿ ಮಾಡಿ ಬೇರೆ ಕಡೆಯಿಂದ ಮಸೀದಿಯ ಅವ...ಷಗಳ ನಡುವೆ ತಂದಿಡಲು ಸಾಧ್ಯವೇ? - ಅವರ ಪ್ರಶ್ನೆ.

ಇದಕ್ಕೆ ನಮ್ಮ ಪ್ರತಿ ಪ್ರಶ್ನೆ ...ಗಡ...ರದು ? ವಿವಾದಿತ ಪ್ರದೇಶ ಕನಿಷ್ಟ ಹ...ವಾರು ಗಂಟೆಗಳ ಕಾಲ 'ಕರಸೇವಕರ ರಾ...ಧಾರ'ದಲ್ಲೇ ಇತ್ತು. ಈ ದೇಶದಲ್ಲಿ ಪು...ತತ್ವ ಅವಶೇಷಗಳ ಫೋರ್ಜರಿಯಂತೂ ಒ... 'ನಿಪುಣಕಲೆ'ಯಾಗಿ, ಅತ್ಯಂತ ಲಾಭದಾಯ... ವ್ಯಾಪಾರವಾಗಿರುವುದು ಎಲ್ಲರಿಗೂ ಗೊತ್ತ... ಅಯೋಧ್ಯಾ ಪ್ರಶ್ನೆಯಲ್ಲಂತೂ ಹಣದ ಪ್ರ...ಯಲ್ಲ ಒಂದು ರಾಜಕೀಯ ಆಟದ ಭವಿಷ್ಯ... ಪ್ರಶ್ನೆಯೇ ಇರುವಾಗ ವಿ.ಹೆಚ್.ಪಿ. ಇತಿಹಾ...ಕಾರರ ಕೋರಿಕೆಯಂತೆ 'ವಿಶ್ವಾಸ' ದಿಂದ ಸು... ಮಾಲಯ್ಯ ಕಲಾ ಇತಿಹಾಸಕಾರರಿಂದ, ಪ...ಕರ್ತರಾಗಿ, ನಂತರ ಕರಸೇವಕರಾಗಿ ಬದಲಾ... ಕಥೆಯನ್ನು, ಈ ಅವಶೇಷಗಳು ಮೊದ... ಗೋಡೆಯ ಒಳಗಿಂದ, ನಂತರ ಮಸೀದಿ... ತಳಪಾಯದ ಕೆಳಗಿಂದ ಬಂದಿತೆಂಬ ಕಥೆಯ... ನಂಬಲು ಸಾಧ್ಯವೇ? ಆದ್ದರಿಂದಲೇ ಪ್ರಸಿದ್ಧ ಇ...ಹಾಸಕಾರರು ಈ 'ಅವಶೇಷ'ಗಳ ಬಗ್ಗೆ ಸಿಬ... ತನಿಖೆ ನಡೆಸಬೇಕೆಂದು ಒತ್ತಾಯಿಸಿರುವುದ...

ಆರು ತಿಂಗಳ ಹಿಂದೆ ಜುಲೈ ತಿಂಗಳ 'ಕ...ಸೇವೆ'ಯ ನಂತರ ಸಿಕ್ಕಿತೆನ್ನಲಾದ 'ಪುರಾವೆ'ಗ... ಈಗಿನ 'ಪುರಾವೆ'ಗಳಿಗೂ ಏನೂ ಸಂಬಂಧವಿ... ಅಲ್ಲದೆ ಇದೇ ವಿ.ಹೆಚ್.ಪಿ. ಇತಿಹಾಸ...ರರು ಆ 'ಪುರಾವೆ'ಗಳನ್ನು ನ್ಯಾಯಾಲಯದ... ಪುರಾವೆಗಳಾಗಿ ಮಂಡಿಸಲು ಹಿಂಜರಿದಿದ್ದ... ಇಂತಹವರ ಕೋರಿಕೆಯನ್ನು ಭಾರತದ ವಿ... ಚನಾಶೀಲ ಜನ ಮನ್ನಿಸಬೇಕೇ? ಅಥವಾ 'ಪುರಾವೆ'ಗಳು ಕಾವಿಶರಟುಗಳ ಇನ್ನೊಂ... ಠಕ್ಕುತನ ಎಂದು ತಿರಸ್ಕರಿಸಬೇಕೇ?

ಜರ್ಮನ್ ಕಮ್ಯುನಿಸ್ಟ್ ಹುತಾತ್ಮರ ನೆನಪು

ಲೋಕ ಸಂಚಾರ

ಶರಚ್ಚಂದ್ರ

ಪಿ.ಎನ್.ಎನ್.

ಜನವರಿ 10 ಬರ್ಲಿನ್‌ನಲ್ಲೊಂದು ವಿಶಿಷ್ಟ ರ್‍ಯಾಲಿ, 10 ಸಾವಿರ ಜನರದ್ದು. 1919 ರಲ್ಲಿ ಹುತಾತ್ಮರಾದ ಕಮ್ಯುನಿಸ್ಟರ ನೆನಪಿಗಾಗಿ ನಡೆಸಲಾದ ರ್‍ಯಾಲಿ. ಈ ವರ್ಷದ ರ್‍ಯಾಲಿ ಏಕೀಕೃತ ಜರ್ಮನಿಯಲ್ಲಿ ಜನಾಂಗಭೇದ ಮತ್ತು ಅಸಹಿಷ್ಣುತೆಯ ವಿರುದ್ಧ ಹೋರಾಡುವುದಕ್ಕೆ ಸಮರ್ಪಿತವಾಗಿತ್ತು. ನವ-ನಾಜಿ ಯುವಕರು ವಲಸೆ ಬಂದ ವಿದೇಶಿಯರ ಮೇಲೆ ನಿರಂತರ ದಾಳಿ ಎಸಗುತ್ತಿರುವ ಹಿನ್ನೆಲೆಯಲ್ಲಿ ನಿಜವಾದ ನಿಶಿಷ್ಟ ರ್‍ಯಾಲಿ-ಇದಾಗಿತ್ತು.

1919 ರಲ್ಲಿ ಸಾಮೂಹಿಕ ಕೊಲೆಯಿಂದ ಜಮನಿಸಲಾದ ಜರ್ಮನ್ ಜರ್ಮನ್ ಕಮ್ಯುನಿಸ್ಟರ ನೆನಪಿನಲ್ಲಿ ನಡೆದ ರ್‍ಯಾಲಿ ನಿಜವಾಗಿಯೂ ವಿಶಿಷ್ಟವಾಗಿತ್ತು. ಏಕೆಂದರೆ 1919 ರಲ್ಲಿ ಕಮ್ಯುನಿಸ್ಟ್ ಸಾಮೂಹಿಕ ಕೊಲೆಯಿಂದ ನಿರ್ನಾಮ ಮಾಡಿದ್ದು ಆಮೇಲೆ ಹಿಟ್ಲರ್ ನಾಯಕತ್ವದಲ್ಲಿ ನಾಜಿಗಳು ಉದಯಿಸಲು ನೇರ ಕಾರಣವಾಯಿತು. ಮೊದಲ ಮಹಾಯುದ್ಧಾನಂತರ ವೀಮರ್ ರಿಪಬ್ಲಿಕ್‌ನ (ಯುದ್ಧಾನಂತರದ ಜರ್ಮನ್ ಪ್ರಜಾಪ್ರಭುತ್ವ ಸಂವಿಧಾನ ರಚಿಸಿದ ಜರ್ಮನ್ ಪಟ್ಟಣದ ಮೇಲೆ ಹೆಸರಿಸಲ್ಪಟ್ಟದ್ದು) ಮೊದಲ ದಿನಗಳಲ್ಲಿ ಈ ಕೊಲೆ ನಡೆದದ್ದು. ಅಂದೇಕಾಲಿಡುತ್ತಿದ್ದ ಜರ್ಮನ್ ಪ್ರಜಾಪ್ರಭುತ್ವದ ಅಧ್ಯಕ್ಷ (ಛಾನ್ಸಲರ್) ಎಬರ್ಟ್ ಎಂಬುವ ಸೋಶಿಯಲ್ ಡೆಮಾಕ್ರಾಟ್, ನೆರೆಯ ಬೊಲ್ಶೆವಿಕ್ ಕ್ರಾಂತಿಯಿಂದ ಸ್ಫೂರ್ತಿಗೊಂಡ ಅಸಲಿ ಕಾರ್ಮಿಕರು ಕ್ರಾಂತಿಯನ್ನು ವಿಫಲಗೊಳಿಸಲು ಪಣತೊಟ್ಟಿದ್ದ.

ರಶ್ಯನ್ ಕ್ರಾಂತಿಯ ಒಂದು ವರ್ಷದ ನಂತರ, ಜರ್ಮನಿಯಲ್ಲಿ ಅಂತಹುದೇ ಬೆಳವಣಿಗೆಗಳು ಕಂಡಿದ್ದವು. ನವಂಬರ್ 1918 ರಲ್ಲಿ ರಶ್ಯದ 'ಸೋವಿಯೆತ್' ಮಾದರಿಯಲ್ಲಿ ರಚಿಸಿದ ಕಾರ್ಮಿಕರ ಮತ್ತು ಸೈನಿಕರ ಕೌನ್ಸಿಲ್‌ಗಳು ತಂತಾನೇ ಹುಟ್ಟಿಕೊಂಡಿದ್ದವು. ಈ ಚಳುವಳಿ ಜರ್ಮನ್ ಪಟ್ಟಣ ಕೀಲ್‌ನಲ್ಲಿ ನೌಕಾಸೈನಿಕರ ದಂಗೆಯಿಂದ ಆರಂಭವಾಗಿ ಹ್ಯಾಂಬರ್ಗ್, ಬರ್ಲಿನ್ ಮತ್ತು ಇತರ ಜರ್ಮನ್ ಪಟ್ಟಣಗಳಿಗೆ ಹಬ್ಬಿತ್ತು.

ಬರ್ಲಿನ್ ಸೋಶಿಯಲ್ ಡೆಮಾಕ್ರಾಟ್ ಮತ್ತು ಸ್ಪಾರ್ಟಸಿಸ್ಟರ (ಕಾರ್ಲ್ ಲೈಬ್‌ನಿಕ್ಟ್ ಮತ್ತು ರೋಸಾ ಲಕ್ಸೆಂಬರ್ಗ್ ನಾಯಕತ್ವದ ಕಮ್ಯುನಿಸ್ಟ್ ಗುಂಪು) ನಡುವೆ ಮಹಾನ್ ಹೋರಾಟದ ಕಣವಾಗಿತ್ತು. ಬಲಪಂಥೀಯ ಸೋಶಿಯಲ್ ಡೆಮಾಕ್ರಾಟರ ಹೊಸ ರಿಪಬ್ಲಿಕ್ ಕಟ್ಟುವ ಪ್ರೊಳ್ಳು ಕನಸಲ್ಲಿ ಕಮ್ಯುನಿಸ್ಟರಿಗೆ ನಂಬಿಕೆ ಇರಲಿಲ್ಲ. ಡಿಸೆಂಬರ್ 1918 ಮತ್ತು ಜನವರಿ 1919 ರ ನಡುವೆ ಬರ್ಲಿನ್‌ನಲ್ಲಿ ಸ್ಪಾರ್ಟಸಿಸ್ಟರ್ ಯಶಸ್ವಿಯಾಗಿದ್ದರು ಬರ್ಲಿನ್‌ನಲ್ಲಿ ಪೂರ್ಣ ಪ್ರಮಾಣದ ದಂಗೆ ಉಂಟಾಗಿತ್ತು. ಸಾರ್ವಜನಿಕ ಕಟ್ಟಡಗಳನ್ನು ಕಾರ್ಮಿಕರು ವಶಪಡಿಸಿಕೊಂಡಿದ್ದರು. ಇಡೀ ದೇಶದಲ್ಲಿ ಸಾರ್ವಜನಿಕ ಮುಷ್ಕರ ಹಬ್ಬಿತು. ಆದರೆ ದಂಗೆಯ ನಾಯಕರುಗಳಾದ ಕಾರ್ಲ್ ಲೈಬ್‌ನಿಕ್ಟ್ ಮತ್ತು ರೋಸಾ ಲಕ್ಸೆಂಬರ್ಗ್ ಭೂಗತರಾಗಿದ್ದವರು ಹೊರಗೆ ಬಂದ ಕೂಡಲೇ ಅವರ ಕೊಲೆಯಾಯಿತು.

ಆದರೂ ಕಾರ್ಮಿಕರ ದಂಗೆ ಮುಂದುವರೆಯಿತು. ಎಬರ್ಟ್‌ನ ಸರಕಾರ ನಡುಗಹತ್ತಿತ್ತು. ಸೋಶಿಯಲ್ ಡೆಮಾಕ್ರಾಟರ್ ಸೈನ್ಯದ ಮೊರೆ ಹೋಕರು. ಸೈನ್ಯದ ಬಲದಿಂದ ಜರ್ಮನ್ ಕಮ್ಯುನಿಸ್ಟರನ್ನು ಕ್ರೂರವಾಗಿ ಹತ್ತಿಕ್ಕಲಾಯಿತು. ಕಮ್ಯುನಿಸ್ಟರು ಮತ್ತು ಸೈನ್ಯದ ನಡುವೆ ನಿತ್ಯ ಬೀದಿ ಕಾಳಗಗಳಾಗುತ್ತಿದ್ದವು. ಸರ್ಕಾರ ಮತ್ತು ಸೈನ್ಯದ ಜತೆ ಹೋರಾಡಿದವರು ಅಷ್ಟೇ 'ಕೋರ್ ಯುನಿಟ್' ಎಂದು ಹೆಸರಿಟ್ಟುಕೊಂಡ ಕಮ್ಯುನಿಸ್ಟ್ ವಿರೋಧಿ ತಲೆತಿರುಗುತ್ತ ಗುಂಪು. ಕೆಲವು ವರ್ಷಗಳ ನಂತರ ಜರ್ಮನ್ ತುಂಬಾ ಹಬ್ಬಿದ ನಾಜಿಗಳ ಪೂರ್ವಜರು ಇವರು.

ನವ-ಫ್ಯಾಸಿಂ ಜರ್ಮನಿಯಲ್ಲಿ ಮಾತ್ರವಲ್ಲಿ, ಭಾರತ ಸೇರಿದಂತೆ ಇತರ ಹಲವಾರು ದೇಶಗಳಲ್ಲೂ ತಲೆ ಎತ್ತುತ್ತಿರುವ ಇಂದಿನ ಸನ್ನಿವೇಶದಲ್ಲಿ, ಗತಕಾಲದ ಚರಿತ್ರೆ ನೆನಪಿಸಿಕೊಳ್ಳುವುದು ಅಗತ್ಯವಾಗಿದೆ. ಎಲ್ಲಾ ಫ್ಯಾಸಿಸ್ಟರ ಒಂದು ಸಾಮಾನ್ಯ ಸಂಗತಿಯೆಂದರೆ 'ಅಚೆನವರ' ಮೇಲೆ ಭೀಕರ ದ್ವೇಷ. (ಜರ್ಮನಿಯಲ್ಲಿ ಈ ಅಚೆನವರು ಜ್ಯೂಗಳಾಗಿದ್ದರೆ, ಭಾರತದಲ್ಲಿ ಅವರ ಬಲಿಪಶುಗಳು ಮುಸ್ಲಿಮರು) ಮತ್ತು ಕಮ್ಯುನಿಸ್ಟರ ಬಗ್ಗೆ ಅತೀವ ಕೋಪ. ಆದ್ದರಿಂದ ಕಮ್ಯುನಿಸ್ಟ ಹುತಾತ್ಮರನ್ನು ನೆನಪಿಸಿಕೊಂಡ ಬರ್ಲಿನ್ ರ್‍ಯಾಲಿ ಜರ್ಮನಿ ಆಚೆಗೂ ಅರ್ಥಪೂರ್ಣವಾದ ರ್‍ಯಾಲಿ.

ಚೀನಾ ಆರ್ಥಿಕ ಬೆಳವಣಿಗೆ 1992 ರಲ್ಲಿ ವಿಕ್ರಮ

ಚೀನಾ ಆರ್ಥಿಕ ಬೆಳವಣಿಗೆಯಲ್ಲಿ 1992 ರಲ್ಲಿ ವಿಕ್ರಮ ಸಾಧಿಸಿದೆ. ಚೀನಾದ ಒಟ್ಟು ಉತ್ಪನ್ನ ಕಳೆದ ವರ್ಷಕ್ಕಿಂತ ಶೇಕಡಾ 12 ರಷ್ಟು ಹೆಚ್ಚಾಯಿತು. ಇದು ಆರ್ಥಿಕ ಕುಸಿತ ಅನುಭವಿಸುತ್ತಿರುವ ಇಂದಿನ ಹೆಚ್ಚಿನ ದೇಶಗಳಿಗೆ ಹೋಲಿಸಿದರೆ ಅಪೂರ್ವ ಸಾಧನೆ.

ಕಳೆದ ಮೂರು ವರ್ಷಗಳ ಚೀನಾದ ಸಾಧನೆಯಲ್ಲೇ ಇದು ಹೆಚ್ಚಿನದು ಕೂಡಿ. 1989 ಚೀನಾ 4 ಬೆಳವಣಿಗೆ ಸಾಧಿಸಿದರೆ, 1990 ಮತ್ತು 1991 ರಲ್ಲಿ ಕ್ರಮವಾಗಿ ಶೇಕಡಾ 4 ಮತ್ತು 7 ಸಾಧಿಸಿತ್ತು. ಕಳೆದ ಮೂರು ವರ್ಷಗಳಿಂದ ಚೇತರಿಸಿಕೊಳ್ಳುತ್ತಿದ್ದ ಚೀನಾದ ಶೇಕಡಾ 12 ಬೆಳವಣಿಗೆ ಹೆಚ್ಚಿನ ಸಾಧನೆಯೇ ಸರಿ.

ಕೈಗಾರಿಕಾ ಬೆಳವಣಿಗೆ ಶೇಕಡಾ 20 ರಷ್ಟು ಇರುತ್ತದೆ ಎನ್ನಲಾಗಿದೆ. ರಾಷ್ಟ್ರೀಯ ಮಾರಾಟದ ಸೂಚಕ ಕಳೆದ ವರ್ಷಕ್ಕಿಂತ ಶೇ.ಕಡಾ 5.3ರಷ್ಟು ಏರಿತ್ತು. ನಷ್ಟ ಅನುಭವಿಸಿದ ಕೈಗಾರಿಕೆಗಳು ಮತ್ತು ಒಟ್ಟು ನಷ್ಟದಲ್ಲಿ ತೀವ್ರ ಕಡಿತವಾಗಿದೆ. ತೀವ್ರ ಆರ್ಥಿಕ ಬೆಳವಣಿಗೆ ಜತೆ ಒಟ್ಟು ಸಾಮಾಜಿಕ ಬೇಡಿಕೆ ಮತ್ತು ಪೂರೈಕೆ ನಡುವೆ ಸಮತೋಲನ ಕಾಪಾಡಿಕೊಂಡಿರುವುದು ಇನ್ನೊಂದು ವಿಶೇಷವಾಗಿದೆ.

ಚೀನಾದ ವಿದೇಶಿ ವ್ಯಾಪಾರ ಸಹ, 140 ಶತಕೋಟಿ ಡಾಲರುಗಳಿಂದ, 160 ಶತಕೋಟಿ ಡಾಲರುಗಳಿಗೆ ಏರಿಕೆ. ಸಿಂಗಾಪೂರ ವಿದೇಶಿ ವ್ಯಾಪಾರದ ಪ್ರಮಾಣ ಈಗಾಗಲೇ ದಾಟಿರುವ ಚೀನಾ, ತೈವಾನ್‌ನ ವಿದೇಶಿ ವ್ಯಾಪಾರದ ಪ್ರಮಾಣವನ್ನು ಈ ವರ್ಷ ದಾಟಲಿದೆ ಈಗಿನ ಅಂದಾಜುಗಳ ಪ್ರಕಾರ ಮುಂದಿನ ವರ್ಷ ಕೊರಿಯಾದ ಪ್ರಮಾಣವನ್ನು ಮೀರಲಿದೆ. ಸಿಂಗಾಪುರ, ತೈವಾನ್, ಕೊರಿಯಾ ಅತ್ಯಂತ ಭಾರೀ ವಿದೇಶಿ ವ್ಯಾಪಾರ ಹೊಂದಿರುವ ದೇಶಗಳು ಎಂದು ಇಲ್ಲಿ ಗಮನಿಸಬೇಕು.

ಅಂಗೋಲಾದಲ್ಲಿ ಸಾವಿಂಬಿ ಒಪ್ಪಂದಕ್ಕೆ ಸಿದ್ಧ

ಅಂಗೋಲಾದ ಚುನಾವಣೆಗಳನ್ನು ಪ್ರಶ್ನಿಸಿ ಚುನಾವಣೆ ಸೋತ ಯೂನಿಟಾ ನಾಯಕ ಸಾವಿಂಬಿ ಈಗ ಒಪ್ಪಂದಕ್ಕೆ ಸಿದ್ಧವಂತೆ ಆಳುವ ಎಡಪಂಥೀಯ ಎಮ್.ಪಿ.ಎಲ್.ಎ. ಆವಿಂಬಿಯ ಗೆರಿಲ್ಲಾ ಹೋರಾಟವನ್ನು ಎದುರಿಸಿ ಅದನ್ನು ಪೂರ್ತಿ ಹಿಮೆಟ್ಟಿಸಿದ ಮೇಲೆ ಈ ಪರಿವರ್ತನೆ. ಸಾವಿಂಬಿಗೆ ಕುಮ್ಮಕ್ಕು ಕೊಡುತ್ತಿರುವ ದಕ್ಷಿಣ ಆಫ್ರಿಕಾ, ಅಮೇರಿಕಾಗಳು ಈಗ ಅವರ ಪ್ರಜಾಪ್ರಭುತ್ವದಲ್ಲಿ ಪಾಲುಗಳ್ಳಲು ಅವಕಾಶ ಕೊಡಬೇಕು ಎಂದು ಹೇಳುತ್ತಿವೆ. ಆಳುವ ಎಮ್.ಪಿ.ಎಲ್.ಎ. ಗೆ ಮಿಲಿಟರಿ ಸೋಲು ಆಗುತ್ತಿದ್ದರೆ ಅದರ ರಾಗವೇ ಬೇರೆ ಇರುತ್ತಿತ್ತೆನೋ ಪಾಶ್ಚಿಮಾತ್ಯ ದೇಶಗಳ ಇಬ್ಬಂದಿ ನೀತಿ ಪ್ರದರ್ಶಿಸಿದ ಕೊನೆಗಾಣುವ ಸಂಭವವಿದೆ.

ತ್ರಿಪುರಾ ಚುನಾವಣೆ :

ಈ ಪುಟ್ಟ ತುಣುಕಿನಲ್ಲಿ ಪ್ರಜಾಪ್ರಭುತ್ವದ ಕೊಲೆ ಇಡೀ ದೇಶದ ಪ್ರಜಾಪ್ರಭುತ್ವದ ಅಳಿವಿನ ಮುನ್ಸೂಚನೆ

(ಪಿ.ಡಿ. ಸಂಪಾದಕೀಯ)

ಲೋಕಸಭಾ ಉಪ ಚುನಾವಣೆಗಳನ್ನು ಏಕೆ ರದ್ದು ಮಾಡಿದರೋ, ಶೇಷನ್ ಮತ್ತು ನರಸಿಂಹರಾಯರಿಗೇ ಗೊತ್ತು. ಈಶಾನ್ಯ ರಾಜ್ಯಗಳಲ್ಲಿ ಚುನಾವಣೆಗಳ ದಿನಾಂಕಗಳನ್ನೂ ಈಗ ಘೋಷಿಸಲಾಗಿದೆ.

ಇಲ್ಲಿ, ನಾವು ಎಲ್ಲಕ್ಕಿಂತ ಹೆಚ್ಚಾಗಿ ತ್ರಿಪುರಾದ ಚುನಾವಣೆಗಳ ಬಗ್ಗೆ ಯೋಚಿಸುತ್ತಿದ್ದೇವೆ. ಇತರ ಪಕ್ಷಗಳಂತೆ ನಾವು ಎಂದೂ ಅಖಿಲ ಭಾರತ ಮಟ್ಟದಲ್ಲಿ ನಮ್ಮ ಚುನಾವಣಾ ಬಲದ ಬಗ್ಗೆ ಬೆನ್ನು ತಟ್ಟಿಕೊಂಡಿಲ್ಲ. ನಾವು ಯಾವ ಗುರಿ ಸಾಧನೆಗಾಗಿ ಬದುಕಿರುವೆವೋ, ಹೋರಾಡುತ್ತಿರುವೆವೋ, ಪ್ರಯತ್ನಿಸುತ್ತಿರುವೆವೋ ಆ ದಿಕ್ಕಿನಲ್ಲಿ ಜನಗಳನ್ನು ಒಂದೆಡೆಸಲು ನಾವು ಯಶಸ್ವಿಯಾಗದ ರಾಜ್ಯಗಳಲ್ಲಿ ಅಧಿಕಾರ ಗಿಟ್ಟಿಸುವ ಬಗ್ಗೆಯೂ ಇತರ ಪಕ್ಷಗಳಂತೆ ನಾವು ಸ್ಪರ್ಧೆಗಿಳಿಯುವುದಿಲ್ಲ.

ಆದರೆ ತ್ರಿಪುರಾದಲ್ಲಿ ನಮ್ಮದೊಂದು ಪರಂಪರೆಯಿದೆ. ಆ ಬಗ್ಗೆ ನಮಗೆ ಖಂಡಿತಾ ಹೆಮ್ಮೆಯಿದೆ. ಸ್ವಾತಂತ್ರ್ಯದ ಮೊದಲೂ ಕೂಡಾ ಇಲ್ಲಿಯ ಜನ ಪ್ರಜಾಪ್ರಭುತ್ವ ಹಾಗೂ ನ್ಯಾಯಪೂರ್ಣ ಸಮಾಜಕ್ಕಾಗಿ ಹೋರಾಡಿದ್ದು, ತಮ್ಮ ಪ್ರಾಣಾರ್ಪಣೆ ಮಾಡಿದ್ದು ಕಮ್ಯುನಿಸ್ಟರ ಪತಾಕೆಯಡಿ. ದಶರಥ್ ದೇಬ್ ಬರ್ಮನ್‌ರ ಸ್ಫೂರ್ತಿದಾಯಕ ನೇತೃತ್ವದಲ್ಲಿ ಗಣಮುಕ್ತಿ ಪರಿಷದ್ ಆಗಲೇ ದೊಡ್ಡ ಜಾನಪದ ಗಾಥೆಯೇ ಆಗಿಬಿಟ್ಟಿದೆ. ಸ್ವಾತಂತ್ರ್ಯದ ನಂತರ ಬ್ರಿಟಿಷ್ ಆಸರೆಯಲ್ಲಿದ್ದ ಮಂದಿಯೆಲ್ಲಾ ಕಾಂಗ್ರೆಸ್ಸನ್ನು ಸೇರಿದರು. ನಮ್ಮ ಲೂಟಿ, ಕೊಳ್ಳೆ ಹಾಗೂ ಅನಾಚಾರಗಳ 'ವಿಶೇಷ ಹಕ್ಕು'ಗಳನ್ನು ರಕ್ಷಿಸಿಕೊಳ್ಳಲು ಒದ್ದಾಡಿದ ಜನಗಳಿವರು.

ತ್ರಿಪುರಾದ ಕಥೆಯೇ ಬೇರೆ. ಇಲ್ಲಿ ಜನ ನ್ಯಾಯಪೂರ್ಣ ಸಮಾಜಕ್ಕಾಗಿ ಹೋರಾಟ ಮುಂದುವರೆಸಿದರು. ಈ ಪ್ರಗತಿಪರ ಆಂದೋಲನದ ಚಾಲಕ ಶಕ್ತಿ ಇಲ್ಲಿಯ ಬುಡಕಟ್ಟು ಜನರೇ. 1978ರ ಚುನಾವಣೆಗಳಲ್ಲಿ ಕಾಂಗ್ರೆಸ್ [ಈಗಿನ ಕಾಂಗ್ರೆಸ್(ಐ)] ತ್ರಿಪುರಾದ ರಾಜಕೀಯ ರಂಗದಿಂದಲೇ ಸುಮಾರಾಗಿ ಕಾಣೆಯಾಗುವಂತಾಯಿತು. 1988ರಲ್ಲೂ ಎಡರಂಗ ಕಾಂಗ್ರೆಸ್(ಐ)ಗೆ ಭಾರೀ ಸೋಲುಣಿಸಿತು. ಇದರಿಂದ ಕಾಂಗ್ರೆಸ್(ಐ) ಕಲಿತ ಪಾಠವೇನು ಗೊತ್ತೇ? ಒಂದು ಮುಕ್ತ-ನ್ಯಾಯಪೂರ್ಣ ಚುನಾವಣೆಯಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗವನ್ನು ಸೋಲಿಸಲು ಸಾಧ್ಯವಿಲ್ಲ - ಆದ್ದರಿಂದ ಹೊಸ ತಂತ್ರವೊಂದನ್ನು ರೂಪಿಸಬೇಕು!

ಇದಕ್ಕಿದ್ದಂತೆ ಲೂಟಿಕೋರರ ಸಂಘಟನೆಯೊಂದು ಕಾಣಿಸಿಕೊಂಡಿತು. ಅತ್ಯಂತ ಯೋಜಿತ ರೀತಿಯಲ್ಲಿ ಬಂಗಾಲೀ ಭಾಷಿಕ ಜನಗಳ ಸಾಮೂಹಿಕ ಹತ್ಯಾಕಾಂಡ ನಡೆಯಿತು. ಹೊಸ ಕಾನೂನುಗಳನ್ನು ರಚಿಸಿ ಸಂಸತ್ತು ಪಾಸು ಮಾಡಿತು. 1988ರ ಚುನಾವಣೆಯ ಸ್ವಲ್ಪವೇ ಮೊದಲು, ತ್ರಿಪುರಾವನ್ನು "ಗಲಭೆಗ್ರಸ್ತ ಪ್ರದೇಶ" ಎಂದು ಸಾರಲಾಯಿತು. ಸೇನೆ, ಕೇಂದ್ರೀಯ ಅರೆಸೈನಿಕ ಪಡೆಗಳ ಸಹಾಯ ಪಡೆಯಲಾಯಿತು. ಸಂತೋಷ್ ಮೋಹನ್ ದೇಬ್ ಚುನಾವಣಾ ಪ್ರಚಾರದ ಚುಕ್ಕಾಣಿ ಹಿಡಿದರು. ಚುನಾವಣೆಗಳು, ಮತಗಳ ಎಣಿಕೆ ಎರಡರಲ್ಲೂ ಮೋಸ- ಅತ್ಯಂತ ಯೋಜಿತ ಫ್ಯಾಸಿಸ್ಟ್ ಮಾದರಿಯ ಮೋಸ.

ಅಂದಿನಿಂದ ಸಿಪಿಐ(ಎಂ) ಕಾರ್ಯಕರ್ತರ, ಹಿತೈಷಿಗಳ ಕೊಲೆ, ಸುಲಿಗೆ, ಅತ್ಯಾಚಾರ, ಮಾನಭಂಗಗಳಿಲ್ಲದ ದಿನವೇ ಇಲ್ಲ. ಪಕ್ಷದ ಕಚೇರಿಗಳನ್ನು ಸುಟ್ಟುಹಾಕಲಾಯಿತು. ಅಥವಾ ಬಲ ಪ್ರಯೋಗಿಸಿ ಮುಚ್ಚಲಾಯಿತು. ಸಾರ್ವಜನಿಕ ಸಭೆಗಳ ಮೇಲೆಯೇ ಹಲ್ಲೆ ನಡೆದವು. ಮಾಜಿ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿಯವರ ಮೇಲೂ ದೈಹಿಕ ಹಲ್ಲೆ ನಡೆಯಿತು.

ತ್ರಿಪುರಾ ವಿಧಾನಸಭಾ ಚುನಾವಣೆ ಈ ಹಿನ್ನೆಲೆಯಲ್ಲಿ ನಡೆಯುತ್ತಿದೆ. 1988ರಲ್ಲಿ ನಡೆದುದಕ್ಕಿಂತ ಭಿನ್ನವಾದ ರೀತಿಯಲ್ಲಿ ಈ ಬಾರಿ ಚುನಾವಣೆ ನಡೆಯುತ್ತದೆಂದು ವಿವೇಚನೆಯಿರುವ ಯಾರೂ ನಂಬಲು ಸಾಧ್ಯವಿಲ್ಲ. ಆದರೆ ಈಗಿನ ಅಖಿಲ ಭಾರತ ಹಿನ್ನೆಲೆ 1988ರಲ್ಲಿ ಇದ್ದುದಕ್ಕಿಂತ ತೀರಾ ಭಿನ್ನವಾಗಿದೆ. ಬಿಜೆಪಿ ನೇತೃತ್ವದ 'ಸಂಘ ಪರಿವಾರ' ಕಾಂಗ್ರೆಸ್(ಐ)ನ ಪ್ರಾಬಲ್ಯಕ್ಕೆ ಯಶಸ್ವಿ ಸವಾಲು ಹಾಕಿದೆ. ಹಂತ ಹಂತವಾಗಿ ಈ ಅಧಿಕಾರದಾಹಿ ಕೋಮುವಾದಿಗಳ ಪಾಲಿಗೆ ಬಿದ್ದರೂ ಅವರಿಗೆ ತೃಪ್ತಿಯಿಲ್ಲ. ಅವರಿಗೆ ಸ್ವಲ್ಪ-ಸ್ವಲ್ಪವಲ್ಲ ಪೂರ್ಣವೇ ಬೇಕು. ದಿಲ್ಲಿಯ ಆಸನವೇ ಬೇಕು. ಪ್ರಜಾಪ್ರಭುತ್ವ ವ್ಯವಸ್ಥೆ ಆಗಲೇ ಘಾಸಿಗೊಂಡಿದೆ. ಕೋಮುಗಳ ನಡುವಿನ ಪರಸ್ಪರ ವಿಶ್ವಾಸಕ್ಕೆ ತೀವ್ರ ಧಕ್ಕೆ ಬಂದಿದೆ. ದಿಲ್ಲಿಯ ಈಗಿನ ಆಳರಸರಿಗೆ ಪ್ರಜಾಪ್ರಭುತ್ವದಲ್ಲಿ, ಅದರ ರಕ್ಷಣೆಯಲ್ಲಿ ನಂಬಿಕೆಯಿದೆಯೇ? ಅವರೇನೇ ಹೇಳಿಕೊಂಡರೂ ಜನ ಅವರ ಒಣ ಮಾತುಗಳನ್ನು ಆಗಲೇ ಸಂಶಯದಿಂದ ನೋಡಲಾರಂಭಿಸಿದ್ದಾರೆ.

ಇಂತಹದೊಂದು ಸನ್ನಿವೇಶದಲ್ಲಿ ನರಸಿಂಹರಾವ್ ಸಂತೋಷ್ ಮೋಹನ್ ದೇಬ್ ಮತ್ತು ಅವರ ರಾಜಕೀಯ ಸಂತಾನವಾದ ಈಗಿನ ತ್ರಿಪುರಾ ಮುಖ್ಯಮಂತ್ರಿ 1988 ರ ಚುನಾವಣೆಯಲ್ಲಿ ನಡೆಸಿದ್ದರ ಪುನರಾವರ್ತನೆಗೆ ಅವಕಾಶ ನೀಡುತ್ತಾರೆಯೇ? ಅವಕಾಶ ನೀಡುವುದಾದರೆ ಸತತವಾಗಿ ಏರುತ್ತಾ ಬಂದ ಹೊರ ಒಮ್ಮೆಲೆ ಗುಣಾತ್ಮಕ ಬದಲಾವಣೆಗೆ ದಾರಿ ಮಾಡಿಕೊಡುತ್ತದೆ ಎಂಬುದನ್ನೂ ಕಾಂಗ್ರೆಸ್(ಐ) ನೆನಪಿನಲ್ಲಿರಲಿ.

ನಮಗೆ ಬೇಕಾದ್ದು ಮುಕ್ತ-ನ್ಯಾಯವಾದ ಚುನಾವಣೆ. ಅಖಿಲ ಭಾರತ ಪತ್ರಿಕಾ ರಂಗ, ವಿಶ್ವ ಪತ್ರಿಕಾರಂಗ ಕೂಡಾ. ಮುಂಬರುವ ತ್ರಿಪುರಾ ಚುನಾವಣೆಗಳಿಗೆ ಸಾಕ್ಷಿಯಾಗಲಿ. ಈ ಮುಕ್ತ ಚುನಾವಣೆಯ ತೀರ್ಪು ಏನೇ ಆಗಲಿ ಸಿಪಿಐ(ಎಂ) ಅದಕ್ಕೆ ಬದ್ಧವಾಗುತ್ತದೆ. ಏಕೆಂದರೆ ಅದು ಜನತೆಯ ತೀರ್ಪೆಂದು ಪರಿಗಣಿಸುತ್ತೇವೆ. ಮುಕ್ತ-ನ್ಯಾಯ ಚುನಾವಣೆಯ ತೀರ್ಪಾಗದಿದ್ದರೆ ನರಸಿಂಹರಾವ್ ಸರಕಾರವನ್ನು, ಕಾಂಗ್ರೆಸ್(ಐ) ಯನ್ನು ದೇವರೇ ಕಾಪಾಡಬೇಕು! ದೇಶದ ಒಂದು ಪುಟ್ಟ ತುಣುಕಿನಲ್ಲೂ ಪ್ರಜಾಪ್ರಭುತ್ವದ ಕೊಲೆಯಾದರೆ ಅದು ಇಡೀ ದೇಶದಲ್ಲಿ ಪ್ರಜಾಪ್ರಭುತ್ವದ ಅಳಿವಿನ ಮುನ್ಸೂಚನೆಯಾಗಬಹುದು ಎಂಬುದನ್ನು ಅವರು ನೆನಪಿಟ್ಟುಕೊಳ್ಳಲಿ. 1972ರ ಪಶ್ಚಿಮ ಬಂಗಾಳ ಚುನಾವಣೆಗಳ ನಂತರ ನಾವು ಈ ಎಚ್ಚರಿಕೆಯ ಮಾತು ಹೇಳಿದ್ದೆವು. ಯಾರೂ ಅದಕ್ಕೆ ಗಮನ ನೀಡಲಿಲ್ಲ. ಕಮ್ಯುನಿಸ್ಟರ ಪ್ರಜಾಪ್ರಭುತ್ವ ಹಕ್ಕುಗಳ ಕೊಲೆ ಒಂದು ಪವಿತ್ರ ಕೆಲಸ ಎಂದು ಘೋಷಿಸಿದಾಗ ಪ್ರತಿಯೊಬ್ಬರೂ ಅದಕ್ಕೆ ಬೆಲೆ ತೆರಬೇಕಾಯಿತು. ಭಾರೀ ಬೆಲೆ ತೆರಬೇಕಾಯಿತು.

ಚರಿತ್ರೆಯ ಪುನರಾವರ್ತನೆಯಾಗುವುದು ಬೇಡ. ನರಸಿಂಹರಾವ್ ಎದ್ದು ಕುಳಿತು ಏನಾದರೂ ಮಾಡಲಿ. ಇದು ಈ ದೇಶದಲ್ಲಿ ಉಸಿರು ಬಿಡುತ್ತಿರುವ ಪ್ರಜಾಪ್ರಭುತ್ವವನ್ನು ಉಳಿಸುವ ಪ್ರಯತ್ನ ಎಂದು ಸಾಬೀತಾಗಲಿ.

ಮತದಾರರನ್ನು ಹೆದರಿಸುವ ಪ್ರವೃತ್ತಿ ಆಗಲೇ ಆರಂಭ?

ತ್ರಿಪುರಾದಲ್ಲಿ ಸಿಪಿಐ(ಎಂ) ಮತ್ತು ಎಡರಂಗದ ಚುನಾವಣಾ ಪ್ರಚಾರ ಆರಂಭವಾಗುತ್ತಿದ್ದಂತೆಯೇ ಹಲ್ಲೆಗಳೂ ಆರಂಭವಾಗಿವೆ.

ಜನವರಿ 3ರಂದು ಸಬ್‌ರೂಂ ಜಿಲ್ಲೆಯ ಮನುಬರ್ಘೂರ್‌ನಲ್ಲಿ ನಡೆದ ಮೊದಲ ಚುನಾವಣಾ ಸಭೆಯ ಮೇಲೆ ಧಾಳಿ ನಡೆಯಿತು. ಪಕ್ಷದ ಸ್ಥಳೀಯ ಮುಖಂಡ ಸುಭಾಷಿರ್ ದಾಂಡಾರಂತವರ ಮೇಲೂ ಹಲ್ಲೆ ನಡೆಯಿತು. ಕಲ್ಲು ತೂರಾಟದ ನಡುವೆಯೂ ಸಭೆಯಂತೂ ನಡೆಯಿತು.

ಬುಡಕಟ್ಟು ಪ್ರದೇಶಗಳಲ್ಲಿ ಸಿಪಿಐ(ಎಂ)ನ ಬುಡಕಟ್ಟು ಬೆಂಬಲಿಗರಲ್ಲಿ ಸೇನೆಯ ಅಸ್ಸಾಂ ರೈಫಲ್ಸ್ ಪಡೆಗಳ ಮೂಲಕ ಭಯ ಹುಟ್ಟಿಸಲಾಗುತ್ತಿದೆ. ಜನವರಿ 16ರಂದು ಮೆಂಡಿಹೌರ್ ಗ್ರಾಮಕ್ಕೆ ಆಕ್ರಮಣ ಮಾಡಿ 92 ಗ್ರಾಮಸ್ಥರ ಮೇಲೆ ಹಲ್ಲೆ ಮಾಡಲಾಯಿತು. ಜತೆಗೆ ಟಿಯುಎಜೆಎಸ್‌ನ ಜತೆಗಿರುವ ಒಂದು ಉಗ್ರಗಾಮಿ ಗುಂಪು 'ತ್ರಿಪುರಾ ರಾಜ್ಯ ಸ್ವಯಂ ಸೇವಕರು' ಎಂಬ ಗುಂಪೂ ಇತ್ತು.

ಬುಡಕಟ್ಟು ಪ್ರದೇಶಗಳನ್ನು ಗಲಭೆಗ್ರಸ್ತ ಪ್ರದೇಶವೆಂದು ಘೋಷಿಸಿ ಹೆಚ್ಚೆಚ್ಚು ಅರೆಸೈನಿಕ ಪಡೆಗಳನ್ನು ತಂದು ಮತದಾರರನ್ನು ಹೆದರಿಸುವ ಒಂದು ಯೋಜನೆಯ ಅಂಗಗಳು ಇವು ಎಂಬಂತೆ ಕಾಣುತ್ತಿದೆ. ರಾಜ್ಯ ಸರಕಾರ ಆರಂಭದಿಂದಲೇ ಚುನಾವಣಾ ವಾತಾವರಣವನ್ನು ಕೆಡಿಸಿ ವಿರೋಧ ಪಕ್ಷಗಳನ್ನು ಹೆದರಿಸಲಾರಂಭಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ಈ ಆತಂಕಕಾರಿ ಪ್ರವೃತ್ತಿಯನ್ನು ಕಂಡು ಚುನಾವಣಾ ಆಯೋಗ ಮತ್ತು ಕೇಂದ್ರ ಸರಕಾರ ಮಧ್ಯಪ್ರವೇಶಿಸಿ ಅಸ್ಸಾಂ ರೈಫಲ್ಸ್ ಪಡೆಗಳ ದುರುಪಯೋಗವನ್ನು ತಕ್ಷಣ ತಡೆಯಬೇಕು, ಮುಕ್ತ- ನ್ಯಾಯಪೂರ್ಣ ಚುನಾವಣಾ ಪ್ರಚಾರಕ್ಕೆ ಅವಕಾಶವಾಗುವಂತೆ ಮುಖ್ಯ ಚುನಾವಣಾ ಕಮಿಶನರ್ ಸೂಕ್ತ ಕ್ರಮಗಳನ್ನು ತಕ್ಷಣ ಕೈಗೊಳ್ಳಬೇಕು ಎಂದು ಪೊಲಿಟ್‌ಬ್ಯೂರೋ ಒತ್ತಾಯಿಸಿದೆ.

LENM/BGS-40 MAC(2) LLP DECR 319-78/79

ಅಯೋಧ್ಯಾ ಕಾಂಡ

"ಬಿಜೆಪಿ ಆಗಲಿ ಮಾಬ್ಲಿಯಲ್ಲಿ ರಾಷ್ಟ್ರಧ್ವಜ ಹಾರಿಸಿಯೇ ತೀರು-ತ್ತೇವೆ" - ಕಳೆದ ವರ್ಷ ಸರಕಾರಿ ಛತ್ರಛಾಯೆಯಲ್ಲಿ ಕಾಶ್ಮೀರ ಕಣಿವೆಯಲ್ಲಿ ಕೆಸಿಕರ ಬಿಗಿಪಹರೆಯಲ್ಲಿ ಬಿ.ಜೆ.ಪಿ. ಮುಖಂಡರು ಬಿಟ್ಟು ಬೇರೆ ಒಬ್ಬ ನಾಗರಿಕನೂ ಇಲ್ಲದ ಕಡೆ ರಾಷ್ಟ್ರಧ್ವಜ ಹಾರಿಸಿದ 'ಕೀರ್ತಿ'ಶಾಲಿ ಮುರಳಿ ಮನೋಹರ ಜೋಷಿಯವರು ಬೆಂಗಳೂರಿನಲ್ಲಿ ಗುಡು-ಗಿದರಂತೆ. ಅವರಿಗೆ ಅಲ್ಲಿ ಕರ್ನಾಟಕದಲ್ಲಿ ಬಿ.ಜೆ.ಪಿ. ಬಯಸಿದಲ್ಲಿ ರಾಷ್ಟ್ರಧ್ವಜ ಹಾರಿಸಲು ಬಿಡದ ಸಂವಿಧಾನದ ಕ್ರಿಯೆ ಮುರಿದುಬಿದ್ದಿದೆ ಎನಿಸಿದ್ದರಂತೆ- ಸಂವಿಧಾನವನ್ನು ಬಹಿರಂಗವಾಗಿ ಉಲ್ಲಂಘಿಸಿದ ಪಕ್ಷದ ಅಧ್ಯಕ್ಷರು.

"ಹೇಳಿ ಕೇಳಿ ಭಾರತೀಯ ಜನತಾ ಪಕ್ಷದವರು ಉರುಳಿಸು-ವುದರಲ್ಲಿ ನಿಷ್ಣಾತರು. ಹೀಗಾಗಿ ಇಂತಹ ನಿಷ್ಣಾತರಿಗೆ ಸಾರ್ವಜನಿಕ ಶಾಂತಿ ಹಾಗೂ ನೆಮ್ಮದಿಯ ರಕ್ಷಣೆ ವ್ಯಷ್ಟಿಯಿಂದ ಬಿ.ಜೆ.ಪಿ. ಧುರೀಣರ ಯತ್ನಗಳಿಗೆ ಅವಕಾಶ ಕೊಡಲು ಆಗುವುದಿಲ್ಲ" ಎಂದು ಪ್ರತಿಯಾಗಿ ಗುಡುಗಿದವರು ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರು. ಅದೃಷ್ಟವಶಾತ್ ಮೊಯಿಲಿ ಈ ವಿಷಯದಲ್ಲಂತೂ ತಮ್ಮ ಪಕ್ಷದ ಹಾಗೂ ಪಕ್ಷದ ಅಧ್ಯಕ್ಷರ "ಬಣ್ಣಗೆಟ್ಟ ಕಾವಿತನ"ವನ್ನು ಅನುಸರಿಸಲಿಲ್ಲ. ಜನವರಿ 26 ರಂದು ರಾಜ್ಯದಲ್ಲಿ ದೇಶದ ಇತರೆಡೆ ಇತ್ತೀಚಿನ ಬೆಳವಣಿಗೆ-ಗಳಿಂದ ನೊಂದ ಮನಗಳು ಕೈಕೈಹಿಡಿದು ಹೃದಯಗಳನ್ನು ಬೆಸೆಯಲು ಪ್ರಯತ್ನಿಸುತ್ತಿದ್ದಾಗ ಬಿ.ಜೆ.ಪಿ. ಮುಖಂಡರು, ಮಾತ್ರವೇ ಎಲ್ಲರಿಗೂ ರಕ್ಷಣೆ ನೀಡುತ್ತೇವೆಂದು ಈಗಲೂ ಭಂಡತನದಿಂದ ಹೇಳಿಕೊಳ್ಳುವ ಮಂದಿ ಈದ್‌ಗಾ ಮೈದಾನದಲ್ಲಿ ಗಲಭೆ ಎಬ್ಬಿಸಲು ಪ್ರಯತ್ನಿಸುತ್ತಿದ್ದುದು ಸಹಜವೇ ಆಗಿತ್ತಲ್ಲವೇ?

* * * * * * * *

ಕರಸೇವಕರು ಮುದುಕಲು ಕಟ್ಟಡವೊಂದನ್ನು ಮುರಿದದ್ದು ತಮ್ಮ "ರಾಷ್ಟ್ರ"ಕ್ಕಂತೂ ನಾಚಿಕೆ ತಂದ ವಿಷಯವಲ್ಲ ಎಂದು ಬೆಂಗಳೂ-ರಿನಲ್ಲೂ ಜೋಷಿಯವರು ಆನಂದದಿಂದ ಹೇಳಿದರಂತೆ. ರಾಷ್ಟ್ರಕ್ಕೆ ನಿಜವಾಗಿ ನಾಚಿಕೆ ತಂದ ಘಟನೆಗಳನ್ನು ಅವರು ಪಟ್ಟಿಮಾಡಿದಂತೆ. ಅವರಲ್ಲಿ ಗಾಂಧೀಜಿಯನ್ನು ಗೋಡ್ಸೆ ಎಂಬಾತ ಗುಂಡಿಟ್ಟು ಕೊಂದ ಜನವರಿ 30,1948 ಇರಲಿಲ್ಲ ಎಂದು ಗಮನಿಸಿದಾಗ ಇದೂ ಸಹಜವೇ ಅನಿಸುತ್ತಿದೆಯೇ?

* * * * * * * *

ಬಂಧನದಿಂದ ಹೊರಬಂದ ಮೇಲೆ ಈ ಬಿಜೆಪಿ ನಾಯಕಮಣಿಗಳು ವೇಶಾವ್ಯಂತ ತಮ್ಮ ಅದೇ ಸವಕಲು ವಾದಗಳನ್ನು ಹೂಡುತ್ತಾ ಸಾಗಿದ್ದಾರೆ. ಅಡ್ವಾಣಿಯವರು ಒಂದೆಡೆ ಡಿಸೆಂಬರ್ 6 ರ ಘಟನೆ "ದುರದೃಷ್ಟಕರ" ಎಂದರೆ ಇನ್ನೊಂದೆಡೆ 'ಅದು ದೇವರ ಇಚ್ಛೆ' ಎಂದರಂತೆ. ದೇವರ ಇಚ್ಛೆಯಾದರೆ ಅದು ದುರದೃಷ್ಟಕರ ಹೇಗೆ ಎಂದು ಕೆಲವರು ಪ್ರಶ್ನಿಸಿದರಂತೆ. ಇವರು ಖೋಟಾ-ಜಾತ್ಯತೀತರು ಎಂದು ಹೇಳುತ್ತಾ ಅಡ್ವಾಣಿಯವರು ಮತ್ತವರ ಇತರ ಸಹೋದ್ಯೋಗಿಗಳು ಸುಳ್ಳಿನ ಯಾತ್ರೆ ಸಾಗಿಯೇ ಸಾಗಿದೆ.

* * * * * * * *

ಬಿ.ಜೆ.ಪಿ. ಅಧ್ಯಕ್ಷರು ಇವರಲ್ಲಿ ಹೆಚ್ಚು ಪ್ರಾಮಾಣಿಕರೆನ್ನಬಹುದೇನೋ. ಏಕೆಂದರೆ ಬಾಬ್ರಿಮಸೀದಿ ಕೆಡವಿದ ಬಗ್ಗೆ ಅವರಿಗ ಬೇಸರವಿಲ್ಲವಂತೆ. ಏಕೆಂದರೆ ಅದನ್ನು ಬೀಳಿಸಬೇಕೆಂದು ತಮ್ಮ ಪಕ್ಷದ ಇಚ್ಛೆಯಾಗಿತ್ತು, ಆದರೆ ಅದನ್ನು, ಆ ರೀತಿ ಮಾಡುವ ಇಚ್ಛೆ ಇರಲಿಲ್ಲ ಎಂದಿದ್ದಾರೆ ಜೋಷಿಯವರು.

* * * * * * * *

ಆದರೆ ಇದು ಕೂಡಾ ಸುಳ್ಳು ಎಂಬುದು ಸಿಬಿಐನ (ಕೇಂದ್ರ ತನಿಖಾ ಕಚೇರಿ) ತನಿಖೆ ಪ್ರಾಥಮಿಕ ವರದಿಗಳಿಂದ ತಿಳಿದುಬಂದಿದೆ. ಡಿಸೆಂಬರ್ 6 ರ ಘಟನೆ ಒಂದು ಪೂರ್ವ ನಿಯೋಜಿತ ಪಿತೂರಿ ಎಂಬುವಕ್ಕೆ ಎಲ್ಲಾ ಪುರಾವೆಗಳು ಸಿಬಿಐಗೆ ದೊರೆತಿವೆ. ಕೆಲತ್ರ ಗುಂಪುಗಳು ಡಿಸೆಂಬರ್ 1991 ರಿಂದಲೇ ಈ ಬಗ್ಗೆ ತರಬೇತಿ ನಡೆಸುತ್ತಿದ್ದವು ಎಂದು ತಿಳಿದುಬಂದಿದೆ. ಈಗ ಸ್ಪಷ್ಟವಾಗಬೇಕಾದ ಸಂಗತಿ ಡಿಸೆಂಬರ್ 6 ರ ಕಾರ್ಯಾಚರಣೆಯನ್ನು 1991 ರಲ್ಲೇ ಯೋಚಿಸಲಾಗಿತ್ತೇ, ಅಥವಾ ಕೆಡಹುವ ಸ್ವಲ್ಪ ಯೋಚಿಸಲಾಗಿತ್ತೆ ಎಂಬುದು ಸುಮಾರು ಎರಡು ತಿಂಗಳ ಹಿಂದೆ ಈ ತನಿಖೆ ಕೈಗೆತ್ತಿಕೊಂಡ ಸಿಬಿಐ ಈಗಾಗಲೇ 300 ಕ್ಕೂ ಹೆಚ್ಚು ಸಾಕ್ಷಿಗಳ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿದೆ.

* * * * * * * *

ಮುಸ್ಲಿಮರಿಗೆ ರಕ್ಷಣೆ ನೀಡಬಲ್ಲ ಏಕೈಕ ಪಕ್ಷ ಬಿ.ಜೆ.ಪಿ. ಎಂದು ಅಡ್ವಾಣಿ ದಿಲ್ಲಿಯಲ್ಲಿ ಹೇಳಿದರಂತೆ. ಹಿಂದುಗಳು ದೇಶವಿಭಜನೆಯನ್ನು ಒಪ್ಪಿದರು, ಮುಸ್ಲಿಮರೀಗ ಅಯೋಧ್ಯೆ ವಿಷಯದಲ್ಲಿ ತ್ಯಾಗಕ್ಕೆ ಸಿದ್ಧರಾಗಬೇಕು, ಪ್ರತ್ಯೇಕ ನಾಯಕತ್ವಮೊಂದಿಗೆ ಬಿ.ಜೆ.ಪಿ. ನಿಲವನ್ನು ಒಪ್ಪಬೇಕು ಎಂದರು ಬೆಂಗಳೂರಿನಲ್ಲಿ. "1993 ರ ಹಿಂದೂ 1947 ರ ಹಿಂದೂ ಅಲ್ಲ, ಇದನ್ನು ಮುಸ್ಲಿಮರು, ಅವರ ನಾಯಕರು ಅರಿಯಬೇಕು. ಇದು ಅವರನ್ನು ಎಲ್ಲಿಗೆ ಒಯ್ಯುತ್ತದೆ ಎಂದು ತಿಳಿಯಬೇಕು." ಎಂದು ಸಲಹೆ ನೀಡಿದ್ದಾರಂತೆ ವಿ.ಹೆಚ್.ಪಿ. ಅಧ್ಯಕ್ಷ ಸಿಂಘಾಲ್. 'ಮುಸ್ಲಿಮರು ಸರಿಯಾಗಿ ವರ್ತಿಸುವುದನ್ನು ಕಲಿಯಬೇಕು. ಇಲ್ಲದಿದ್ದರೆ ಅವರು ಕಷ್ಟ ಅನುಭವಿಸುತ್ತಾರೆ' ಎಂದಿದ್ದಾರೆ. ಮುಂಬೈಯಲ್ಲಿ ಶಿವಸೇನೆ ಬಾಳ್‌ಠಾಕ್ರೆ.

ಈ ನಾಲ್ಕು ಹೇಳಿಕೆಗಳಲ್ಲಿ ನಿಮಗೆ ಬೇರೆ ಬೇರೆ ದನಿ ಕೇಳಿಸುತ್ತಿದೆಯೇ ಅಥವಾ ಒಂದೇ ದನಿಯ ಬೇರೆ ಬೇರೆ ಸ್ವರ ಕೇಳಿಸುತ್ತಿದೆಯೇ ?

ಫೆ. 20 ರಂದು ಕೃಷಿಕೂಲಿಕಾರರ ಪ್ರಪ್ರಥಮ ರ್‍ಯಾಲಿ

ಇಂದು ದೇಶದಲ್ಲಿಯೇ ಅತ್ಯಂತ ಹೆಚ್ಚು ಕಷ್ಟಗಳನ್ನು ಅನುಭವಿಸುತ್ತಿರುವ, ಬೆಲೆ ಏರಿಕೆಯಿಂದ, ರೇಷನ್ ವ್ಯವಸ್ಥೆಯ ಕಡಿತದಿಂದ ಅತ್ಯಂತ ಹೆಚ್ಚಿನ ತೊಂದರೆಗೆ ಒಳಗಾಗಿರುವ ಕೃಷಿಕೂಲಿಕಾರರನ್ನು ಕೋಮುಗಲಭೆಗಳಿಂದ ಮುಂದೆ ಇತರ ನಗರಗಳಲ್ಲಿ ಹಳ್ಳಿಗೀಡಾಗಿರುವ ತಮ್ಮ ಬದುಕಿನ ಬವಣೆಗಳನ್ನು ನೀಗಿಸಿಕೊಳ್ಳಲು ಹೋರಾಟದ ಹಾದಿ ಹಿಡಿದಿದ್ದಾರೆ. ಫೆ 20 ರಂದು ಬೆಂಗಳೂರಿನಲ್ಲಿ ರ್‍ಯಾಲಿನಡೆಸಿ ಸರ್ಕಾರಕ್ಕೆ ಪ್ರತಿಭಟನೆ ಸೂಚಿಸಲು ಹಾಗೂ ಆಹಾರ ನಾಗರಿಕ ಸರಬರಾಜು ನಿರ್ದೇಶನಾಲಯದ ಮುಂದೆ ಧರಣಿ ಸತ್ಯಾಗ್ರಹ ನಡೆಸಲು ನಿರ್ಧರಿಸಿದ್ದಾರೆ. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ನಡೆಯಲಿರುವ ಈ ಕಾರ್ಯಕ್ರಮ ಕರ್ನಾಟಕದಲ್ಲಿ ಕೃಷಿ ಕೂಲಿಕಾರರನ್ನು ಸ್ವತಂತ್ರವಾಗಿ ಸಂಘಟಿಸಿ ಬಾಯಿಲ್ಲದವರಿಗೆ ದನಿ ನೀಡುವ ಪ್ರಯತ್ನ ಒಂದು ಪ್ರಮುಖ ಹೆಜ್ಜೆಯಾಗಲಿದೆ ಎಂದು ಕೃಷಿಕೂಲಿಕಾರರ ಸಂಘದ ಕಾರ್ಯಾಧ್ಯಕ್ಷ ಕಾಂ. ಜಿ.ಎನ್. ನಾಗರಾಜ್ ಹಾಗೂ ಪ್ರಧಾನ ಕಾರ್ಯದರ್ಶಿ ಪಿ. ಜಗನ್ನಾಥ್ ತಿಳಿಸಿದ್ದಾರೆ.

ಇತ್ತೀಚೆಗೆ ಬೆಂಗಳೂರು ಹತ್ತಿರದ ಆವಲಹಳ್ಳಿಯಲ್ಲಿ ಸಭೆ ಸೇರಿದ್ದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ವಿಸ್ತೃತ ರಾಜ್ಯ ಸಮಿತಿ ಈ ನಿರ್ಧಾರವನ್ನು ಕೈಗೊಂಡಿತು. ಈ ರಾಜ್ಯ ಸಮಿತಿ ಸಭೆಯಲ್ಲಿ 35 ಜನ ಆಹ್ವಾನಿತರು ಭಾಗವಹಿಸಿದ್ದರು.

ರೇಷನ್ ವಸ್ತುಗಳ ಬೆಲೆಏರಿಕೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ನಾಶ ಮಾಡುವ ಕೇಂದ್ರ ಸರಕಾರದ ದುಷ್ಟ ಕ್ರಮ, ಅದಕ್ಕಾಗಿ ಐಎಂಎಫ್ ಮತ್ತು ಗ್ಯಾಟ್ ನಿರ್ದೇಶಕ ಡಂಕೆಲ್‌ನ ಒತ್ತಡಗಳ ವಿರುದ್ಧ ರೇಷನ್ ವ್ಯವಸ್ಥೆಯಲ್ಲಿ ಹಳ್ಳಿ ಪಟ್ಟಣಗಳ ನಡುವೆ ಇರುವ ಅಪಾರ ವ್ಯತ್ಯಾಸದ ವಿರುದ್ಧ ಕೃಷಿ ಕೂಲಿಕಾರರು ಧ್ವನಿ ಎತ್ತಲಿದ್ದಾರೆ.

ಕೃಷಿ ಕೂಲಿಕಾರರಿಗೆ ಪ್ರಥಮ ಅಧ್ಯಯನ ಶಿಬಿರ

ಕರ್ನಾಟಕದ ಮೂಲೆ ಮೂಲೆಯ ಹಳ್ಳಿಗಳಿಂದ ಬಂದ ಕೃಷಿ ಕೂಲಿಕಾರರೇ ಆದ ಅಲ್ಲಲ್ಲಿಯ ಕೃಷಿ ಕೂಲಿಕಾರರ ನಡುವೆ ಕೆಲಸ ಮಾಡುತ್ತಿರುವ ಕೃಷಿ ಕೂಲಿಕಾರರ ನಾಯಕರಿಗೆ ಪ್ರಥಮ ಅಧ್ಯಯನ ಶಿಬಿರವೊಂದನ್ನು ಏರ್ಪಡಿಸಲಾಗಿತ್ತು.

ಈ ಅಧ್ಯಯನ ಶಿಬಿರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರರಾವ್‌ರವರು ಕೃಷಿ ಕೂಲಿಕಾರರ ಸಂಘವನ್ನು ಕಟ್ಟುವ ಅವಶ್ಯಕತೆಗಳು, ಕೃಷಿ ಕೂಲಿಕಾರರ ಬಡ ರೈತರ ಹೋರಾಟದ ಇತಿಹಾಸ, ಕೋಮುವಾದದ ಪರಿಣಾಮ ಇವುಗಳ ಬಗ್ಗೆ ವಿವರಿಸಿದರು. ಕೃಷಿ ಕೂಲಿಕಾರರ ಸಂಘದ ಕಾರ್ಯಾಧ್ಯಕ್ಷ ಕಾಂ.ಜಿ.ಎನ್.ನಾಗರಾಜ್. ಕೋಮುವಾದದ ಹುಟ್ಟು, ಬೆಳವಣಿಗೆ ಇಂದ ಕೃಷಿ ಕೂಲಿಕಾರರ ಬದುಕನ್ನು-ಇಡೀ ದೇಶವನ್ನು ಆವರಿಸಿರುವ ಬಗೆ ಅದರ ವಿರುದ್ಧ ಹೋರಾಟದ ಅಗತ್ಯವನ್ನು ಹಾಗೂ ಕರ್ನಾಟಕದಲ್ಲಿ ಕೃಷಿ ಕೂಲಿಕಾರರ ಪರಿಸ್ಥಿತಿಯನ್ನು ಕುರಿತು ತಿಳಿ ಹೇಳಿದರು. ಕೃಷಿ ಕೂಲಿಕಾರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ.ಪಿ. ಜಗನ್ನಾಥ್ ಕೃಷಿ ಕೂಲಿಕಾರ ಸಂಘವನ್ನು ಬೆಳೆಸುವ ಬಗೆ, ಸದಸ್ಯತ್ವ, ಘಟಕಗಳನ್ನು ಸ್ಥಾಪಿಸುವುದು ಈ ಬಗ್ಗೆ 20,000 ಸದಸ್ಯತ್ವವನ್ನು ಸಂಗ್ರಹಿಸುವುದರ ಬಗ್ಗೆ ಉಪನ್ಯಾಸ ನೀಡಿದರು. ಈ ಶಾಲೆಗೆ ಸಿಐಟಿಯು ಅಧ್ಯಕ್ಷ ಕಾಂ.ಸೂರ್ಯನಾರಾಯಣರಾವ್‌ರವರು ಆಗಮಿಸಿ ಶುಭ ಕೋರಿದರು. ತಾವು ಜೋಡಿದಾರ ಪದ್ಧತಿಯ ವಿರುದ್ಧ ನಡೆಸಿದ ಹೋರಾಟದ ಅನುಭವವನ್ನು ಹಂಚಿಕೊಂಡು ಕೃಷಿಕೂಲಿಕಾರರನ್ನು ಸಂಘಟಿಸುವ ಅಗತ್ಯವನ್ನು ಪ್ರತಿಪಾದಿಸಿದರು.

ಈ ಅಧ್ಯಯನ ಶಿಬಿರವು ಆವಲಹಳ್ಳಿಯ ಶ್ರೀ ನಾರಾಯಣ್ ಹಾಗೂ ರಾಜೇಶ್ವರಿ ಎಂಬ ಹಿತೈಷಿಗಳ ಮನೆಯಲ್ಲಿ ನಡೆಯಿತು. ಈ ಕುಟುಂಬದವರಿಗೆಲ್ಲಾ ಕೃಷಿ ಕೂಲಿಕಾರ ಸಂಘದ ರಾಜ್ಯ ಸಮಿತಿ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತದೆ.

ತೆಳುಬಣ್ಣದ ಕಾವಿ ಪಡೆಯಾಗುತ್ತಿದೆ ....

..........ಪುಟ 1ರಿಂದ


ಅಪಾಯದಲ್ಲಿರುವಾಗ ಅಧಿಕಾರದಿಂದ ಭ್ರಷ್ಟಗೊಂಡ ಈ ಜನ ಎಲುಬಿಲ್ಲದವರಂತಿದ್ದಾರೆ ಎಂದು ಕಟುವಾಗಿ ಟೀಕಿಸಿದ್ದಾರೆ. ಆದರೆ ಇಂತಹ ಖೋಟಾ ಹಿಂದೂವಾದಿಗಳು ಲೂಟಿಯಲ್ಲಿ ತೊಡಗಿರುವಾಗ ತಾನು ಇಂತಹ ನಿಲುವು ತಳೆದು ಅಧಿಕಾರಕ್ಕೆ ಅಂಟಿಕೊಂಡಿರಬಲ್ಲೆ ಎಂದು ಕಾಂಗ್ರೆಸ್(ಐ) ನಂಬಿದೆಯೇ? ಕೆಲವು ಕಸರತ್ತು ಮಾಡಿ ಬದುಕಿಕೊಳ್ಳಬಹುದು ಎಂದು ಭಾವಿಸಿದೆಯೇ? ಕೇಂದ್ರಮಂತ್ರಿಮಂಡಲವನ್ನು ಪುನರ್ರಚಿಸಿ ಯಾರನ್ನೂ ಅವರು ಮೋಸ ಮಾಡಲು ಸಾಧ್ಯವಿಲ್ಲ. ಇದರಿಂದ ಹತ್ತಾರು ಇಲಾಖೆಗಳನ್ನು ತನ್ನ ಕೈಯಲ್ಲಿಟ್ಟುಕೊಂಡದ್ದರಿಂದ ಪ್ರಧಾನಮಂತ್ರಿಗಳ ಮೇಜಿನ ಮೇಲೆ ರಾಶಿ ಬಿದ್ದಿದ್ದ ಕೆಲವು ಫೈಲುಗಳು ಚಲಿಸಲಾರಂಭಿಸಬಹುದೇನೋ, ಆದರೆ ದೇಶ ಉತ್ತಮ ಭವಿಷ್ಯದತ್ತ ಚಲಿಸಬಲ್ಲುದೆ? ನರಸಿಂಹರಾಯರ ದೂರದೃಷ್ಟಿಯಲ್ಲಿದ್ದ ನಿಲುವಿನಿಂದಂತೂ ಖಂಡಿತಾ ಸಾಧ್ಯವಿಲ್ಲ ಎಂದು ಸುರ್ಜಿತ್ ಖೇದದಿಂದ ಹೇಳುತ್ತಾರೆ.

ಕಾಂಗ್ರೆಸ್(ಐ) ಈಗ ಕೇವಲ ಮತಗಳ ಲೆಕ್ಕಾಚಾರದಿಂದಲೇ ಯೋಚಿಸುತ್ತಿದೆ ಎಂಬುದು ಸ್ಪಷ್ಟ. ಕೋಮುಶಕ್ತಿಗಳೆದುರು ಇಂತಹ ನಾಚಿಕೆಗೆಟ್ಟ ಶರಣಾಗತಿಯಿಂದ ಅದು ಪಡೆಯುವುದಕ್ಕಿಂತ ಕಳೆದುಕೊಳ್ಳುವುದೇ ಹೆಚ್ಚು. ಕೋಮುವಾದೀ ಮತ ಕಾಂಗ್ರೆಸ್(ಐ)ಗೆ ಬರುವುದಿಲ್ಲ, ಬಿಜೆಪಿಗೆ ಹೋಗುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಅಲ್ಪಸಂಖ್ಯಾತರಲ್ಲಿ ಹೊಸ ವಿಶ್ವಾಸ ಮೂಡಿಸಬೇಕು

ಅಲ್ಪಸಂಖ್ಯಾತ ಜನಗಳು ಸಂಪೂರ್ಣ ಹತಾಶೆ, ಭಯದಿಂದ ಕೂಡಿರುವ ಸಂದರ್ಭವನ್ನು ಮುಸ್ಲಿಂ ಮೂಲಭೂತವಾದಿಗಳು ಸಂಪೂರ್ಣ ಬಳಸಿಕೊಳ್ಳಲು ಉದ್ಯುಕ್ತರಾಗಿದ್ದಾರೆ. ಹೀಗಾದರೆ ಹಿಂದೂ ಕೋಮುವಾದಿಗಳ ಬಲ ಹೆಚ್ಚಿಸಿದಂತೆಯೇ ಆದ್ದರಿಂದ ತಮ್ಮ ಭದ್ರತೆಯಿರುವುದು ಇಂತಹ ಮೂಲಭೂತವಾದಿಗಳ ಹಿಂದೆ ಹೋಗುವುದರಿಂದ ಅಲ್ಲ, ಬದಲಿಗೆ ಜಾತ್ಯಾತೀತ ರಾಷ್ಟ್ರೀಯ ಆಂದೋಲನವನ್ನು ಸೇರಿಕೊಳ್ಳುವುದರಿಂದ ಮಾತ್ರ ಎಂಬುದನ್ನು ಮುಸ್ಲಿಂ ಜನತೆ ಅರಿಯಬೇಕು ಎಂಬ ಸುರ್ಜಿತ್ ಹೇಳಿದ್ದಾರೆ.

ಇಂತಹ ಗೊಂದಲದ, ಕೋಮುವಾದಿಗಳ ಫ್ಯಾಸಿಸ್ಟ್ ವಿಧಾನಗಳನ್ನು ಬಳಸಿ ಸಾವಿನ ತಾಂಡವ ನಡೆಸುತ್ತಿರುವಾಗ ಎಡ ಮತ್ತು ಜಾತ್ಯಾತೀತ ಶಕ್ತಿಗಳು ಏಕಮಾತ್ರ ಆಶಾಕಿರಣದಂತೆ ಪ್ರಯತ್ನಶೀಲರಾಗಿದ್ದಾರೆ. ಈ ಶಕ್ತಿಗಳ ಆಂದೋಲನಕ್ಕೆ ದೊರೆತಿರುವ ಜನಸ್ಪಂದನ ನೋಡಿದರೆ ಈ ಹೋರಾಟ ಹೊಸದೊಂದು ಘಟ್ಟ ತಲುಪಿದೆ, ಜನಗಳ ನಿಜವಾದ ದನಿ ಮೊಳಗಲಾರಂಭಿಸಿದೆ ಎಂಬುದು ಕಾಣಬರಲಾರಂಭಿಸಿದೆ. ಪಶ್ಚಿಮ ಬಂಗಾಳ, ಕೇರಳದಂತಹ ಎಡ ಪ್ರಭಾವದ ಪ್ರದೇಶಗಳಲ್ಲಷ್ಟೇ ಅಲ್ಲ, ಬಿಹಾರ, ಪೂರ್ವ ಯುಪಿಯಂತ ಕಡೆಗಳಲ್ಲೂ ನಡೆದ ಬೃಹತ್ ರ್‍ಯಾಲಿಗಳು, ಸಹಿ ಸಂಗ್ರಹಣಾ ಚಳುವಳಿಯ ಮೂಲಕ ಮೂಡಿಬರುತ್ತಿರುವ ಜಾಗೃತಿ ಇವೆಲ್ಲಾ ಅಯೋಧ್ಯೆಯ ಘಟನೆಗಳಿಂದ ನೊಂದಿರುವ, ನಂತರದ ಬೆಳವಣಿಗೆಗಳಿಂದ ಹತಾಶರಾಗಿರುವ, ಭಯಭೀತರಾಗಿರುವ ಅಲ್ಪಸಂಖ್ಯಾಕ ಜನಸಮೂಹಗಳಲ್ಲಿ ಹೊಸ ವಿಶ್ವಾಸ ಮೂಡಿಸಬೇಕು. ಜಾತ್ಯಾತೀತತೆ ಹಾಗೂ ರಾಷ್ಟ್ರೀಯ ಏಕತೆಯ ಈ ಆಂದೋಲನದ ಏಕತೆಯಿಂದು ಅಲ್ಪಸಂಖ್ಯಾತರ ಭಯ ಹತಾಶೆಗಳ ದುರ್ಲಾಭ ಪಡೆಯ ಬಯಸುತ್ತಿರುವ ಮೂಲಭೂತವಾದಿಗಳೂ ಮೂಲೆಗುಂಪಾಗಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಕರೆ ನೀಡಿದ್ದಾರೆ.



ಕೆಂಪು, ಹಸಿರು ಬಾವುಟಗಳು ಕೋಮು ಸೌಹಾರ್ದದ ದಾರಿ ತೋರಿದ ಪಾಟ್ನಾ ರ್‍ಯಾಲಿಯಲ್ಲಿ....

ಕಲ್ಯಾಣ್‌ಸಿಂಗ್ ಸರಕಾರ ಲಕ್ಷಾಂತರ ಕರಸೇವಕರನ್ನು ತರಲು ವ್ಯವಸ್ಥೆಮಾಡಿತ್ತು. ಅವರು ಬಹಿರಂಗವಾಗಿಯೇ ಕಾನೂನಿನ ಉಲ್ಲಂಘನೆ ಮಾಡಿದರೂ ಪೋಲೀಸರು ಗುಂಡು ಹಾರಿಸಬಾರದು ಎಂದು ಆಜ್ಞೆಮಾಡಿದ್ದರಂತೆ. ಒಂದು ದೇವಸ್ಥಾನವನ್ನು ಕಿಡಿಗೇಡಿಗಳು ಇದೇ ರೀತಿ ಧ್ವಂಸ ಮಾಡಲು ಪ್ರಯತ್ನಿಸಿದ್ದರೆ ಆಗಲೂ ಕಲ್ಯಾಣ್‌ಸಿಂಗ್ ಇಂತಹ ನಿಲುವು ತಳೆಯುತ್ತಿದ್ದರೇ!

- ಹರ್ಕಿಶನ್‌ಸಿಂಗ್ ಸುರ್ಜಿತ್
ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ

ಬಿಹಾರದ ಜನತೆ, ಲಲ್ಲೂಪ್ರಸಾದ್‌ಯಾದವ್ ದೇಶವನ್ನೂ ಪೀಡಿಸುತ್ತಿರುವ ಕೋಮುವಾದವನ್ನು ಎದುರಿಸುವುದು ಹೇಗೆ ಎಂದು ತೋರಿಸಿಕೊಟ್ಟಿದ್ದಾರೆ. ಕಾಂಗ್ರೆಸ್ (ಐ) ಮಾತ್ರ ಇನ್ನೂ ಮಾತಾಡುತ್ತಲೇ ಇದೆ. ಅವರಿಗೆ ಈ ರೀತಿಯ ದಾರಿ ತೋರುವುದು ಸಾಧ್ಯವಿಲ್ಲ...

80 ಶೇಕಡಾ ಜನ ಹೊಸ ಆರ್ಥಿಕ ನೀತಿಗಳಿಂದ ಕಂಗಾಲಾಗಿದ್ದಾರೆ. ಅವರು ಈ ಮೂಲಭೂತ ಪ್ರಶ್ನೆಗಳ ಮೇಲೆ ಹೋರಾಡಲು ಸಾಧ್ಯವಾಗಬೇಕಾದರೆ ಕೋಮುವಾದದ ಕ್ಯಾನ್ಸರನ್ನು ಹೋಗಲಾಡಿಸಬೇಕಾಗುತ್ತದೆ.

-ಜ್ಯೋತಿಬಸು
ಪಶ್ಚಿಮಬಂಗಾಳದ ಮುಖ್ಯಮಂತ್ರಿ

ಎಲ್ಲಾ ರಂಗಗಳಲ್ಲಿ ಬಿಹಾರ 'ಜೀರೋ' ಎಂದು ಇದುವರೆಗೆ ಪರಿಗಣಿಸಲಾಗಿತ್ತು. ಈಗ ಕೋಮುಗಳ ನಡುವೆ ಸದ್ಭಾವನೆ ಕಾಪಾಡಿಕೊಳ್ಳುವಲ್ಲಿ ಬಿಹಾರ 'ಹೀರೋ' ಎಂದು ನಾವು ತೋರಿಸಿಕೊಟ್ಟಿದ್ದೇವೆ.

-ಲಲ್ಲೂ ಪ್ರಸಾದ್ ಯಾದವ್
ಬಿಹಾರದ ಮುಖ್ಯಮಂತ್ರಿ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಾನಪ್ಪ ಗಾರ್ಡನ್, ಸಂಪಂಗಿರಾಮನಗರ, ಬೆಂಗಳೂರು 560 002
ಸಂಪಾದಕರು : ಪಿ.ರಾಮಚಂದ್ರರಾವ್